ಮಹಾತ್ಮರ ಮನೋರಂಗ
ಅನುವಾದಕರು:
ಶ್ರೀ. ರಂ. ರಾ. ದಿವಾಕರ
ಜೀವನದ ವಿವಿಧ ಸಮಸ್ಯೆಗಳ ಬಗ್ಗೆ ಗಾಂಧೀಜಿಯ ವಿಚಾರಗಳನ್ನು ಅವರ ಭಾಷಣ ಲೇಖನಗಳಿಂದಲೇ ಆಯ್ದು, ಸಂಗ್ರಹಿಸಿದ ಪುಸ್ತಕ.
೩೦೪ ಪುಟ, ಬೆಲೆ: ೪-೮-೦
ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ಬೆಲೆ: ಎರಡು ಆಣೆ

ಕರ್ಮವೀರ

ವಚನಶಾಸ್ತ್ರ ರಹಸ್ಯ
ಲೇ: ಶ್ರೀ. ರಂ. ರಾ. ದಿವಾಕರ
ಕರ್ನಾಟಕದ ಉಪನಿಷತ್ತುಗಳೆನಿಸಿದ ಶಿವಶರಣ ವಚನಗಳ ಬಗ್ಗೆ ವಿಚಾರ ಪರಿಪ್ಲುತ ಹಾಗು ಪಾಂಡಿತ್ಯ ಪೂರ್ಣ ವಿವೇಚನೆ.
ಬೆಲೆ: ೫ ರೂಪಾಯಿ
ಅಧ್ಯಾತ್ಮ ಕಾರ್ಯಾಲಯ ಹುಬ್ಬಳ್ಳಿ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.

)——ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ——(

Editor
H. R. Purohit, M. A.

—(ಸಂಪುಟ ೧೯)— ಹುಬ್ಬಳ್ಳಿ ಸೋಮವಾರ ತಾರೀಖು ೨೯—೯—೧೯೪೭ —(ಸಂಚಿಕೆ ೨೫)—

ಗಾಂಧೀಜಿಯ ಕನಸಿನ ಆದರ್ಶ ಹಿಂದುಸ್ತಾನ

ಉತ್ಪಾದನ ಸಾಧನಗಳ ವಿಕೇಂದ್ರೀಕರಣ-ಐಶ್ವರ್ಯದ ಸಮ-ಭೋಗ—ಭೌತಿಕ ಮತ್ತು ಆಧ್ಯಾತ್ಮಿಕ ಉನ್ನತಿ—ವಿಶ್ವೋದ್ಧಾರ

ಪ್ರಜಾಸತ್ತಾತ್ಮಕ ಸಮಾಜದ ನಿರ್ಮಾಣಕ್ಕೆ ಮೊಟ್ಟಮೊದಲ ಆವಶ್ಯಕತೆಯೆಂದರೆ ರಾಜಕೀಯ ಸ್ವಾತಂತ್ರ್ಯ. ಆದುದರಿಂದ ಪ್ರಥಮತಃ ಕಾಂಗ್ರೆಸ್ಸು ಈ ವರೆಗೆ ಸರ್ವಶಕ್ತಿಗಳನ್ನೂ ಸಂಘಟಿಸಿ ಅವುಗಳನ್ನು ಈ ಧ್ಯೇಯದ ಆಧಾರದ ಮೇಲೆ ಕೇಂದ್ರೀಕರಿಸಿತು. ಸ್ವಾತಂತ್ರ್ಯವನ್ನು ಗೆಲ್ಲುವ ವರೆಗೆ ಪರಚಕ್ರಕ್ಕೆದುರಾಗಿ ನಿಲ್ಲಿಸಿದ ದಂಡನ್ನು ಗೊಂದಲಕ್ಕೀಡುಮಾಡಲು ಆರ್ಥಿಕ ಮತ್ತು ಸಾಮಾಜಿಕ ವಿಷಯಗಳಲ್ಲಿ ಭಿನ್ನಾಭಿಪ್ರಾಯಗಳುಳ್ಳ ಯಾವ ಗುಂಪಿಗೂ ಅವಕಾಶ ಕೊಡಲಿಲ್ಲ. ಆದರೆ ಈ ರಾಜಕೀಯ ಸಮರದ ಜೊತೆ ಜೊತೆಗೆ ಹೊಸದೊಂದು ಸಾಮಾಜಿಕ ಉದ್ದೇಶದ ತಳಹದಿಯನ್ನು ಹಾಕಲಾಯಿತು.

ಗಾಂಧೀಜಿಯ ತಂತ್ರವಂಥದು. ವಿಘಟನೆಯಲ್ಲಿ ನಿರತವಾಗಿರುವಾಗಲೇ ಅದು ಸಂಘಟಿಸುತ್ತ ಹೋಗುತ್ತದೆ.

ಮೂಲಭೂತ ಹಕ್ಕುಗಳ ಮೇಲಿನ ಕರಾಚಿ ಠರಾವು, ಫೈಜಪುರದ ಒಕ್ಕಲತನದ ಕಾರ್ಯಕ್ರಮ, ೧೯೪೨ ರ "ಭಾರತದಿಂದ ತೊಲಗಿರಿ" ಎಂಬ ನಿರ್ಣಯ, ಪೂರಿತ್ತಿನ ಗೊತ್ತುವಳಿ ಮತ್ತು ೧೯೩೭ ಮತ್ತು ೪೬ ರ ಚುನಾವಣೆಯ ಘೋಷಣೆಗಳು ಮುಂತಾದವುಗಳಲ್ಲಿ ಮೇಲಿನ ಗುರಿಯು ಪ್ರಾಗತಿಕವಾಗಿ ರೂಪಿತವಾಗಿದೆ. ಈಗ ಈ ಗುರಿಯನ್ನಾಧರಿಸಿ ನಿರ್ದಿಷ್ಟ ರೂಪದ ಕಾರ್ಯಕ್ರಮವನ್ನು ಕೈಗೊಂಡು ಸಾಮಾಜಿಕ ಕ್ರಾಂತಿಗಾಗಿ ಹಿಂದಿನ ರಾಜಕೀಯ ಹೋರಾಟ ನಡೆಸಿದಾಗಿನ ನಿಷ್ಠೆಯಿಂದಲೇ ಈಗ ಪ್ರಸ್ತುತ ಹೋರಾಟವನ್ನು ಸಾಗಿಸುವುದು ಕಾಂಗ್ರೆಸ್ಸಿನ ಕರ್ತವ್ಯ.

ಶಾಂತಿ ಮಾರ್ಗ

ತನ್ನ ಮೇಲೆ ಕಾಂಗ್ರೆಸ್ಸು ಹೊರಿಸಿಕೊಳ್ಳುವ ಒಂದೇ ಒಂದು ಹೊಣೆಯೆಂದರೆ ಶಾಂತಿ ಮಾರ್ಗ ಗಮನ ಮತ್ತು ಪ್ರಜಾಸತ್ತಾತ್ಮಕ ಸಾಧನ ಪರಿಗ್ರಹ; ಇದರಲ್ಲಿ ಮುಷ್ಕರ ಹಾಗೂ ಸತ್ಯಾಗ್ರಹಗಳೂ ಸೇರಿವೆ. ಇದು ನಮ್ಮ ಅಹಿಂಸಾತಂತ್ರದ ಪರಂಪರಾರ್ಜಿತ. ಕಾಂಗ್ರೆಸ್ಸೀಗ ಅಧಿಕಾರಾರೂಢವಾಗಿರುವಾಗ ಇಂತಹ ಕ್ರಮಗಳ ಅಗತ್ಯವೆಲ್ಲಿಯದೆಂದು ಕೆಲವರು ಅರಿಯದೆ ಆಡುತ್ತಾರೆ. ಆದರೆ ಈ ಸಂದೇಹವು ಕಾಂಗ್ರೆಸ್ಸು ಯಾವಾಗಲೂ ಅಧಿಕಾರಸ್ಥಾನದಲ್ಲಿಯೇ ಉಳಿಯುವುದು ಮತ್ತು ಎಂದೂ ಪ್ರತಿಪಕ್ಷದ ಸ್ಥಾನಕ್ಕಿಳಿಯದು ಎಂಬ ನಂಬಿಗೆಯ ಮೇಲೆ ನಿಂತಿದೆ. ಇಂತಹ ನಂಬಿಗೆಯು ಪ್ರಜಾಸತ್ತೆಯ ಪ್ರತಿಯೋಗಿಯೇ ಸರಿ. ಕಾಂಗ್ರೆಸ್ಸು ಒಂದು ವೇಳೆ ಅಧಿಕಾರಸ್ಥಾನದಲ್ಲುಳಿಯದೆ ಹೋಗಲೂ ಬಹುದು ಎಂಬುದನ್ನಾಧರಿಸಿ ನಾವು ಉಕ್ತ ಧ್ಯೇಯಸಾಧನೆಗಾಗಿ ನಮ್ಮ ಧೋರಣವನ್ನೂ ಕಾರ್ಯವನ್ನೂ ಯೋಜಿಸಬೇಕು. ಇಡಿಯ ಸಮಾಜದ ಪುನರ್ರಚನೆಗೆ ಕೇವಲ ಸರಕಾರೀ ಆಡಳಿತಗಾರರ ಕೂಟ ಮತ್ತು ಶಾಸನಗಳು ಸಾಕಾಗಲಾರವು. ಸಮಾಜದ ಅತ್ಯಧಮ ವರ್ಗವನ್ನೂ ಅದರ ಪರಿಣಾಮಕತೆ ಮುಟ್ಟುವಂತೆ ಮಾಡಲು ಅತ್ಯಂತ ಬೃಹತ್ಪರಿಮಾಣದ ಸಾಮಾಜಿಕ ಚಳವಳವು ಯೋಜನೆಯ ಬೆಂಬಲಕ್ಕೆ ನಿಲ್ಲಬೇಕು.

ಸ್ವಾತಂತ್ರ್ಯಕ್ಕೆ ವಿಕೇಂದ್ರೀಕರಣ ಆವಶ್ಯಕ

ಸ್ವಾತಂತ್ರ್ಯ ಮತ್ತು ಸಮತೆಗಳ ಆಧಾರದ ಮೇಲೆ ನಿಂತ ಸಮಾಜವೊಂದನ್ನು ಸಾಧಿಸಬೇಕಾದರೆ ನಿರ್ದಿಷ್ಟವಾಗಿ ಯಾವ ಬಗೆಯ ಪರಿವರ್ತನವನ್ನು ಉಂಟುಮಾಡಬೇಕು? ಮೊಟ್ಟ ಮೊದಲು, ಬಂಡವಾಲಶಾಹಿಯ ಇಲ್ಲವೆ ಸಾಮ್ಯವಾದಶಾಹಿಯ ಹೆಸರಿನಲ್ಲಿ ಕೆಲವೇ ವ್ಯಕ್ತಿಗಳ ಕೈಯಲ್ಲಿ

ದಾರಿದ್ರ್ಯನಿವಾರಣೆ ಮತ್ತು ಸುರಕ್ಷಿತತೆಗಾಗಿ ಸ್ವಾತಂತ್ರ್ಯವನ್ನು ವಿನಿಮಯ ಮಾಡಬಹುದಾದ ಅಪಾಯಕರ ಪರಿಸ್ಥಿತಿ ಹಿಂದುಸ್ತಾನದಲ್ಲಿ ಕಾಣಬರುತ್ತಿದೆ. ಈ ಸರಕಾರೀ ಸಾಮ್ಯವಾದದಿಂದ ಅಪಹರಿಸಲ್ಪಡತಕ್ಕ ವ್ಯಕ್ತಿಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬೇಕಾದರೆ ವಿಕೇಂದ್ರೀಕರಣ ತತ್ವದಂತೆ ಚಿಕ್ಕ ಚಿಕ್ಕ ಸ್ವಯಂಪೂರ್ಣವಾದ ಆರ್ಥಿಕ ಗುಂಪುಗಳುಳ್ಳ ಸಮಾಜವನ್ನು ರಚಿಸಬೇಕು. ಇದು ಗಾಂಧೀಜಿಯ ದರ್ಶನ, ಕಾಂಗ್ರೆಸ್ಸಿನ ಧ್ಯೇಯ ಹೀಗೆ ವಿಕೇಂದ್ರೀಕರಣ ತತ್ವವನ್ನಾಧರಿಸಿದ ಸಾಮ್ಯಪದ್ಧತಿಯಿಂದ ಜಗತ್ತಿನ ಯುದ್ಧಪ್ರವೃತ್ತಿಯನ್ನು ತಡೆಗಟ್ಟಿ ಶಾಂತ, ಸಮೃದ್ಧ ವಿಶ್ವಮಂಡಲದ ನಿರ್ಮಿತಿಗಾಗಿ ಭಾರತವು ಅವಿಶ್ರಾಂತವಾಗಿ ಶ್ರಮಿಸುವುದು-ಎಂದು ಅ.ಭಾ.ಕಾಂ.ಕಮಿಟಿಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಂಕರರಾವ ದೇವರು ಅಭಿಪ್ರಾಯಪಡುತ್ತಾರೆ.

ಕೂಡವು. ಅಧಿಕಾರ, ಉತ್ಪಾದನ ಮತ್ತು ಸೊತ್ತುಗಳ ವಿಕೇಂದ್ರೀಕರಣದತ್ತ ನಾವು ನಮ್ಮ ಪರಿವರ್ತನ ಚಕ್ರವನ್ನು ತಿರುಗಿಸಬೇಕಾಗಿದೆ.

ಯಾವ ಆರ್ಥಿಕ ಪದ್ಧತಿಯಲ್ಲೇ ಆಗಲಿ, ಯಜಮಾನರಾಗಿ ಇಲ್ಲ. ವ್ಯವಸ್ಥಾಪಕರಾಗಿರುವ ಕೆಲವೊಂದು ಜನರ ಚಿಕ್ಕಕೂಟದ ಕೈಯಲ್ಲಿ ಐಶ್ವರ್ಯ ಅಡಕವಾಗಿದ್ದರೆ ಆ ಪ್ರದೇಶದ ಬಹುಜನರಿಗೆ ಸ್ವಾಭಿವೃದ್ಧಿಯ ಅವಕಾಶ ದೊರಕದಿರುವದಲ್ಲದೆ ದೇಹಧಾರಣೆಗೆ ಅತ್ಯವಶ್ಯವಾದ ದ್ರವ್ಯಗಳೂ ಸಿಗದಂತಾಗುವ ಸಂಭವವುಂಟು. ಅವರು ದಾಸರಾಗಿರಬೇಕಾಗುತ್ತದೆ. ಸರ್ವಶಕ್ತವಾದ ಅಧಿಕಾರಶಾಹಿಯ ಹಿಡಿತದಲ್ಲಿ ಐಶ್ವರ್ಯದ ಉತ್ಪಾದನವಷ್ಟೇ ಅಲ್ಲ ಅದರ ವಿತರಣಾಧಿಕಾರವಿದ್ದರೆ ಕೂಡ ಸಾರ್ವಜನಿಕರು ನಿಜವಾದ ಸ್ವಾತಂತ್ರ್ಯದಿಂದ ಬಾಳಲಾರರು. ಅಧಿಕಾರವು ಮಾನವನನ್ನು ವಂಚಕನನ್ನಾಗಿ ಮಾಡುತ್ತದೆ ಮತ್ತು ಅವನಿಗೆ ಕಾಟಿಲ್ಯವನ್ನು ಕಲಿಸುತ್ತದೆ; ಅಪ್ರತಿಹತಾಧಿಕಾರವು ಅಪ್ರತಿಹತವಾಗಿ ಮನುಷ್ಯನನ್ನು ಸಂಪೂರ್ಣ ಕಪಟಿಯನ್ನಾಗಿ ಪರಿವರ್ತಿಸುತ್ತದೆ. ಅಂತಹ ಪರಿಸ್ಥಿತಿಯಲ್ಲಿ ಜನಜಂಗುಳಿಯು ದಾಸೋಹವೆಂದು ಉಚ್ಚಾಧಿಕಾರಿಗಳು ಅದಕ್ಕರಿಯದಂತೆ ಮಾಡಿದ ಶಾಸನಗಳನ್ನು ಅಂಜಲಿಹಸ್ತದಿಂದ ಸ್ವೀಕರಿಸಬೇಕಾಗುತ್ತದೆ. ಈ ಎರಡೂ ಸಂದರ್ಭಗಳಲ್ಲಿ ಜನತೆಗೆ ನಿಜವಾದ ಸ್ವಾತಂತ್ರ್ಯದ ಅನುಭವ ಸಿಗಲಾರದು. ಆದುದರಿಂದ ಐಶ್ವರ್ಯ ಮತ್ತು ಅಧಿಕಾರಗಳ ಸಾಮ್ಯ-ಎಂದರೆ ವಿಕೇಂದ್ರೀಕರಣ-ಸ್ವಾತಂತ್ರ್ಯಕ್ಕೆ ಅನಿವಾರ್ಯವಾದ ಅವಶ್ಯಕತೆಯೆಂದು ಹೇಳಬಹುದು.

ಆರ್ಥಿಕ ವೈಷಮ್ಯ

ಸಾಮಾಜಿಕರಿಗಾಗಿ ಬಳಸದೆ ಕೇವಲ ವೈಯಕ್ತಿಕ ಲಾಭಕ್ಕಾಗಿ ಖಾಸಗಿ ವ್ಯಕ್ತಿಗಳು ಉತ್ಪಾದನ ಸಾಧನಗಳನ್ನು ಉಪಯೋಗಿಸುತ್ತಿರುವುದೇ ಇಂದಿನ ಆರ್ಥಿಕ ವೈಷಮ್ಯಕ್ಕೆ ಕಾರಣ. ಕಾರ್ಮಿಕ ಇಲ್ಲವೆ ಉತ್ಪಾದಕನ ಶ್ರಮದ ದುರುಪಯೋಗವನ್ನು ತಡೆಯಲು ಉತ್ಪಾದನ ಸಾಧನಗಳನ್ನು ರಾಷ್ಟ್ರೀಕರಿಸಬೇಕು-ಎಂದರೆ ಸರಕಾರ ಕೈಗೆ ತೆಗೆದುಕೊಳ್ಳಬೇಕು ಎಂದು ಹಲವರ ಸೂಚನೆಯಿದೆ. ಆದರೆ ಬೇರೆಯ ದೇಶಗಳಲ್ಲಿಯ ಅನುಭವ ತೆಗೆದುಕೊಂಡರೆ ಈ ಉಪಾಯವು ನಮ್ಮನ್ನು ಉಕ್ತ ಕಾರ್ಯದಲ್ಲಿ ಬಹಳ ದೂರ ಒಯ್ಯದೆಂಬುದು ತಿಳಿಯಬರುತ್ತದೆ. ಇಲ್ಲಿ ಯಾರು ಉತ್ಪಾದನ ಸಾಧನಗಳ ಒಡೆಯರಾಗಬೇಕೆಂಬುದಕ್ಕಿಂತ ಹೇಗೆ ಅವುಗಳ ಬಳಕೆಯಾಗಬೇಕೆಂಬುದೇ ಮುಖ್ಯವಾದ ಪ್ರಶ್ನೆ. ಸಮಾಜ ಹಾಗು ಸರಕಾರಗಳೆಂದರೆ ಒಂದೇ ಅಲ್ಲ; ಆದುದರಿಂದ ಉತ್ಪಾದನ ಸಾಧನಗಳು ಕೆಲವೇ ಸರಕಾರೀ ಅಧಿಕಾರಿಗಳ ಅಂಕೆಯಲ್ಲುಳಿದರೆ ಇಡಿಯ ಸಮಾಜವು ನಿಜವಾದ ಸ್ವಾತಂತ್ರ್ಯಾನುಭವದಿಂದ ಇನ್ನೂ ಬಹುದೂರ ಉಳಿಯುವಂತಾಗುವುದು.

ರಶಿಯದಲ್ಲಿ ಉತ್ಪಾದನ ಸಾಧನಗಳು ರಾಷ್ಟ್ರೀಕೃತವಾಗಿವೆ ಮತ್ತು ಭೂಮಿಯು ಸಂಯೋಜಿಸಲ್ಪಟ್ಟಿದೆ. ಆದರೆ ಸ್ಟಾಲಿನ್ನರೇ ಒಪ್ಪಿಕೊಂಡಂತೆ ಅವರು ಸಮಾಜವಾದದ ಪ್ರಥಮಾವಧಿಯನ್ನಷ್ಟೇ ಮುಟ್ಟಲು ಶಕ್ತರಾಗಿದ್ದಾರೆ. (ಅದರ ಸೂತ್ರ-"ಅವರವರ ಶಕ್ತ್ಯನುಸಾರ ಅವರವರಿಂದ, ಅವರವರ ಕೆಲಸಕ್ಕನುಗುಣವಾಗಿ ಅವರವರಿಗೆ). ಅವರು ಇನ್ನೂ ಪರಮಾವಧಿಯನ್ನು ಮುಟ್ಟಬೇಕಾಗಿದೆ (ಅದರ ಸೂತ್ರ-"ಅವರವರ ಶಕ್ತ್ಯನುಸಾರ ಅವರವರಿಂದ, ಅವರವರ ಅವಶ್ಯಕತೆಗನುಗುಣವಾಗಿ ಅವರವರಿಗೆ). ತನ್ನ ಧ್ಯೇಯವನ್ನು ಸಾಧಿಸಲು ರಶಿಯಕ್ಕಿರುವ ಅಡ್ಡಿಯೇನು? ಖಂಡಿತವಾಗಿಯೂ ಉತ್ಪಾದನ ಸಾಧನಗಳು ರಾಷ್ಟ್ರೀಕೃತವಾಗದಿರುವುದರಿಂದಲ್ಲ, ಸಂರಕ್ಷಣೆ, ಸುರಕ್ಷಿತತೆಗಳಿಗಾಗಿ ಅಲ್ಲ, ಉಳಿದ ದೇಶಗಳು ಸಾಮ್ಯವಾದಿಗಳಲ್ಲೆಂಬ ಕಾರಣದಿಂದಲ್ಲ.

ನೀತಿಯ ನೆಲಗಟ್ಟಿಲ್ಲ

ರಶಿಯದಲ್ಲಿ ಕಾಯದೆಯ ಪ್ರಕಾರ ಉತ್ಪಾದನ ಸಾಧನಗಳ ಒಡೆತನವು ಸಮಾಜಕ್ಕೆ ಸೇರಿದೆ ಎಂದು ಧಾರಾಳವಾಗಿ ಹೇಳಬಹುದು; ಐಶ್ವರ್ಯವಿತರಣವು ಇನ್ನೂ ಕೆಲವೇ ಸರಕಾರೀ ನವಕರರ ಕೈಯಲ್ಲಿ ಉಳಿದಿದೆ. ಅವರು ಅಧಿಕಾರ ಐಶ್ವರ್ಯಗಳ ಲೋಭವನ್ನು ಬಿಟ್ಟಿಂತಿಲ್ಲ. ಹೀಗೆ ಸಾಮ್ಯತತ್ವದ ಆರ್ಥಿಕ ವ್ಯವಸ್ಥೆಗೆ ಅಗತ್ಯವಾದ ಎಲ್ಲ ಉಪಾದಾನ ಕಾರಣಗಳು ಇದ್ದರೂ ನೀತಿಯ ನೆಲಗಟ್ಟಿಲ್ಲದೆ-ಆರ್ಥಿಕ ಪದ್ಧತಿಯ ಬೆನ್ನಿಗೇ ಆಗಬೇಕಾದ ಹೃದಯಪರಿವರ್ತನವಿಲ್ಲದೆ ರಶಿಯದ ಪ್ರಗತಿಯು ಕುಂಠಿತವಾಗಿ ಅದು ಕೇವಲ ಕಮ್ಯುನಿಷ್ಟ ಸಮಾಜವಾಗಿ ಉಳಿದಿದೆ.

ಸ್ಟಾಲಿನರು ಹೇಳುವ ಸಮಾಜವಾದದ ಮೇಲ್ಮಟ್ಟವನ್ನು ಸಾಂಸ್ಕೃತಿಕ ಹಾಗೂ ಆಧ್ಯಾತ್ಮಿಕ ಮುಖವಾಗಿ ಮುಟ್ಟಬಹುದಾಗಿದೆಯಲ್ಲದೆ ಭೈತಿಕ ಮುಖದಿಂದಲ್ಲ. ಈ ಉದ್ದೇಶಸಾಧನೆಗಾಗಿ ಮನುಷ್ಯನು ಮುಖ್ಯವಾಗಿ ನೈತಿಕ ಮತ್ತು ಆಧ್ಯಾತ್ಮಿಕ ವ್ಯಕ್ತಿಯೆಂಬುದನ್ನೂ ಮನುಷ್ಯ ಮನುಷ್ಯರ ಹಾಗೂ ರಾಷ್ಟ್ರ ರಾಷ್ಟ್ರಗಳ ನಡುವಿನ ಸಂಬಂಧಗಳು ನೈತಿಕ ಮತ್ತು ಆಧ್ಯಾತ್ಮಿಕ ತಳಹದಿಯನ್ನು ಅವಲಂಬಿಸಿರಬೇಕೆಂಬುದನ್ನೂ ನಾವು ಒಪ್ಪಬೇಕಾಗುತ್ತದೆ.

ಆಧ್ಯಾತ್ಮಿಕವಾಗಿ ಮಾತ್ರ ಸಾಧ್ಯವಾದ ಮನುಷ್ಯಕುಲದೊಡನೆ ಐಕ್ಯವನ್ನು ಮನುಷ್ಯನು ಕಂಡುಕೊಂಡಲ್ಲದೆ ಅವನು ಸ್ವತಂತ್ರನೆನಿಸಲಾರನು. ಸಾಮ್ಯ ಮತ್ತು ಸ್ವಾತಂತ್ರ್ಯಗಳು ಆಧ್ಯಾತ್ಮಿಕ ಮೂಲ್ಯಗಳಲ್ಲದೆ ಲೌಕಿಕವಾದ ಬೆಲೆಗಳಲ್ಲ.

ಸುಖಜೀವನದ ಲೌಕಿಕ ಮಟ್ಟ

ಈ ಕ್ಷೇತ್ರದಲ್ಲಿ ಜಗತ್ತಿಗೆ ಭಾರತವು ಕೊಡಬಲ್ಲುದು ಬಹಳವಾಗಿದೆ. ಅದು ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಸಂಪತ್ತಿನಿಂದ ಸಮೃದ್ಧವಾಗಿದೆ ಮತ್ತು ಅದನ್ನು ಜಗತ್ತಿನೊಡನೆ ಹಂಚಿ ಅನುಭವಿಸಿದರೆ ಅದು ಭೌತಿಕ ಜೀವನವನ್ನಷ್ಟೇ ಅಲ್ಲದೆ ಮಾನವನ ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಜೀವನವನ್ನೂ ಸಮೃದ್ಧ ಮತ್ತು ಉದಾತ್ತವನ್ನಾಗಿ ಮಾಡಬಲ್ಲುದು. ಇದನ್ನು ಪಡೆಯಲು ಒಂದು ನಿಶ್ಚಿತ ಭೌತಿಕ ನೆಲೆ ಬೇಕೆಂಬುದೇನೋ ನಿಜ.

ಇದನ್ನು ಸಾಧಿಸಬೇಕಾದರೆ, ಅಧಿಕಾರ ಮತ್ತು ಉತ್ಪಾದನಗಳು ಕೆಲವೇ ಜನರ ಕೈಗಳಲ್ಲಿ ಯಾವ ಹೆಸರಿಂದ ಅಥವಾ ಯಾವ ರೂಪದಿಂದೇ ಆಗಲಿ ಕೇಂದ್ರೀಕೃತವಾಗುವುದನ್ನು ಅವಶ್ಯವಾಗಿ ತಪ್ಪಿಸಬೇಕು. ಉತ್ಪಾದನಸಾಧನಗಳನ್ನು ಮತ್ತು ವಿತರಣದ ವ್ಯವಸ್ಥೆ ಹಾಗೂ ಒಡೆಯತನಗಳನ್ನು ವಿಕೇಂದ್ರೀಕರಿಸುವುದರಿಂದ ಮಾತ್ರ ಇದು ಸಾಧ್ಯ.

ಬಂಡವಾಲಶಾಹಿಯಲ್ಲೇ ಆಗಲಿ, ಸಾಮ್ಯವಾದಿ ಪ್ರಭುತ್ವದಲ್ಲೇ ಆಗಲಿ, ಇಂದು ಆಧುನಿಕ ವಿಜ್ಞಾನ ಮತ್ತು ಯಂತ್ರವಿದ್ಯೆಗಳು ಬೃಹತ್ಪ್ರಮಾಣದಿಂದ ಕೈಗಾರಿಕೆ ಮತ್ತು ಉತ್ಪಾದನಗಳು ಕೇಂದ್ರೀಕೃತವಾಗುವುದನ್ನೇ ಎತ್ತಿ ಹಿಡಿಯುವ ಪ್ರವೃತ್ತಿ ಹಿಡಿದಿವೆ. ಕೆಲವಂಶದ ರಾಜಕೀಯ ಸ್ವಾತಂತ್ರ್ಯವಿದ್ದರೂ ಬಂಡವಾಲಪದ್ಧತಿಯಲ್ಲಿ ಈ ಕೇಂದ್ರೀಕರಣವು ಆರ್ಥಿಕ ಅಸ್ಥಿರತೆ ಹಾಗೂ ಅರಕ್ಷಿತತೆಗಳಲ್ಲಿ ಪರಿಣಮಿಸಿವೆ.

ಸ್ವಾತಂತ್ರ್ಯದ ಸ್ಥಿರೀಕರಣ

ಮೇಲೆ ಹೇಳಿದ ಕಾರಣದಿಂದ ಜನರು ಹೆಚ್ಚಾಗಿ ಬಡತನದಿಂದ ಸಂತ್ರಸ್ತರಾಗಿ, ಅರಕ್ಷಿತರಾಗಿ ಸ್ವಾತಂತ್ರ್ಯವನ್ನು ಸ್ವಾತಂತ್ರ್ಯಕ್ಕಾಗಿ ಮಾರಿಕೊಳ್ಳುತ್ತಾರೆ. ಸಾಮ್ಯವಾದಿ ಸರಕಾರದಲ್ಲಿ ಹಾಗೆ ನಡೆಯುತ್ತದೆ. ಅಲ್ಲಿ ಸರಕಾರವೊಂದೇ ಬಂಡವಾಲಿಗನಾಗಿ ಜನರಿಗೆ ಉದ್ಯೋಗ ಸುರಕ್ಷಿತತೆ ಹಾಗೂ ಸಮೃದ್ಧಿಗಳನ್ನು ಅವರ ಸ್ವಾತಂತ್ರ್ಯಕ್ಕೆ ಬದಲಾಗಿ ಕೊಡುತ್ತದೆ. ಆದರೆ ಮಾನವನು ಕೇವಲ ಅನ್ನದಿಂದ ಬದುಕಲಾರನು. ಅದು ಮೊದಲನೆಯದಾದರೂ ಆದಾದ ಬಳಿಕ ಅವನ ನೈತಿಕ ಹಾಗೂ ಮಾನಸಿಕ ಬೆಳವಣಿಗೆಗೆ ಅಗತ್ಯವಾದ ಸಂದರ್ಭ ಸಿಕ್ಕಬೇಕು. ಇದಕ್ಕೆ ಕೆಲಮಟ್ಟಿನ ವ್ಯಕ್ತಿಸ್ವಾತಂತ್ರ್ಯ ಅವಶ್ಯಕ— ಸ್ವಾತಂತ್ರ್ಯ ಮತ್ತು ಸಾಮ್ಯ ಅಗತ್ಯ. ಮೊದಲು ಸುರಕ್ಷಿತತೆ ಮಾನವನನ್ನು ತೃಪ್ತಿಪಡಿಸಬಹುದಾದರೂ ಕಡೆಯಲ್ಲಿ ಅದರ ಮೇಲೆ ದಂಗೆಯೆದ್ದು ಅವನು ಬೌದ್ಧಿಕ ಹಾಗೂ ನೈತಿಕ ಬೆಳವಣಿಗೆಗಾಗಿ ಹಾತೊರೆಯುವನು— ಸಣ್ಣದೊಂದು ಗುಂಪು ಸರಕಾರವೆಂಬ ಸನ್ಯಾಸ ಹೆಸರಿನಲ್ಲಿ ಉತ್ಪಾದನ ಸಾಧನಗಳನ್ನು ಐಶ್ವರ್ಯದ ವಿತರಣ ಹಾಗೂ ವಿನಿಮಯಗಳನ್ನೂ ನಿಯಂತ್ರಿಸುವುದನ್ನು ಸಹಿಸುತ್ತಲೆ ಆಗಬಹುದಲ್ಲಿ ಅಥವಾ ಸಮಾಜದ ಒಳಗಲು ವಿರುದ್ಧ ನಿಲ್ಲಲು ಯಾವ ಶಕ್ತಿಯೂ ಆಗದನ್ನು ದೆಂದು ಅರಿಯುವನು. ಕ್ರಮಶಃದಿಂದ.

ಪುಸ್ತಕ ಮತ್ತು ವಿಮರ್ಶೆ

ಅತಿಮಾನವ

ಅನುವಾದಕರು: ಶ್ರೀ. ದ. ಅ. ಕೆರೂರ ರವರು. ಪ್ರಕಾಶಕರು ಶ್ರೀ ಕಲಮನಾಸಿ ಗುರುರಾಯರು, ಸಂಜೀವನಿ ಪ್ರಕಾಶನ, ಹುಬ್ಬಳ್ಳಿ. ಪುಟಗಳು ೧೫೨; ಬೆಲೆ ರೂ. ೨.

ದ್ವಿತೀಯ ಜಾಗತಿಕ ಯುದ್ಧದಲ್ಲಿ ಜರ್ಮನಿಯ ಯುದ್ಧ ಕೈದಿಗಳಾಗಿದ್ದ ಜಾನ್ ಬರ್ನಾರ್ಡರು ಈ ಕಾದಂಬರಿಯ ಮೂಲ ಲೇಖಕರು. ಕಾದಂಬರಿಯಲ್ಲಿ ಬರುವ ಅರ್ನಾಲ್ಡ್ ಎಂಬವನು ಕಥಾನಾಯಕ. ಅವನು ಪುರುಷ ಸಂಸರ್ಗವಿಲ್ಲದೆ ಮಾನವ ಸ್ತ್ರೀಯಲ್ಲಿ ಹುಟ್ಟಿದ ಮಗ. ಅತಿಮಾನವರ ನಾಯಕನಾದ ಇವನ ವ್ಯಕ್ತಿತ್ವದ ದೈಹಿಕ ಬಲವನ್ನು ಕಥೆಯಲ್ಲಿ ಚನ್ನಾಗಿ ಚಿತ್ರಿಸಲಾಗಿದೆ. ಆದರೆ ಅವನ ಯಾವ ಸಾಹಸ ಕಾರ್ಯವೂ ಅಲೆಕ್ಸಾಂಡರ ಡೂಮಾಸನ ಪಾತ್ರಗಳಾದ ಏರಮಿಸ್, ಐಥಾಸ್ ಅರ್ತಗ್ನನ್ ಮತ್ತು ಪೋರ್ಥೋಸರ ಭೀಮಕಾರ್ಯಗಳ ಸರಿಸಮ ಬರಲಾರದು. ಅತಿಮಾನವ ಶಬ್ದದಿಂದ ಸೂಚಿತವಾದ ಭೀಮ ಕಲ್ಪನೆಯು ಉಕ್ತ ಅತಿ ಮಾನವನನ್ನೂ ಅವನ ಕಾರ್ಯಗಳನ್ನೂ ತಿಳಿದೊಡನೆ ಕುಸಿದು ಬೀಳುವದು. ಘಟೋತ್ಕಚ, ಹರ್ಕ್ಯುಲೀಸ್, ಭೀಮಸೇನ, ಅಂಜನೇಯರ ವ್ಯಕ್ತಿತ್ವದ ಮುಂದೆ ಈ ಅತಿಮಾನವನು ನೊರಜು ಮಾತ್ರ!

ಇನ್ನು ಕೇವಲ 'ಅತಿ ಮಾನವ' ಶಬ್ದದ ವ್ಯಾಖ್ಯೆಯನ್ನು ಗ್ರಂಥಕರ್ತರ ಆಶಯದಂತೆ ಪ್ರತಿಪಾದಿಸಬಲ್ಲ ಅವನ ಕ್ರೂರ ಕೃತ್ಯ, ನಿರ್ದಯತೆ, ಪಶುವೃತ್ತಿ, ರಾಕ್ಷಸೀ ಚಾಪಲ್ಯ ಇವಾವುವೂ ಶೇಕ್ಸಪಿಯರನ 'ಕಿಂಗ ಲಿಯರ್' ನಾಟಕದಲ್ಲಿ ಬರುವ ಗಾನರಿಲ್ ಮತ್ತು ರೀಗನ್ ಎಂಬ ಸ್ತ್ರೀಯರ ಕ್ರೌರ್ಯ ವರ್ಣನೆಗೆ ಸರಿದೂಗಲಾರವು. ಪುರಾಣದ ರಾಕ್ಷಸರೆದುರು ಈ ಅತಿಮಾನವನು ಕ್ರೂರತನದ ಮೆಚ್ಚನ್ನು ಪಡೆಯಲಾರನು.

ಒಟ್ಟಿನ ಮೇಲೆ ಇದೊಂದು ಸಾಮಾನ್ಯ ಕಾದಂಬರಿ. ಕೋಣಗಳಂತಹ ಮನುಷ್ಯರನ್ನು ಸೃಷ್ಟಿಸಹೋಗಿ ಸೃಷ್ಟಿಕರ್ತರೆ ಅವರ ದಾಳಿಗೆ ತುತ್ತಾಗಿ ನಾಶ ಹೊಂದಿದ ಕಥೆ ಇಲ್ಲಿದೆ. ಕಥಾಕೌತುಕ ತಕ್ಕಮಟ್ಟಿಗಿದೆ. ರಸಾವೇಶಗಳು ಕಡಿಮೆ. ರಸಭಾವಾದಿ ನಿರೂಪಣೆಯಿಲ್ಲ. ವರ್ಣನೆ ವಿರಳ. ವಿಜ್ಞಾನಿಗಳ ಮರ್ಮನೀತಿ, ಅರಸರ ಸ್ವಾರ್ಥ ಹಾಗೂ ಮಾತೃಹೃದಯದ ವಾತ್ಸಲ್ಯ ಮತ್ತು ಪುತ್ರಶೋಕದುರಿ ಇವು ಕೆಲಮಟ್ಟಿಗೆ ಚೆನ್ನಾಗಿ ವರ್ಣಿತವಾಗಿವೆ. ಇವೇ ಕಥೆಯಲ್ಲಿಯ ಮುಖ್ಯ ಗುಣಾಂಶಗಳು.

ಕಾದಂಬರಿಯಲ್ಲಿ ಒಂದು ನೀತಿ ಚೆನ್ನಾಗಿ ಸೂಚ್ಯವಾಗಿದೆ. ಅತಿಮಾನವ ಶಬ್ದವಾಚ್ಯರಾದ ಕಾಡು ಜನರೇ ಎಷ್ಟೋ ಪಾಲಿಗೆ ನಾಗರಿಕ ಮಾನವರಿಗಿಂತ ಉತ್ತಮರೆಂದು ಕಥೆಯೋದಿದ ನಂತರ ಎನ್ನಿಸುತ್ತದೆ. ಅವರ ಪ್ರಾಕೃತತತ್ವಕ್ಕಿದ್ದಷ್ಟು ದಯೆ ದಾಕ್ಷಿಣ್ಯ ಮೊದಲಾದ ಮಾನವಸಹಜ ಗುಣಗಳೂ ನಾಗರಿಕ ಸ್ವಾರ್ಥಿಗಳಲ್ಲಿಲ್ಲವೆಂದು ನಿದರ್ಶನಕ್ಕೆ ಬರುವಂತಿದೆ. ಶುದ್ಧ ಅನಾಗರಿಕತೆಯು 'ನಾಗರಿಕ ಅನಾಗರಿಕತೆಗಿಂತ' ಮೇಲೆನಿಸುತ್ತದೆ.

ಭಾಷಾಂತರಕಾರರು ಯಥಾಯೋಗ್ಯವಾಗಿ ತಮ್ಮ ಕಾರ್ಯ ನಿರ್ವಹಿಸಿದ್ದಾರೆ. ಮುದ್ರಾರಾಕ್ಷಸನ ಅಸಾಧಾರಣವಾದ ಭೈರವೀಲೀಲೆಯ ಕುಣಿತವನ್ನು ಕಾಣಬೇಕೆಂಬವರು ಈ ಪುಸ್ತಕದಲ್ಲಿ ಕಾಣಬಹುದು. ಇದರಿಂದ ಅನುವಾದಕರ ಭಾಷಾಜ್ಞಾನದ ಮೇಲೂ ಕೆಲವೊಮ್ಮೆ ಸಂಶಯಬರುವ ಸಂದರ್ಭ ಉಂಟಾಗಿದೆ. ಉದಾ:—'ಸ್ತ್ರೀಯತ್ವ' 'ಅಳುಪೂರ್ಣ' 'ಗಾಯಕ' 'ಭಕ್ಷ' ಇತ್ಯಾದಿ. ಆದರೆ ಅನುವಾದಕರ ಯೋಗ್ಯತೆ ಅಗಲೇ ಕನ್ನಡಿಗರಿಗೆ ಗೊತ್ತಿರುವದರಿಂದ ಈ ದೂರಿಗೆ ಅವರು ಗುರಿಯಾಗರು. ಅಚ್ಚು ಹಾಕಿಸಿದವರ ಮೇಲೆಯೆ ಅಪವಾದ ನಿಲ್ಲುತ್ತದೆ. ಪುಸ್ತಕವನ್ನು ಓದಿ ಆನಂದಿಸಬಹುದಾಗಿದೆ. ಅದಕ್ಕೆ ಕನ್ನಡಿಗರು ಪ್ರೋತ್ಸಾಹ ಕೊಡಬಹುದೆಂದು ಮುಕ್ತಕಂಠವಾಗಿ ಹೇಳಬಹುದು.

ಪಕ್ಷಿಕಾಶಿ

ಬರೆದವರು ಶ್ರೀ ಕುವೆಂಪು. ಪ್ರಕಾಶಕರು ಕಾವ್ಯಾಲಯ ಮೈಸೂರು, ಪುಟ ೯೧. ಬೆಲೆ ಸಾದಾ ಪ್ರತಿಗೆ ರೂ ೧॥, ಕ್ಯಾಲಿಕೊ ರೂ ೨॥.

"ಪಕ್ಷಿಕಾಶಿಯಲ್ಲಿ" 'ಅಗ್ನಿಜಲರಾಶಿ' ಯೆಂಬ ವಿಸಂಗತರೂಪಕ ಕಣ್ಣಿಗೆ ಬೀಳುತ್ತದೆ. ಶ್ರೇಷ್ಠ ...ಗಳಾಗುವ ಶಕ್ತಿಯುದ್ದರೂ ಪಾಠೀಕವಿಲ್ಲದಿದ್ದರೆ ... ಭ್ರಾಂತಿಪ್ರವಾದ ಮಾಡುತ್ತಾರೆ. ಹೊಸ ... ಅವರು ಕೃತ ಕವಿಗಳು ಸ್ವಚ್ಛಂದವಾಗಿ ... ಕಾಳಿದ ... ಮಾಡುವಂತೆ ರೂಪಕಾದ್ಯಲಂ... ಭಾವಿ, ... ಔಚಿತ್ಯದ ... ವಿರುದ್ಧವಾಗಿ ... ಆದರೆ ... ಪ್ರಕೃತಿ ... ಶಕ್ತಿಗಳಿಂದ ... "ದರ್ಶನ ..." ... ಹಿಮ್ಮೆಯುವದು ... ಈ ಜಗ

'ಹೃದಯ' ಶರತ್ಕಾಲ ಸೂರ್ಯೋದಯ', 'ಲಲಿತಾದ್ರಿ', 'ಬಾ ಫಾಲ್ಗುಣರವಿದರ್ಶನಕೆ', 'ಬರಲಿ ಜಗದ ಬಡತನಕ್ಕೆ ಜೀವ ದೈಸಿರಿ', 'ಮುಂಗಾರು', 'ವರ್ಷ ಭೈರವ' ಮುಂತಾದ ಸೊಗಸಾದ ಕವನಗಳನ್ನು ಬರೆದಿರುವುದು ಸ್ತುತ್ಯವಾಗಿದೆ. ತತ್ವಜ್ಞತೆಯ ನಾಳಿ ಹಿಡಿದ ಈ ಕವಿಗಳ ವರ್ಣನಾವೈಭವ 'ಶ್ರೀ ಪಾರ್ಥಿವ ಪುರುಷನಿಗೆ' ಎಂಬುದರಲ್ಲಿ ಚೆನ್ನಾಗಿ ಎದ್ದು ಕಾಣುತ್ತದೆ. 'ಲತಾನಟಿ' ಮುಂತಾದ ಕವನಗಳಲ್ಲಿ ಕವಿಯ ದುರಭ್ಯಾಸದ ಪ್ರಕಾರ ಸಂಸ್ಕೃತ ಕನ್ನಡ ಶಬ್ದಗಳ ಕರ್ಣಶೂಲ ಸಂಯೋಗ ಕಂಡು ಬರುತ್ತದೆ.

ಬೆಳ್ಳಿ ಚುಕ್ಕೆ (ಕೈಬರಹದ ಮಾಸಪತ್ರಿಕೆ)

ಈ 'ಬೆಳ್ಳಿ ಚುಕ್ಕೆ' ಯನ್ನು ಹುಬ್ಬಳ್ಳಿಯ 'ನ್ಯೂ ಇಂಗ್ಲೀಷ್ ಹೈಸ್ಕೂಲಿ' ನ ಬೆಳ್ಳಿ ಬಳಗದ ವಿದ್ಯಾರ್ಥಿಗಳು ಹೊರಡಿಸಿದ್ದಾರೆ. ಅದರ ಹೊಳಹು ಚೆನ್ನಾಗಿದೆ. ಅದರ ಮಾಟದ ಬಗ್ಗೆ ವಹಿಸಿದ ಶ್ರಮ ಅದರ ಕರ್ತರ ಉತ್ಸಾಹ ಕಲಾಪಕ್ಷಪಾತ, ರಸಿಕತೆಗಳನ್ನು ಪ್ರಕಾಶಿಸುತ್ತದೆ.

ಮೊದಲನೆಯದಾಗಿ, ಕವನ (ಮತ್ತು ಕಥೆ) ಗಳನ್ನು ಬರೆವ ಹವ್ಯಾಸಕ್ಕೆ ಒಂದೇ ಬಾರಿಗೆ ಬಿದ್ದರೆ ಮುಗ್ಗರಿಸುವುದು ಸಹಜವೆಂಬುದನ್ನು 'ನನ್ನನಲ್ಲೆ' ಯರುಹುತ್ತದೆ. ೨ ನೆಯದಾಗಿ, ಶಬ್ದಶುದ್ಧಿ, ವಾಕ್ಯಶುದ್ಧಿಗಳತ್ತ ಲಕ್ಷ್ಯ ಕೊಡದಿದ್ದರೆ ಸಂಪಾದಕೀಯದಲ್ಲಿಯ 'ಅಂದತೆ' ಮುಂತಾದ ರೂಪಗಳಂತೆ ಅಪರೂಪಗಳು ಬಹಳವಾಗಿ ಲೇಖಕರ ಬರಹ ರಸಿಕರ ತಿರಸ್ಕಾರಕ್ಕೆ ತುತ್ತಾಗುತ್ತದೆ. ಆದುದರಿಂದ ಪ್ರಾರಂಭದಶೆಯಲ್ಲಿರುವ ಹಾಗೂ ವರ್ಧಮಾನ ಲೇಖಕರು ತಪಸ್ಯೆಯಿಂದ ವ್ಯಾಕರಣ, ಛಂದಸ್ಸು, ಹಳೆಯ ಮತ್ತು ಹೊಸ ಪ್ರಯೋಗ ಇವುಗಳನ್ನು ಚೆನ್ನಾಗಿ ಪರಿಚಯ ಮಾಡಿಕೊಂಡು ಶೈಲಿಯಲ್ಲಿ ಕೈಪಳಗಿಸಿಕೊಳ್ಳಲು ವಿವಿಧ ರೀತಿಯ ಪ್ರಬಂಧಗಳನ್ನು (Essays) ಬರೆದು ಬಲ್ಲವರಿಗೆ ತೋರಿಸಿ ತಮ್ಮ ಶಕ್ತಿಯನ್ನು ವೃದ್ಧಿಪಡಿಸಿಕೊಳ್ಳುವುದು ಶ್ರೇಯಸ್ಕರ. 'ಬರೆವುದು ವಾಚಿಪುದ ಲಸದೆ ಪರಿಚಾರಿಪುದಲ್ಲಿಗಲ್ಲಿ ಬಲ್ಲನಿತರೊಳಂ' ಸರಸ ಪ್ರಸಂಗ ಗೈಯಲು ಸರಸಿಜಭವರಾಣಿಯೊಲಿಯದೇಂ ಮಾಣ್ದಪಳೇ?' ಎಂಬುದರ ಅರ್ಥವನ್ನು ಅರಗಿಸಿಕೊಂಡು ಅದರಂತೆ ನಡೆದರೆ ಲೇಖನಕಲೆ ಹಸ್ತಗತವಾಗದಿರದು ಎಂದು ಹೇಳಿ ಬೆಳ್ಳಿ ಬಳಗದವರ ಸತ್ಪ್ರಯತ್ನ ಮುಂದೆ ಮುಂದೆ ಸಾಗಿ ಯಶಸ್ವಿಯಾಗಲೆಂದು ಹೃತ್ಪೂರ್ವಕವಾಗಿ ಆಶಿಸುತ್ತೇವೆ.

ಕಾಲಯಾನ

ಬರೆದವರು "ಭಾರತೀಸುತ", ಪ್ರಕಾಶಕರು ಪ್ರತಿಭಾಗ್ರಂಥಮಾಲೆ ಧಾರವಾಡ. ಪುಟ ೧೨೩; ಬೆಲೆ ೧-೧೦-೦.

'ಕಾಲಯಾನ' ವೆಂಬುದೊಂದು ಸಾಮಾಜಿಕ ಚಿತ್ರವೆಂದು ಹೇಳಲಾಗಿದೆ. ಇದೊಂದು ಭಾವೀ ಜೀವನದ ಕಲ್ಪನಾದೃಷ್ಟ ದೃಶ್ಯ. ಇದೊಂದು ಸಮಾಜ ಸುಧಾರಕರ ಕೈಪಿಡಿಯಾಗಬಹುದಾಗಿದೆ. ಪ್ರಗತಿಪರ ತತ್ವವಿವೇಕದ ಬೌದ್ಧಿಕ ದರ್ಶನವಿಲ್ಲಿ ಅಡಕವಾಗಿದೆ. ಇದರಲ್ಲಿ ಕ್ರಾಂತಿಕಾರಕ ವಿಚಾರವಿರುವದೇನೋ ಸರ್ವಥಾ ಶ್ಲಾಘ್ಯವಾದುದು; ಆದರೆ 'ರಸಗಂಧ ದ್ವಯಂನಾಸ್ತಿ'. ಕಥನಕೌಶಲ ಕೆಲಮಟ್ಟಿಗೆ ಅದ್ಭುತವನ್ನು ಚಿತ್ರಿಸಿರುವುದಾದರೂ ಬರೆದ ಪರಿಣಾಮದ ದೃಷ್ಟಿಯಿಂದ, ರಸದೃಷ್ಟಿಯಿಂದ ಶುಷ್ಕವಾಗಿದೆಯೆಂದು ಹೇಳದಿರಲು ಸಾಧ್ಯವಿಲ್ಲ. ಪ್ರತಿಭಾ ಗ್ರಂಥಮಾಲೆಯ ಓದುಗರಲ್ಲಿ ಕೆಲವರು ಅಭಿಪ್ರಾಯಪಡುವಂತೆ ನೀರಸ ಕೃತಿಗಳಲ್ಲಿ ಇದೊಂದೆನ್ನಬೇಕಾಗಿದೆ. ಪಾತ್ರಸೃಷ್ಟಿ ವರ್ಣನೆ, ಭಾವಾವೇಶ, ಭಾವಸಂಘರ್ಷ ಇತ್ಯಾದಿ ಸಾಹಿತ್ಯದ 'ಸಾಹಿತ್ಯ'ಗಳ ಅಭಾವ ಇಲ್ಲಿ ಎದ್ದು ಕಾಣುವುದರಿಂದ ಇದನ್ನೊಂದು ಪ್ರಬಂಧವಾಗಿ (Essay) ಬರೆಯಬಹುದಾಗಿತ್ತಲ್ಲದೆ ಕಥೆಯಾಗಿ ಅಲ್ಲ ಎಂದೆನಿಸುತ್ತದೆ.

'ನರತ್ವಂ ದುರ್ಲಭಂ, ತತ್ರ ಲೇಖಕತ್ವಂ ಸುದುರ್ಲಭಂ। ಲೇಖಕಸ್ಯಚ ಸಾಮರ್ಥ್ಯಂ, ಸಮರ್ಥಸ್ಯ ವಿವೇಚನಂ' ಎಂಬ ಮಾತನ್ನು ಇಲ್ಲಿ ಹೇಳದಿರಲಾಗದು.

ಕನ್ನಡಕುಮಾರಸಂಭವ (ಪ್ರಥಮಭಾಗ)

ಬರೆದವರು ಶ್ರೀ ಅಮ್ಮೆಂಬಳ ಶಂಕರನಾರಾಯಣ, ವಿದ್ವಾನ್, ಮಂಗಳೂರು. ಪ್ರಕಾಶಕರು— ಶ್ರೀ ಅಮ್ಮೆಂಬಳ ಶಂಕರನಾರಾಯಣ ನಾವಡ, ಸಾಹಿತ್ಯಾಂಜಲಿಗ್ರಂಥಮಾಲೆ, ಮಂಗಳಾ ದೇವಸ್ಥಾನ, ಬೋಳಾರ ಮಂಗಳೂರು. ಪುಟ ೬೬, ಬೆಲೆ ರೂ. ೧।.

'ಕುಮಾರಸಂಭವ'ವೆಂಬುದು ಸಂಸ್ಕೃತದಲ್ಲಿ ಕಾಳಿದಾಸನೆಂಬ ವಿಶ್ವಕವಿ ಬರೆದ ಮಹಾಕಾವ್ಯ. ಮೇಲಿನದು ಈ ಗ್ರಂಥದ ಕನ್ನಡ ಅನುವಾದ. ಮುನ್ನುಡಿಯಲ್ಲಿ "ಅವರಲ್ಲಿ (ಅನುವಾದ ಕಾರ್ಯದಲ್ಲಿ) ಅವರು ಎಷ್ಟು ಕೃತಾರ್ಥರಾಗಿರುತ್ತಾರೆ ಎಂಬುದನ್ನು ಇಂದಿನದಲ್ಲ, ಮುಂದಣಹೊತ್ತು ಇತ್ಯರ್ಥಿಸಬೇಕು" ಎಂದು ಶ್ರೀ ಗೋವಿಂದ ಪೈಗಳು ಹೇಳಿರುವದು ಅರ್ಥಪೂರ್ಣವೂ, ಭಾವಗರ್ಭಿತವೂ ಆಗಿದೆ. ಗ್ರಂಥಕರ್ತರು 'ಅನುವಾದವೆಂದರೆ ಅಸಿಧಾರಾವ್ರತವಂತೆ' ಎಂದಿದ್ದಾರೆ. ಅದರಲ್ಲೂ ಪದ್ಯದಿಂದ ಪದ್ಯಗ್ರಂಥವನ್ನು ಅನುವಾದ ಮಾಡುವುದು ಆ ವ್ರತದ ಅಸಿಗೆ ಇಬ್ಬಾಯಿಗಳಿದ್ದರೆಂತೋ ಅಂತೆ.

ಮೇಲಿನ ಮಾತನ್ನು ಮೊದಲೇ ಹೇಳಬೇಕಾದರೆ ಗ್ರಂಥಕರ್ತರ ಕಾವ್ಯಮಾರ್ಗದ ಬಗೆಯೆಂತಿರಬಹುದು? "Prose set in zigzag lines makes Poetry– ಗದ್ಯವನ್ನು ಸೊಟ್ಟ ಸಾಲುಗಳಲ್ಲಿ ಬರೆದರೆ ಪದ್ಯವಾಗುವುದು" ಎಂಬ ಅಣಕವಾತಿಗೆ ಉಕ್ತ ಅನುವಾದಬಹುಮಟ್ಟಿಗೆ ಗುರಿಯಾಗಿದೆ. ಪದ್ಯದಲ್ಲಿ ಅನುವಾದ ಮಾಡುವ ಹಠ ಬಿಟ್ಟು ಈ ಅನುವಾದಕರು ಸರಳವಾದ ಗದ್ಯದಲ್ಲೇ ಮೂಲ ಕಾವ್ಯವನ್ನು ಭಾಷಾಂತರಿಸಿದ್ದರೆ ಹೆಚ್ಚು ಉತ್ತಮವಾಗುತ್ತಿತ್ತೆಂದು ಕಾವ್ಯ ಮಾರ್ಗಜ್ಞನಾದವನು ಹೇಳದಿರಲಾರನು. ಆಧುನಿಕರ ಪದ್ಮ ಬರೆವ ಹುಚ್ಚಿಗೆ ಹಿಂದೆ ಗಣಿತಾದಿಗ್ರಂಥಗಳನ್ನು ಛಂದೋಬದ್ಧವಾಗಿ ಬರೆಯುತ್ತಿದ್ದ ಶಾಸ್ತ್ರಜ್ಞರ ನಿದಿಧ್ಯಾಸ ಸೌಲಭ್ಯ ಪ್ರಯೋಜನವನ್ನು ಕೂಡ ಹಚ್ಚಲು ಸಾಧ್ಯವಿಲ್ಲ. ಈ ನಾರೀವೇಷದ ನರನಂತಿರುವ ಅನುವಾದವು ರಸಿಕರನ್ನು ಕೆರಳಿಸದಿರದು, ಸಂತಾಪಗೊಳಿಸದಿರದು. ಆದುದರಿಂದ ಇಂತಹ ದುಷ್ಪ್ರಯತ್ನವನ್ನು ಬಿಟ್ಟು ಅನುವಾದಕರು ಕವಿನಾಮ ಸಂಪಾದನೇಚ್ಛೆಯಿಂದ ಕವಿಂಮನ್ಯರಾಗಿ ಜನತೆಯ ಮುಂದೆ ಅಜೀರ್ಣವಾದ, ಗಂಟುಗಂಟಾದ ಸಾಮರಸ್ಯಹೊಂದದ ಪದಪಂಕ್ತಿಗಳನ್ನು ಛಂದೋಬದ್ಧವಾಗಿಡುವುದು ಸರ್ವಥಾ ಶ್ಲಾಘ್ಯವಲ್ಲ.

ಆ ಚಿತ್ರಗಳು

ಬರೆದವರು ಶ್ರೀ ರಾಘವರು, ಪ್ರಕಾಶಕರು ಶ್ರೀ ಎಂ. ವಿ. ಸೀತಾರಾಮಯ್ಯ, ಎಂ. ಎ. ಬೆಂಗಳೂರು ನಗರ. ಪುಟ ೫೯, ಬೆಲೆ ೧೦ ಅಣೆ.

ಶ್ರೀ ರಾಘವರ "ಆ ಚಿತ್ರಗಳು ಮತ್ತು ಇತರ ಕಥನ ಕವನಗಳು" ಎಂಬುದರಲ್ಲಿ ಗಂಡನಪೂಜೆ, ಪೂಜಾರಿ, ಬೀದಿಸೂಳೆ, ಡೋರ, ಆ ಚಿತ್ರಗಳು, ವಾದಿರನ್ನೆ ಎಂಬ ೬ ಕಥನ ಕವನಗಳಿವೆ. ಈ ಎಲ್ಲ ಕವನಗಳಲ್ಲೂ ಮೈಸೂರಿನವರಿಗೆ ಈಗ ಸಹಜವಾಗಿರುವ ಗದ್ಯಗಂಧಿತ್ವ ತುಂಬಿದೆ. ಪದ್ಯಗಳ ಹೆಣಿಕೆ ಚೆನ್ನಾಗಿದೆಯಾದರೂ ನವ್ಯ ವಿಕ್ಷಿಪ್ತತೆಯ ಛಂದೋಭಂಗಗಳು ಅಲ್ಲಲ್ಲಿ ಕಾಣಬರುತ್ತವೆ. ಶಬ್ದಶುದ್ಧಿ ವಾಕ್ಯಶುದ್ಧಿಗಳತ್ತ ಚೆನ್ನಾಗಿ ಗಮನವಿತ್ತಿರುವದು ಸ್ತುತ್ಯವಾಗಿದೆ. ಕಥಾವಸ್ತುಗಳಲ್ಲಿ ನಾವೀನ್ಯವಿಲ್ಲದುದರಿಂದ ಬೇಸರ ಹುಟ್ಟಿಸುತ್ತದೆ. ಕೆಲವು ಮಕ್ಕಳಿಗಾಗಿ ಬರೆದ ಪದ್ಯಗಳಂತಿವೆ. ಆ ದೃಷ್ಟಿಯಿಂದ ಅವು ಚೆನ್ನಾಗಿವೆಯೆನ್ನಬಹುದು. ಪುಸ್ತಕದ ಪುಟಗಳ ಸಂಖ್ಯಾನುಕ್ರಮ ಸರಿಯಿಲ್ಲ. ಇಂದು ಹೊರಹೊರಡುತ್ತಿರುವ ಹಲವು ಬಗೆಯ ವಿಶ್ಯೃಂಖಲ ವೃತ್ತಿಯ ಕವನಗಳಿಗಿಂತ ಇವು ಎಷ್ಟೋ ಪಾಲು ಚೆನ್ನಾಗಿವೆಯೆನ್ನಲು ಯಾವ ಅಡ್ಡಿಯೂ ಇಲ್ಲ.

ಕೃತ್ತಿಕೆ

ಬರೆದವರು ಶ್ರೀ ಕುವೆಂಪು. ಪ್ರಕಾಶಕರು ಕಾವ್ಯಾಲಯ ಮೈಸೂರು. ಪುಟ ೭೮. ಬೆಲೆ ಸಾದಾಪ್ರತಿಗೆ ರೂ. ೧।. ಕ್ಯಾಲಿಕೊ ಪ್ರತಿಗೆ ರೂ. ೨।.

'ಕೃತ್ತಿಕೆ'ಯಲ್ಲಿ ೭೫ ಪುಟ್ಟ ಪದ್ಯಗಳಿವೆ. ಕವಿಯ ವೈಶಿಷ್ಟ್ಯವಾದ ನೀಲಿಮ ಕಾಳಿಮಾದಿ ನಾಮಪದಗಳ ಬಳಕೆ ಮೊದಲಿನ ಪದ್ಯದಲ್ಲೇ ಕಂಡುಬರುತ್ತದೆ. ನಿರ್ಜನತೆ, ನೀರವತೆ ಇತ್ಯಾದಿ ನಿಕಾರ್ಥಕ ಶಬ್ದಪ್ರಯೋಗ ಕೂಡ ಉಳಿದಲ್ಲಿಯಂತೆ ಇಲ್ಲೂ ತಲೆಹಾಕಿದೆ. ಇದೊಂದು ಈ ಕವಿಯ ಚಟ. ಗಂಭೀರವಾಗ್ಗುಂಫ, ಕಲ್ಪನಾಚಾತುರ್ಯ,

ವರ್ಣನಾವೈಖರಿಗಳನ್ನು ಕವಿಯ 'ಸಂಜೆಗಿರಿಯಲಿ ಸಂಜೆ' 'ಪರ್ವತಾರಣ್ಯಗಳಲ್ಲಿ' 'ಕವಿಶೈಲ' 'ನವಿಲುಕಲ್ಲಿನ ಉಷಃಕಾಲ', 'ಮೋಡಗಳು', 'ರಸವಿರಲು ಜಸವೇಕೆ' ಮುಂತಾದ ಚೆಂಗಬ್ಬಗಳಲ್ಲಿ ಕಾಣಬಹುದಾಗಿದೆ. ಈ ಕವಿಯ ಭಾವನೆಯಾವಾಗಲೂ ಬುದ್ಧಿಗೆ ಪ್ರಾಧಾನ್ಯ ಕೊಡುವುದರಿಂದ ರಸೋಲ್ಲಾಸಕ್ಕಿಂತ ತತ್ವ, ಕಲ್ಪನೆ, ವರ್ಣನೆಗಳೇ ಹೆಚ್ಚು ಹೆಚ್ಚಾಗಿ ಕಂಡುಬರುತ್ತವೆ. ಕವನಗಳಲ್ಲಿ ಮಾನವಹೃದಯದ ಭಾವಸಂಘರ್ಷ ಕೆಲವೆಡೆ ತೀವ್ರವಾಗಿ ಸೂಚಿತವಾಗಿದ್ದರೂ ಸೂಕ್ಷ್ಮವಾಗಿ ಬಣ್ಣಿಸಲ್ಪಟ್ಟಿಲ್ಲ. ಬ್ರಹ್ಮಾಂಡ, ಸೃಷ್ಟಿ, ಸ್ಥಿತಿ, ಲಯ, ಪ್ರಕೃತಿ, ಶೂನ್ಯ, ಆನಂದ, ಸೌಂದರ್ಯರಸ ಇತ್ಯಾದಿ ಪದಗಳನ್ನೊಳಗೊಂಡ ಮಹಾವಾಕ್ಯಗಳು ಪದೇ ಪದೇ ಗಗನಸಂಚಾರಿಗಳಂತೆ ಕವನಗಳಲ್ಲಿ ಅವತರಿಸುವುದರಿಂದ ಕವಿಗೆ ಮೇಲುಗಣ್ಣನೆಂದು ಸಾರ್ಥಕವಾಗಿ ಹೆಸರಿಡಬಹುದು. ಅತಿಪರಿಚಯದ ಅವಜ್ಞೆಯೊಂದನ್ನು ಬಿಟ್ಟರೆ ಈ ಪದಪಾಂಡಿತ್ಯ ನಿಜವಾಗಿಯೂ ಹೃದಯಂಗಮವಾಗಿದೆ.

Mahatma Gandhi

(A Short life of Gandhiji)

By. B. I. Akkad B. A. Vora & Co. Publishers Ltd. 3 Round Building, Bombay No. 2.

ಕ್ರೌನ ಅಷ್ಟಪತ್ರದ ೯೨ ಪುಟಗಳು. ಬೆಲೆ ೧-೮-೦

ಭಾರತದ ಪ್ರಮುಖ ಮುಂದಾಳುಗಳಾದ ಮಹಾತ್ಮಾ ಗಾಂಧಿಯವರ ಜೀವನ ಚರಿತ್ರವನ್ನು ಶ್ರೀ ಅಕ್ಕದರವರು ಸ್ವಲ್ಪದರಲ್ಲಿಯೆ ಈ ಪುಸ್ತಕದಲ್ಲಿ ಬಣ್ಣಿಸಿದ್ದಾರೆ. ಹಿಂದುಸ್ತಾನದ ಸ್ವಾತಂತ್ರ್ಯದ ಅಧಿದೇವತೆಯಂತಿರುವ ಮಹಾತ್ಮರ ಜೀವನಚರಿತ್ರಗಳು ಹೊರಟಷ್ಟೂ ಕಡಿಮೆಯೆ. ಅದರಲ್ಲಿಯೂ ಸ್ವಲ್ಪದರಲ್ಲಿಯೆ ಅವರ ಜೀವನದ ಸಾರವನ್ನು ವಿವರಿಸುವ ಪುಸ್ತಕಗಳು ಸದ್ಯದಲ್ಲಿ ಅವಶ್ಯವಾಗಿವೆ. ಆ ದೃಷ್ಟಿಯಿಂದ ಶ್ರೀ ಅಕ್ಕದ ಇವರ ಪ್ರಸ್ತುತ ಪುಸ್ತಕವು ಉಪಯುಕ್ತವಾಗಿದೆ. ಗಾಂಧೀಜಿಯ ಚರಿತ್ರವಲ್ಲದೆ ಅವರ ನಿಕಟವರ್ತಿಗಳಾಗಿದ್ದ ಶ್ರೀಮತಿ ಕಸ್ತೂರಬಾ ಮತ್ತು ಮಹಾದೇವಭಾಯರ ಚರಿತ್ರವನ್ನೂ ಸ್ವಲ್ಪದರಲ್ಲಿ ಬಣ್ಣಿಸಿ ಗಾಂಧೀಜಿಯವರು ಹಿಂದು ಮುಸಲ್ಮಾನ ಐಕ್ಯಕ್ಕಾಗಿ ಎಷ್ಟೊಂದು ಪರಿಶ್ರಮ ಪಡುತ್ತಿರುವರೆಂಬದನ್ನು ಕೊನೆಯ ಪ್ರಕರಣದಲ್ಲಿ ಹೇಳಿದ್ದಾರೆ. ಅಲ್ಲಲ್ಲಿ ಪ್ರಾಸಂಗಿಕ ಭಾವಚಿತ್ರಗಳನ್ನು ಕೊಟ್ಟದ್ದರಿಂದ ಪುಸ್ತಕ ಆಕರ್ಷಕವಾಗಿದೆ. ಆಂಗ್ಲ ಭಾಷೆಯನ್ನು ಬಲ್ಲವರು ಈ ಪುಸ್ತಕದ ಉಪಯೋಗ ಮಾಡಿಕೊಂಡು ಗಾಂಧೀಜಿಯವರ ಜೀವನಚರಿತ್ರವನ್ನು ತಿಳಿದುಕೊಳ್ಳುವದಲ್ಲದೆ ಭಾರತೋದ್ಧಾರ ಕಾರ್ಯದಲ್ಲಿ ಅವರನ್ನನುಸರಿಸುವ ಪ್ರಯತ್ನ ಮಾಡಬೇಕೆಂದು ಕೋರುತ್ತೇವೆ. ಇಂಥ ಉಪಯುಕ್ತ ಪುಸ್ತಕವನ್ನು ಪ್ರಸಿದ್ಧಿಸುತ್ತಿರುವ ವೋರಾಕಂಪನಿಯವರು ಅಭಿನಂದನಾರ್ಹರು.

ಸಂಪಾದಕೀಯ ಟೀಕೆಟಿಪ್ಪಣಿಗಳು

ಹುರುಳಿಲ್ಲದ ಘೋಷಣೆ!

ಮೈಸೂರು ಮಹಾರಾಜರು ಮೂರುವಾರಗಳ ಕ್ರೂರ ದಬ್ಬಾಳಿಕೆಯ ನಂತರ ೨೪ನೆಯ ತಾರೀಕು ಘೋಷಣೆಯೊಂದನ್ನು ಹೊರಡಿಸಿ ಪ್ರಜೆಗಳಿಗೆ ಕೆಲವೊಂದು ಹಕ್ಕು ಬಾಧ್ಯತೆಗಳನ್ನು ಕೊಡಲು ಮುಂದಾಗಿದ್ದಾರೆ. ಈ ಘೋಷಣೆಯ ಸ್ವರೂಪವನ್ನು ಇದೇ ಸಂಚಿಕೆಯಲ್ಲಿ ಬೇರೆಕಡೆ ಪ್ರಸಿದ್ಧಿಸಿದ್ದೇವೆ. ಮೈಸೂರಿನ ದಿವಾಣ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ಸಲಹೆ ಸಮಿತಿಯ ಸೂಚನೆಗಳಗನುಸಾರವಾಗಿಯೇ ಈ ಸುಧಾರಣೆಗಳನ್ನು ಸಾರಲಾಗಿದೆಂಬುದನ್ನು ನೋಡಿದರೆ ಇವು ಅತ್ಯಂತ ಅಸಮಾಧಾನಕರ ಮತ್ತು ತ್ಯಾಜ್ಯವಾಗಿವೆಂಬುದನ್ನು ಬೇರೆ ಹೇಳಬೇಕಿಲ್ಲ. ನೆರೆಯ ಭಾರತೀಯರು ಸ್ವಾತಂತ್ರ್ಯವನ್ನನುಭೋಗಿಸುತ್ತಿರುವಾಗ ಮೈಸೂರು ಪ್ರಜೆಗಳು ಇಪ್ಪತ್ತೈದು ವರುಷಗಳ ಹಿಂದಣ ಖತನಟ್ಟ ದ್ವಿದಳ ರಾಜ್ಯ ಪದ್ಧತಿಯಿಂದ ಅದೆಂತು ಸಂತೃಪ್ತರಾಗಬೇಕು? ಈ ದ್ವಿದಳ ರಾಜ್ಯ ಪದ್ಧತಿಗೇ ಮಹಾರಾಜರು ಹೊಣೆಗಾರ ರಾಜ್ಯ ಪದ್ಧತಿಯೆಂದು ಕರೆದುದನ್ನು ನೋಡಿದರಂತೂ ಯಾರಿಗಾದರೂ ತ್ವೇಷವುಂಟಾಗದಿರದು. ಈ ಸುಧಾರಣೆಗಳನ್ನು ಸೂಕ್ಷ್ಮ ರೀತಿಯಿಂದ ವಿಮರ್ಶಿಸಿದ್ದಾದರೆ ಇವುಗಳಲ್ಲಿ ಯಾವ ಹುರಳೂ ಇಲ್ಲೆಂಬುದು ಸ್ಪಷ್ಟವಾಗುವದು. ಕೆಲವು ಕಾದಿಟ್ಟ ವಿಷಯಗಳನ್ನು ಬಿಟ್ಟು ಉಳಿದ ವಿಷಯಗಳನ್ನು ಲೋಕನಿಯುಕ್ತ ಮಂತ್ರಿಗಳಿಗೆ ಒಪ್ಪಿಸಲಾಗುವದೆಂದು ಸಾರಲಾಗಿದೆ. ಆದರೆ ಈ ಕಾದಿಟ್ಟ ವಿಷಯಗಳಾದರೂ ಅತ್ಯಂತ ಮಹತ್ವದ್ದಾಗಿವೆ. ಮಹಾರಾಜರ ಮತ್ತು ಅವರ ಮನೆತನದ ವೆಚ್ಚದ ಮಾತನ್ನು ಬಿಟ್ಟರೂ ಹಿಂದೀ ಒಕ್ಕೂಟದೊಡನೆ ಸಂಬಂಧ, ಹೈಕೋರ್ಟು ಮತ್ತು ಅಲ್ಪಸಂಖ್ಯಾಕರ ಹಿತರಕ್ಷಣೆ ಮೊದಲಾದ ವಿಷಯಗಳನ್ನು ಮಹಾರಾಜರು ತಮ್ಮ ಕಡೆಗಿಟ್ಟುಕೊಂಡಿದ್ದು ಯಾವ ರೀತಿಯಿಂದಲೂ ನ್ಯಾಯ್ಯವಲ್ಲ. ಅಲ್ಲದೆ ಸುಧಾರಣೆಗಳ ಕರಡನ್ನು ಸಿದ್ಧಪಡಿಸುವ ಹೊಣೆಯನ್ನು ಕೇವಲ ದಿವಾಣರಿಗೆ ಒಪ್ಪಿಸಿರುವರು. ಅವರು ಶಾಸನ ಸಮಿತಿಯ ಮತ್ತು ಇತರ ತಜ್ಞರ ಸಲಹೆಯನ್ನು ತೆಗೆದುಕೊಳ್ಳಬೇಕಂತೆ. ಈ ಕರಡಿನ ಸ್ವರೂಪವು ಹೊಣೆಗಾರ ಸರಕಾರದ್ದಾಗಿರಲಾರದೆಂಬುದು ಸುಸ್ಪಷ್ಟವೆ ಇದೆ. ಮುಂದಿನ ವರುಷದ ಜುಲೈ ೧ರಿಂದ ಹೊಸ ರಾಜ್ಯಘಟನೆ ಅಸ್ತಿತ್ವದಲ್ಲಿ ಬರುವದಂತೆ! ಆದರೆ ಈ ಮಧ್ಯಂತರ ಅವಧಿಯಲ್ಲಿ ಸದ್ಯದ ಈ ದಿವಾಣರ ಮತ್ತು ಅವರ ಹಸ್ತಕರ ಅನಿರ್ಬಂಧ ಆಡಳಿತೆ ಸಾಗಬೇಕೆ? ಯಾವದೊಂದು ಘಟನೆಯ ಕರಡನ್ನು ಸಿದ್ಧಪಡಿಸುವಾಗ ನಡುಗಾಲ ಸರಕಾರವನ್ನು ಸ್ಥಾಪಿಸಿ ಪ್ರಜೆಗಳ ಅಭಿಪ್ರಾಯಕ್ಕೆ ಮನ್ನಣೆ ಕೊಡಬೇಕಾದುದು ಅವಶ್ಯ. ಆದರೆ ಮಹಾರಾಜರು ಇತ್ತ ಗಮನಿಸಿಲ್ಲ. ಪ್ರಜಾಪ್ರತಿನಿಧಿಗಳ ಬೇಡಿಕೆಯನ್ನು ಸ್ವಲ್ಪವೂ ಲಕ್ಷಿಸದೆ ಮಹಾರಾಜರು ಅತೃಪ್ತಿಕರ ಸುಧಾರಣೆಗಳ ಘೋಷಣೆ ಮಾಡಿದ್ದರಿಂದ ಪರಿಸ್ಥಿತಿ ಸ್ವಲ್ಪವೂ ಸುಧಾರಿಸಲಾರದೆಂದು ಖಂಡಿತವಾಗಿ ಹೇಳಬಲ್ಲೆವು.

ಅನನ್ವಿತ ದಬ್ಬಾಳಿಕೆ

ಮಹಾರಾಜರು ಇಂತು ಪ್ರಜೆಗಳನ್ನು ಸಮಾಧಾನ ಪಡಿಸಲು ಸುಧಾರಣೆಗಳ ಘೋಷಣೆ ಮಾಡುತಿರುವಾಗಲೆ ಸಂಸ್ಥಾನದಲ್ಲೆಲ್ಲ ದಬ್ಬಾಳಿಕೆ ಮಿತಿಮೀರಿ ನಡೆದಿದೆ. ತಮ್ಮ ಹಕ್ಕು ಬಾಧ್ಯತೆಗಳಿಗಾಗಿ, ಹೊಣೆಗಾರ ರಾಜ್ಯಸ್ಥಾಪನೆಗಾಗಿ ಪ್ರಜೆಗಳು ನಡೆಸಿದ ಅಹಿಂಸಾತ್ಮಕ ಹೋರಾಟವನ್ನು ಅಧಿಕಾರಿಗಳು ಕ್ರೂರ ದಬ್ಬಾಳಿಕೆಯಿಂದ ಎದುರಿಸುತಿರುವರು. ಲಾಠಿ ಪ್ರಹಾರ, ಗೋಳೀಬಾರು, ಸೆರೆಹಿಡಿಯುವುದು, ಸ್ಥಾನಬದ್ಧತೆ ಮೊದಲಾದವುಗಳು ಯಥಾಪ್ರಕಾರ ಸಾಗಿವೆ. ಹೆಣ್ಣುಮಕ್ಕಳು ಮತ್ತು ಚಿಕ್ಕಮಕ್ಕಳಮೇಲೆಯೂ ದಬ್ಬಾಳಿಕೆ ಅನಿರ್ಬಂಧವಾಗಿ ನಡೆದಿದೆ. ಅಲ್ಲಿಂದ ಬರುವ ಸುದ್ದಿಗಳೆಲ್ಲ ನಿಜವಾಗಿದ್ದರೆ ಮಾದರಿ ಮೈಸೂರಿಗೆ ಅವೆಂದಿಗೂ ಕೀರ್ತಿಯನ್ನು ತರಲಾರವು. ಪೋಲೀಸರು, ಸೈನಿಕರು ನಡೆಸುವ ಛಲನೆಯಿಂದ ತೃಪ್ತರಾಗದೆ ಅಧಿಕಾರಿಗಳು ಪುಂಡರನ್ನು ಈ ಕೆಲಸಕ್ಕೆ ಹಚ್ಚಿರುವರೆಂದು ತಿಳಿಯುತ್ತದೆ. ಈ ಯೋಜನೆಯಂತೂ ಅತ್ಯಂತ ಖಂಡನೀಯವಾಗಿದೆ. ದಬ್ಬಾಳಿಕೆಯಿಂದ ಉದ್ದೇಶವೆಂದಿಗೂ ಸಾಧ್ಯವಾಗದೆಂಬುದು ಬ್ರಿಟಿಶ್ ಹಿಂದುಸ್ತಾನದಲ್ಲಿನ ಚಟುವಟಿಕೆಗಳಿಂದ ಸಿದ್ಧವಾಗಿ ಹೋಗಿದೆ. ಕಾಂಗ್ರೆಸ್ಸಿನವರು ಸ್ವಾತಂತ್ರ್ಯಕ್ಕಾಗಿ ನಡೆಸಿದ ಚಲೇಜಾವ ಚಳವಳಿಯಲ್ಲಿ ಅಧಿಕಾರಿಗಳು ಬೇಕಾದಷ್ಟು ದಬ್ಬಾಳಿಕೆಯನ್ನು ನಡೆಸಿದರು. ಆದರೂ ಸ್ವಾತಂತ್ರ್ಯ ಪ್ರೇಮಿಗಳು ಹೆದರದೆ ಬೆದರದೆ ತಮ್ಮ ಧ್ಯೇಯ ಸಾಧನೆಗಾಗಿ ಒಂದೇ ಸವನೆ ಪ್ರಯತ್ನಿಸಿದರು. ಅವರ ಆ ಪ್ರಯತ್ನದ ಪರಿಣಾಮವಾಗಿಯೇ ಬ್ರಿಟಿಶರು ದಬ್ಬಾಳಿಕೆಯ ಧೋರಣವನ್ನು ಬಿಟ್ಟುಗೊಟ್ಟು ಸಂಧಾನ ಮಾಡಿಕೊಳ್ಳಬೇಕಾಯಿತು. ಅಧಿಕಾರ ತ್ಯಾಗ ಮಾಡಿ ಸ್ವದೇಶಕ್ಕೆ ಮರಳಬೇಕಾಯಿತು. ಮೈಸೂರು ಸರಕಾರದವರು ಇದರಿಂದ ಪಾಠಕಲಿತು ಜನತೆಗೆ ಹೊಣೆಗಾರ ಸರಕಾರವನ್ನು ಕೊಡುವುದು ಅತ್ಯವಶ್ಯವಾಗಿದೆ. ಈಗ ಘೋಷಿಸಿದಂಥ ಸುಧಾರಣೆಗಳಿಂದ ಪ್ರಜೆಗಳು ಎಂದೂ ಸಮಾಧಾನ ಹೊಂದರು. ದಬ್ಬಾಳಿಕೆಯಿಂದ ಅವರು ಹಿಮ್ಮೆಟ್ಟಲಾರರೆಂಬುದು ಸುಸ್ಪಷ್ಟವಿದೆ.

ಶಾಂತಿ ಮಾರ್ಗವೆ ಇದು?

ದೇಶದಲ್ಲಿ ಶಾಂತಿಯನ್ನು ಸ್ಥಾಪಿಸುವುದಕ್ಕಾಗಿ ಎಂಥ ತ್ಯಾಗವನ್ನಾದರೂ ಮಾಡುವುದು ತಪ್ಪಾಗಲಾರದೆಂದು ಭಾವಿಸಿ ಕಾಂಗ್ರೆಸ್ಸಿನ ಧುರೀಣರು ಮುಸ್ಲಿಂ ಲೀಗಿಗೆ ಪಾಕಿಸ್ತಾನವನ್ನು ಕೊಟ್ಟುಬಿಡಲೂ ಸಿದ್ಧರಾದುದು ಸರ್ವಶ್ರುತವಿದೆ. ಆದರೆ ಪಾಕಿಸ್ತಾನ ಕೊಟ್ಟ ಬಳಿಕವೂ ದೇಶದಲ್ಲಿ ಶಾಂತಿ ಪ್ರಸ್ಥಾಪಿತವಾಗದಿದ್ದುದು ಅತ್ಯಂತ ದುರ್ದೈವದ ಸಂಗತಿಯಾಗಿದೆ. ಪಾಕಿಸ್ತಾನವನ್ನು ಪಡೆಯುವದಕ್ಕಾಗಿ ಮುಸ್ಲಿಂ ಲೀಗಿನವರು ಅನುಯಾಯಿಗಳಲ್ಲಿ ಜಾತೀಯ ವಿಷ ಬೀಜವನ್ನು ವಿಪರೀತ ಬಿತ್ತಿಬಿಟ್ಟಿದ್ದರಿಂದ ಅದರ ಕಹಿ ಫಲವನ್ನು ಈಗಲೂ ಅನುಭವಿಸಬೇಕಾಗಿ ಬಂದಿದೆ. ಶಾಂತಿಯನ್ನು ಪ್ರಸ್ಥಾಪಿಸಬೇಕೆಂದು ಹಿಂದುಸ್ತಾನ ಒಕ್ಕೂಟ ಸರಕಾರದ ಮತ್ತು ಪಾಕಿಸ್ತಾನ ಸರಕಾರದ ಮುಖ್ಯ ಮಂತ್ರಿಗಳು ಮತ್ತು ಮಹಾತ್ಮಾ ಗಾಂಧಿ ಹಾಗೂ ಪಾಕಿಸ್ತಾನ ಗವರ್ನರ ಜನರಲ್ ಕಾಯದೇ ಅಜಂ ಜಿನ್ನಾ ಸಾಹೇಬರು ಎಷ್ಟೊಂದು ಪ್ರಕಟನೆ ಹೊರಡಿಸಿದರೂ ಉದ್ದಿಷ್ಟವು ಸಾಧ್ಯವಾಗಲೊಲ್ಲದು. ಮೇಲೆ ಹೇಳಿದಂತೆ ಆಳವಾಗಿ ಬಿತ್ತಲ್ಪಟ್ಟ ಆ ವಿಷ ಬೀಜಗಳು ಇಂದುಹೆಮ್ಮರವಾಗಿ ಬಿಟ್ಟಿದ್ದರಿಂದ ಅದರ ಕಹಿಫಲಗಳನ್ನು ಎಲ್ಲರೂ ಉಣ್ಣಬೇಕಾಗಿದೆ. ಇದಲ್ಲದೆ ಮುಸ್ಲಿಂ ಲೀಗ ಧುರೀಣರು ಈಗಲೂ ಜನತೆಯನ್ನು ಉದ್ರೇಕಿಸುವಂಥ ಭಾಷಣಗಳನ್ನು ಮಾಡುತಿರುವರು. ಹಿಂದುಸ್ತಾನ ಒಕ್ಕೂಟ ಸರಕಾರದ ಗೂಢ ವಿಚಾರವಿನಿಮಯ ಮಾಡಿ ಲಾಹೋರಿಗೆ ಹೋದಕೂಡಲೆ ಪಾಕಿಸ್ತಾನದ ಮಂತ್ರಿ ಲಿಯಾಖತ ಅಲಿಖಾನರು ಮಾಡಿದ ಭಾಷಣ ಅತ್ಯಂತ ಉದ್ರಿಕ್ತವಾಗಿದೆ. ದಿಲ್ಲಿಯಲ್ಲಿಯ ದೃಶ್ಯಗಳನ್ನು ವಿವರಿಸಿ ಪಾಕಿಸ್ತಾನವನ್ನು ಬಲಪಡಿಸುವದಷ್ಟೇ ನಮ್ಮ ಕೆಲಸವಾಗಿರದೆ ಭರತಖಂಡದಲ್ಲಿ ಇಸ್ಲಾಮದ ಕೀರ್ತಿಯನ್ನು ಪುನಃ ಬೆಳಗಿಸಬೇಕಾಗಿದೆ. ಇದಕ್ಕೆ ಪ್ರತಿಯೊಬ್ಬ ಮುಸಲ್ಮಾನನ ಸಹಾಯ ಅವಶ್ಯವಾಗಿದೆ-ಎಂದು ಮುಂತಾಗಿ ಹೇಳಿದರು. ಜಿನ್ನಾ ಸಾಹೇಬರ ಭಾಷಣಗಳಾದರೂ ಉದ್ರಿಕ್ತವಾಗಿವೆ. ಈ ಬಗೆಯ ಉದ್ರಿಕ್ತ ಭಾಷಣಗಳಿಂದ ಶಾಂತಿ ಎಂದಿಗೂ ಪ್ರಸ್ಥಾಪಿತವಾಗದು. ಪಾಕಿಸ್ತಾನ ಸರಕಾರದವರು ಈ ಮಾತನ್ನು ಬೇಗ ತಿಳಿದುಕೊಂಡಷ್ಟು ಶಾಂತಿ ಪ್ರಸ್ಥಾಪಿತವಾಗಲು ಸಹಾಯಕವಾಗುವದು.

ಜುನಾಗಡ ಸಂಸ್ಥಾನ

ಪಾಕಿಸ್ತಾನವನ್ನು ಸೇರಿದ ಕಾಠೇವಾಡದಲ್ಲಿಯ ಜುನಾಗಡ ಸಂಸ್ಥಾನವು ಹಿಂದೀ ಒಕ್ಕೂಟ ಸರಕಾರಕ್ಕೆ ಗಂಡಾಂತರ ಪ್ರಾಯವಾಗಿದೆಯೆಂದು ನವಾನಗರದ ಜಾಮ ಸಾಹೇಬರು ಅಭಿಪ್ರಾಯಪಟ್ಟಿರುವರು. ೩॥ ಸಾವಿರ ಚ. ಚೌ. ಮೈಲುಗಳಷ್ಟು ವಿಸ್ತಾರವಾಗಿದ್ದು ೭॥ ಲಕ್ಷ ಜನಸಂಖ್ಯೆಯುಳ್ಳ ಈ ಸಂಸ್ಥಾನದ ನವಾಬರು ಬಹುಸಂಖ್ಯ ಹಿಂದು ಪ್ರಜೆಗಳ ಅಭಿಪ್ರಾಯವನ್ನು ಲೆಕ್ಕಿಸದೆ ಪಾಕಿಸ್ತಾನದಲ್ಲಿ ಸೇರಿರುವರು. ಈಗ ಆ ಸಂಸ್ಥಾನದಲ್ಲಿಯ ಸಣ್ಣ ಪುಟ್ಟ ಜಾಗಿರದಾರರು, ಒಳ ಸಂಸ್ಥಾನಿಕರು ಹಿಂದೀ ಒಕ್ಕೂಟವನ್ನು ಸೇರಲು ಸಿದ್ಧರಾಗಿದ್ದಾರೆ. ಇದರಿಂದ ತಿಕ್ಕಾಟಕ್ಕೆ ಅವಕಾಶವುಂಟಾಗುವ ಪರಿಸ್ಥಿತಿ ಪ್ರಾಪ್ತವಾಗಿದೆ. ಪ್ರಜೆಗಳ ಅಭಿಪ್ರಾಯವನ್ನು ಹತ್ತಿಕ್ಕಲು ನವಾಬ ಸಾಹೇಬರು ಪಾಕಿಸ್ತಾನದ ಸೈನ್ಯ ಬಲವನ್ನ ಪೇಕ್ಷಿಸುವದು ಸ್ವಾಭಾವಿಕ. ಆ ಸೈನ್ಯ ಜುನಾಗಡದಲ್ಲಿ ಬಂದು ತಳವೂರಿದರೆ ನೆರೆಯ ಹಿಂದೀ ಸಂಸ್ಥಾನಗಳಿಗೆ ಅಂಜಿಕೆಯುಂಟಾಗುವದು ಸ್ವಾಭಾವಿಕ. ಜುನಾಗಡದಂತೆಯೆ ಹೈದರಾಬಾದ ಸಂಸ್ಥಾನದ ಪರಿಸ್ಥಿತಿಯಿದೆ. ಅದಿನ್ನೂ ಯಾವ ಸರಕಾರಕ್ಕೂ ಸೇರದಿದ್ದರೂ ಹಿಂದೀ ಒಕ್ಕೂಟವನ್ನು ಸೇರಬೇಕೆಂದು ಬಹುಸಂಖ್ಯ ಪ್ರಜೆಗಳು ಒತ್ತಾಯಪಡಿಸುತಿರುವದನ್ನು ನಿಜಾಮ ಸಾಹೇಬರು ಅಲಕ್ಷಿಸುತಿರುವದರಿಂದ ಪ್ರಜೆಗಳು ಸತ್ಯಾಗ್ರಹವನ್ನು ಸಾರಿದ್ದಾರೆ. ಈ ಸಂಸ್ಥಾನವೂ ಹಿಂದೀ ಒಕ್ಕೂಟ ಸರಕಾರಕ್ಕೆ ದೊಡ್ಡ ಸಮಸ್ಯೆಯಾಗಿ ಪರಿಣಮಿಸುವದೆಂಬಲ್ಲಿ ಸಂದೇಹವಿಲ್ಲ. ಹಿಂದೀ ಸಂಸ್ಥಾನಿಕರಿಗೆ ಬ್ರಿಟಿಶರು ಪೂರ್ಣ ಸ್ವಾತಂತ್ರ್ಯವನ್ನು ಕೊಟ್ಟು ಹೊರಟು ಹೋದ್ದರಿಂದ ಬ್ರಿಟಿಶರಿದ್ದಾಗ ಇಮ್ಮಡಿ ಗುಲಾಮರಾಗಿದ್ದ ಈ ಸಂಸ್ಥಾನಗಳು ಈಗ ಪ್ರಜೆಗಳ ಅಭಿಪ್ರಾಯವನ್ನು ಹತ್ತಿಕ್ಕಿ ಸ್ವಚ್ಛಂದವಾದ ಕಾರಭಾರವನ್ನು ನಡೆಸಹತ್ತಿರುವರು. ಆಯಾಸಂಸ್ಥಾನಗಳು ಸಮೀಪದ ಸರಕಾರಗಳನ್ನು ಸೇರಬೇಕೆಂದು ಬ್ರಿಟಿಶರು ವಿಧಿಸಿದ್ದರೆ ಈಬಗೆಯ ಪರಿಸ್ಥಿತಿ ಪ್ರಾಪ್ತವಾಗುತ್ತಲೆ ಇರಲಿಲ್ಲ. ಈಗಲಾದರೂ ಸಂಸ್ಥಾನಿಕರಲ್ಲಿ ಅಂಥ ವಿವೇಕೋದಯವಾದರೆ ಹಿಂದುಸ್ತಾನದ ಸಮಸ್ಯೆ ಸುಗಮವಾಗಿ ಬಿಡಿಸಲ್ಪಡುವದೆಂಬಲ್ಲಿ ಸಂದೇಹವಿಲ್ಲ.

ಅನ್ನ--ಬಟ್ಟೆಯ ಕೊರತೆ

ಹಿಂದುಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಅನ್ನ ಬಟ್ಟೆಯ ಕೊರತೆ ವಿಶೇಷವಾಗಿದೆ. ಹೊರಗಿನಿಂದ ಸಕಾಲಕ್ಕೆ ಆಹಾರ ಪದಾರ್ಥ ಬರದಿದ್ದರೆ ಉಪವಾಸ ಬೀಳುವ ಪ್ರಸಂಗ ಭಾರತಕ್ಕೆ ಬರುತ್ತದೆ. ಆಹಾರ ಪದಾರ್ಥಗಳ ಉತ್ಪಾದನೆಯನ್ನು ಹೆಚ್ಚಿಸಬೇಕೆಂದು ಬೇಕಷ್ಟು ಘೋಷಣೆ ಮಾಡಲಾಗುತ್ತಿದ್ದರೂ ಕೃತಿಯಲ್ಲಿ ಅದು ಪರಿಣಮಿಸಲೊಲ್ಲದಾದ್ದರಿಂದ ಉದ್ದಿಷ್ಟ ಸಾಧ್ಯವಾಗಲೊಲ್ಲದು. ಹೆಚ್ಚು ಆಹಾರ ಪದಾರ್ಥಗಳನ್ನು ಬೆಳೆಸುವುದೆಂತು ಎಂಬುದನ್ನು ತಾತ್ವಿಕವಾಗಿ ಆಗಾಗ ಚರ್ಚಿಸಲಾಗುತ್ತದೆಯಲ್ಲದೆ ಅದು ಪ್ರತ್ಯಕ್ಷ ಕೃತಿಯಲ್ಲಿ ಬರುವಂತೆ ನಿರ್ದಿಷ್ಟ ಪ್ರಯತ್ನಗಳು ನಡೆಯಲೊಲ್ಲವು. ಆದರಿಂದ ಈ ಕೊರತೆಯೆಂದು ನೀಗಬಲ್ಲದೊ ಎಂಬ ಭೀತಿ ಜನಸಾಮಾನ್ಯಕ್ಕೆಲ್ಲ ಉಂಟಾಗಿರಲು ಸಾಕು. ಆಹಾರ ಪದಾರ್ಥಗಳನ್ನು ಹೆಚ್ಚಾಗಿ ಬೆಳೆಯುವಂತೆ ಮತ್ತು ತಮಗೆ ಬೇಕಾದಷ್ಟನ್ನು ಇಟ್ಟುಕೊಂಡು ಉಳಿದದನ್ನೆಲ್ಲ ಸರಕಾರಕ್ಕೆ ಮಾರಿಬಿಡುವಂತೆ ಒಕ್ಕಲಿಗನ ಮನವೊಲಿಸುವ ಕಾರ್ಯ ಭರದಿಂದ ಸಾಗಲೊಲ್ಲದು, ಕೃತಿಯಲ್ಲಿ ಇಳಿಯಲೊಲ್ಲದು. ಈ ಬಗೆಯ ಪರಿಸ್ಥಿತಿ ಬೇಗ ಹೋದಷ್ಟು ಕ್ಷೇಮ. ಆಹಾರ ಕೊರತೆಯ ಜೊತೆಗೆ ಬಟ್ಟೆಯ ಕೊರತೆಯೂ ಇದೆ. ಮುಂದಿನ ವರುಷ ಹಿಂದುಸ್ತಾನ ಮತ್ತು ಪಾಕಿಸ್ತಾನ ಕೂಡಿ ಸುಮಾರು ೨೪ ಲಕ್ಷ ಗಜದಷ್ಟು ಬಟ್ಟೆ ಕಡಿಮೆ ಬೀಳುವದೆಂದು ಅಂದಾಜ ಮಾಡಿವೆ. ಈ ಅಂಕೆ ಸಂಖ್ಯೆ ನಿಜವೆಂದು ಗ್ರಹಿಸಿ ಸರಕಾರದವರು ಬಟ್ಟೆಯ ಉತ್ಪಾದನವನ್ನು ಹೆಚ್ಚಿಸಲು ಉಪಾಯಗಳನ್ನು ಕೈಕೊಳ್ಳಲಣಿಯಾಗಿದ್ದಾರೆ. ಗಿರಣಿಗಳನ್ನು ಹೆಚ್ಚಿಸುವುದು, ವಾಹನ ಸೌಕರ್ಯಗಳನ್ನು ಹೆಚ್ಚಿಸುವದು ಮೊದಲಾದ ಉಪಾಯಗಳನ್ನು ಕೈಕೊಳ್ಳಬೇಕೆಂದು ನಿರ್ಧರಿಸಿದ್ದಾರೆ. ಕೇವಲ ಗಿರಣಿಗಳಿಗೇ ಮೊರೆಹೊಗುವ ಧೋರಣವನ್ನು ಸ್ವೀಕರಿಸದೆ ಚರಕಗಳನ್ನು ಪ್ರೋತ್ಸಾಹಿಸಿ ಕೈನೂಲನ್ನು ತೆಗೆಯಿಸುವದು ಇಷ್ಟವಾಗಿದೆ. ಇದರಿಂದ ಬಟ್ಟೆಯ ಕೊರತೆ ಹಿಂಗುವದಲ್ಲದೆ ಬಡವರ ಆರ್ಥಿಕ ಉತ್ಪನ್ನವನ್ನು ಹೆಚ್ಚಿಸಿದಂತೆಯೂ ಆಗುವದು. ಸರಕಾರದವರು ಇತ್ತ ಗಮನಿಸುವದು ಅತ್ಯವಶ್ಯವೆಂದು ಬೇರೆ ಹೇಳಬೇಕಿಲ್ಲ.

ದಾರಿದ್ರ್ಯ ನಿವಾರಣೆ

ಹಿಂದುಸ್ತಾನವಿಂದು ದರಿದ್ರವಾಗಿದೆ. ಬ್ರಿಟಿಶರ ನೂರೈವತ್ತು ವರುಷಗಳ ದಾಸ್ಯದ ಪರಿಣಾಮವಾಗಿ ಇಲ್ಲಿನ ಸಂಪತ್ತೆಲ್ಲ ಬಳಿದುಹೋಗಿದೆ. ಇದೀಗ ಭಾರತ ಸ್ವತಂತ್ರವಾಗಿರುವದರಿಂದ ಸ್ವತಂತ್ರ ಭಾರತ ಸರಕಾರ ದೇಶದಲ್ಲಿನ ದಾರಿದ್ರ್ಯವನ್ನು ದೂರಗೊಳಿಸಲು ಬಗೆಬಗೆಯ ಯೋಜನೆಗಳನ್ನು ಸಿದ್ಧಮಾಡುತಿರುವದು. ಸರಕಾರದ ಈ ಉದ್ದೇಶವು ಅತ್ಯಂತ ಪ್ರಶಂಸನೀಯವಾಗಿದೆಂದು ಬೇರೆ ಹೇಳಬೇಕಿಲ್ಲ. ಹಿಂದುಸ್ತಾನ ಸರಕಾರದ ಲೋಕೋಪಯೋಗಿ ಖಾತೆಯ ಮಂತ್ರಿಗಳಾದ ಕಾಕಾಸಾಹೇಬ ಗಾಡಗೀಳರು ಮುಂಬಯಿಯಲ್ಲಿ ವಣಿಕ್ ಸಂಘದವರಿಗೆ ಆಶ್ವಾಸಿಸುತ್ತ ಈ ಸಂಬಂಧದಲ್ಲಿ ಮಹತ್ವದ ಮಾತುಗಳನ್ನು ಹೇಳಿರುವರು. ಪ್ರತಿಯೊಬ್ಬರಿಗೆ ಸಾಕಷ್ಟು ಅನ್ನ ಮತ್ತು ಬಟ್ಟೆ ಹಾಗೂ ಪ್ರತಿಯೊಬ್ಬರಿಗೆ ನ್ಯಾಯದ ಆಶ್ವಾಸನ ಇವು ಸಮೃದ್ಧ, ಮುಕ್ತ, ಶಾಶ್ವತ ಸರಕಾರದ ಧ್ಯೇಯವಾಗಿರಬೇಕಾಗಿದ್ದು ಅಂಥ ಸರಕಾರವೇ ನಮ್ಮಲ್ಲಿ ಸ್ಥಾಪಿತವಾಗುವದೆಂದು ಹೇಳಿದರು. ಔದ್ಯೋಗಿಕ ಕೇಂದ್ರಗಳಲ್ಲಿ ವಾಸ್ತವ್ಯದ ಸೌಕರ್ಯವನ್ನು ಒದಗಿಸಲು ಎಲ್ಲ ಬಗೆಯ ಸಹಾಯದ ಆಶ್ವಾಸನವನ್ನು ಮಂತ್ರಿವರ್ಯರು ಕೊಟ್ಟರು. ಅದೇರೀತಿಯಾಗಿ ನೀರಾವರಿ ಸೌಕರ್ಯದ ಬಗ್ಗೆಯೂ ಆಶ್ವಾಸನ ಕೊಟ್ಟರು. ಕಾಂಗ್ರೆಸ ಚುನಾವಣೆಯ ಘೋಷಣಾಪತ್ರಿಕೆಯಲ್ಲಿ ಆಶ್ವಾಸಿಸಿದ್ದಕ್ಕೆ ಭಿನ್ನವಾದ ಧೋರಣ ಸರಕಾರದ್ದಿರುವುದಿಲ್ಲ. ಎಂಬದಾಗಿ ಮಂತ್ರಿವರ್ಯರು ಹೇಳಿದರು. ಸದ್ಯದ ರಾಷ್ಟ್ರೀಯ ಸರಕಾರ ಉಚ್ಚ ಧ್ಯೇಯವನ್ನಿಟ್ಟು ಕಾರ್ಯಪ್ರವೃತ್ತವಾಗಿದ್ದರೂ ದೇಶದಲ್ಲಿ ಇನ್ನೂ ಶಾಂತಿ ಪ್ರಸ್ಥಾಪಿತವಾಗದ್ದರಿಂದ ಕಾರ್ಯಕ್ಕೆ ಬಹಳ ತಡೆಯುಂಟಾಗಿದೆ. ಆದುದರಿಂದ ಶಾಂತಿಯನ್ನು ಪ್ರಸ್ಥಾಪಿಸುವದಕ್ಕಾಗಿ ಭಾರತೀಯರೆಲ್ಲ ಸರಕಾರಕ್ಕೆ ಸಹಾಯ ಸಲ್ಲಿಸಿದ್ದಾದರೆ ದಾರಿದ್ರ್ಯ ನಿವಾರಣೆಗಾಗಿ ಸರಕಾರ ಇಟ್ಟುಕೊಂಡ ಕಾರ್ಯಕ್ರಮ ಕಾರ್ಯಕಾರಿಯಾಗುವಲ್ಲಿ ಸಂದೇಹವಿಲ್ಲ.

ಅಮೇರಿಕದ ಯುದ್ಧ ಭ್ರಮೆ

ಸಂಯುಕ್ತ ಸಂಸ್ಥಾನದ ಹಿಂದಿನ ಉಪಾಧ್ಯಕ್ಷರೂ "ನ್ಯೂರಿಪಬ್ಲಿಕ್" ಎಂಬ ಮಾಸಿಕದ ಸಂಪಾದಕರೂ ಆದ ಹೆನ್ರಿ ವ್ಯಾಲೇಸರು ಫಿಲಿಡೆಲ್ಫಿಯದ ಪ್ರಾಗತಿಕ ನಾಗರಿಕರ ಸಭೆಯಲ್ಲಿ ಮಾತನಾಡುತ್ತ ಅಮೇರಿಕದ ಪತ್ರಿಕೆಗಳು ತಮ್ಮ ತಲೆಬರಹದ ಅಯ್ಕೆಯಿಂದಲೂ ಸುದ್ದಿಕತೆಗಳಿಂದಲೂ ಈಗ ದೇಶದಲ್ಲಿ ಯುದ್ಧದ ಹುಚ್ಚನ್ನು ಹರಡುತ್ತಿವೆಯೆಂದು ಹೇಳಿದರು. ಸಂಯುಕ್ತ ಸಂಸ್ಥಾನದ ಪರರಾಷ್ಟ್ರ ಧೋರಣದ ಮೇಲೆ ಟೀಕೆ ಮಾಡುತ್ತ ಅವರು ಯೂರೋಪಿನ ಪ್ರತಿಯೊಬ್ಬ ಪ್ರತಿಗಾಮಿಯನ್ನೂ ಮಿತ್ರನನ್ನಾಗಿ ನಾವು ಪರಿವರ್ತಿಸುವೆವು; ಟ್ರೂಮನ್ನರು ಯುದ್ಧ ಪಕ್ಷದ ನಾಯಕತ್ವ ವಹಿಸಿದುದಾಗಿ ತಿಳಿದು ಬಂದರೆ ತಾವು ಚುನಾವಣೆಯಲ್ಲಿ ಅವರಿಗೆ ಬೆಂಬಲ ಕೊಡುವುದಿಲ್ಲ ಎಂದು ಖಂಡಿತವಾಗಿ ಸಾರಿದರು. ಆದರೆ ಅಮೇರಿಕದ ಇಂದಿನ ಪರರಾಷ್ಟ್ರ ಧೋರಣ ಸಂ. ರಾ. ಸಂಘದ ಮೇಲೂ ಪೌರಸ್ತ್ಯ ಪ್ರಜಾ ಪ್ರಭುತ್ವಗಳ ಮೇಲೂ ಯಾವ ರೀತಿಯಾಗಿ ಪರಿಣಮಿಸಿವೆಯೆಂಬುದನ್ನು ಬಲ್ಲವರು ವ್ಯಾಲೇಸರ ಮಾತಿನ ಬೆಲೆಯನ್ನೂ ನೆಲೆಯನ್ನೂ ಸುಲಭವಾಗಿ ಅರಿಯಬಹುದಾಗಿದೆ. ಅಮೇರಿಕದ ಬಂಡವಾಲಿಗರೂ ಅವರ ಮುಖಪತ್ರಿಕೆಗಳೂ ಇಂದು ಯುದ್ಧೋನ್ಮುಖರಾಗುತ್ತಿದ್ದರೆ ಅದು ಆಶ್ಚರ್ಯವಲ್ಲ. ೧೯೪೮ರ ವೇಳೆಗೆ ಒದಗಬಹುದಾದ ಆರ್ಥಿಕ ಬಿಕ್ಕಟ್ಟು ಮತ್ತು ನಿರುದ್ಯೋಗ ಇವುಗಳಿಂದ ಪಾರಾಗಬೇಕಾದರೆ ಅಮೇರಿಕದ ಕಾರಖಾನೆಯ ಒಡೆಯರು ತಮ್ಮ ದೇಶದ ಜನರನ್ನು ಯುದ್ಧದಲ್ಲಿ ಮಗ್ನರನ್ನಾಗಿ ಮಾಡಲೇಬೇಕು, ಇಲ್ಲವೆ ದೇಶದಲ್ಲೆಲ್ಲ ಏಳಬಹುದಾದ ಕ್ರಾಂತಿ, ವಿಪ್ಲವಗಳನ್ನು ಎದುರಿಸಲು ಸಿದ್ಧರಾಗಬೇಕು. ಬಂಡವಲಶಾಹಿಯ ಹಾಗೂ ಕೈಗಾರಿಕೆಗಳ ಕೇಂದ್ರೀಕರಣ ಪದ್ಧತಿಯ ಮತ್ತು ವೈಜ್ಞಾನಿಕ ಯುದ್ಧೋಪಕರಣಗಳನ್ನು ಅನಗತ್ಯವಾದಷ್ಟು ತಯಾರಿಸುವದರ ದುಷ್ಪರಿಣಾಮವನ್ನು ಅವರ ಉಣ್ಣದೆ ಹೋದರೆ ಗತ್ಯಂತರವುಂಟೇ?

ಸಿಂಹಳದಲ್ಲಿ ಸಾಮಂತ ಸರಕಾರ

೧೯೪೬ ರಲ್ಲಿ ಲಾರ್ಡ ಸೋಲಬರಿಯವರ ಘಟನಾ ಸಮಿತಿ ಸೂಚನೆಯ ಮೇರೆಗೆ ಸಿಂಹಳಕ್ಕೆ ದಯಪಾಲಿಸಲಾದ ಸ್ವತಂತ್ರ ಘಟನೆಯನ್ವಯ ಮೊದಲನೆ ಮಂತ್ರಿಮಂಡಳ ಘಟಿಸಲು ಗವ್ಹರ್ನರರು ೧೯೪೭ರಲ್ಲಿ ಬಹುಸಂಖ್ಯಾಕ ಸಂಯುಕ್ತ ರಾಷ್ಟ್ರೀಯ ಪಕ್ಷದ ಧುರೀಣರಾದ ಡಿ. ಎಸ್. ಸೇನಾನಾಯಕ ಅವರನ್ನು ಆಮಂತ್ರಿಸಿದರು. ಸಿಂಹಳಕ್ಕೆ ಸಾಮಂತ ರಾಜ್ಯ ದಯಪಾಲಿಸುವ ಈ ಸಮಾರಂಭವು ೧೯೪೮ ರಲ್ಲಿ ಬ್ರಿಟಿಶ ಜನರಲರು ಕೊನೆಯ ಸಿಂಹಳ ಅರಸನನ್ನು ತಳ್ಳಿಹಾಕಿದ ಕ್ಯಾಂಡಿಕಿಂಗ್ಸ ಮೈದಾನದಲ್ಲಿ ನಡೆಯಿತು. ಹಿಂದಿನ ಅರಸರ ಪರಂಪರೆಯಂತೆ ಸೇನಾನಾಯಕ ಅವರು ಸಪತ್ನೀಕರಾಗಿ ಕ್ಯಾಂಡಿಯ ಪವಿತ್ರವಾದ ಬುದ್ಧನ ದೇವಾಲಯಕ್ಕೆ ಭೆಟ್ಟಿಕೊಟ್ಟು ತಮ್ಮ ಸರಕಾರಕ್ಕೆ ಆಶೀರ್ವಾದ ಕೋರಿದರು. ಈಗ ನೇಮಕವಾದ ಮಂತ್ರಿಮಂಡಳವು ೫-೬ ತಿಂಗಳಲ್ಲಿ ಬ್ರಿಟಿಶ ಸರಕಾರದೊಡನೆ ಸಂರಕ್ಷಣ ಹಾಗು ಪರರಾಷ್ಟ್ರ ವಿಷಯಗಳಲ್ಲಿ ಒಪ್ಪಂದ ಮಾಡಿಕೊಳ್ಳುವದೆಂದು ತಿಳಿಯುತ್ತದೆ. ಸಿಂಹಳಕ್ಕೆ ರಾಜಕೀಯ ಮುನ್ನಡೆಯುಂಟಾಗಲು ಈ ಪ್ರಕಾರ ಅನುಕೂಲ ಸಂದರ್ಭವೊದಗಿದ್ದನ್ನು ಹಿಂದುಸ್ತಾನ ಸರಕಾರವು ಸ್ವಾಗತಿಸಿದೆ.

ದೇಶದಲ್ಲಿಯ ಸಂಗ್ರಾಮ ಹಾಗೂ ಸಂಧಾನಗಳು

ಮೈಸೂರಿನ ಹೋರಾಟ—ಅ. ಭಾ. ಕಾಂಗ್ರೆಸ್ಸಿನ ಹೊಣೆ—ನಿಜಾಮ ಸರಕಾರದ ವ್ಯರ್ಥಾಲಾಪ--ಸಾಮಂತರಾಜ್ಯಗಳ ಸಂಯುಕ್ತಘೋಷಣೆ--ತಾರಾಸಿಂಗರ ಸ್ಪಷ್ಟೋಕ್ತಿ

ಮೈಸೂರು ಸತ್ಯಾಗ್ರಹದ ಮುನ್ನಡೆ

ಅಖಿಲ ಮೈಸೂರು ಕಾಂಗ್ರೆಸ ಸಮಿತಿಯ ಸದಸ್ಯರೂ ದಾವಣಗೆರೆ ತಾಲೂಕು ಕಾಂ. ಸಮಿತಿಯ ಕಾರ್ಯದರ್ಶಿಗಳೂ ಆದ ಶ್ರೀ ಬಿ ಲಕ್ಷ್ಮಣ ನಾಯಕರಿಗೆ ಮಾಯಕೊಂಡದಲ್ಲಿ ಅರಣ್ಯ ಸತ್ಯಾಗ್ರಹ ಮಾಡಿದ್ದರಿಂದ ೨೫ ತಿಂಗಳ ಕಠಿನ ಶಿಕ್ಷೆ ವಿಧಿಸಲಾಗಿದೆ. ಶಿಕ್ಷೆಯ ಲಕ್ಷಣವನ್ನು ನೋಡಿದರೆ ಅದನ್ನು ವಿಧಿಸಿದ್ದು ತಪ್ಪಿಗಾಗಿ ಅಲ್ಲ. ಪ್ರತೀಕಾರ ಮಾಡುವವರ ಸಲುವಾಗಿ ಎಂದು ಯಾರಿಗಾದರೂ ಎನ್ನಿಸದಿರದು. ಇಂತಹ ಶಿಕ್ಷೆಗಳಿಂದ ಜನತೆಯ ಬಲ ಮತ್ತು ಸರಕಾರದ ದೌರ್ಬಲ್ಯಗಳು ಹೆಚ್ಚುತ್ತಲೇ ಹೋಗುವದೆಂಬುದು ಅಧಿಕಾರಿಗಳಿಗಿನ್ನೂ ಅರಿವಾದಂತಿಲ್ಲ. ಆದದರಿಂದಲೇ ಅವರು ಹಿಂದುಮುಂದಿನಾಲೋಚನೆಯಿಲ್ಲದೆ ಈ ಪ್ರಕಾರ ಕ್ರೂರತರ ದಬ್ಬಾಳಿಕೆ ನಡೆಸುತ್ತಿದ್ದಾರೆ.

ಹೊಸದುರ್ಗದಲ್ಲಿ ಹದಿನಾರು, ಹೋಳಿಕೆರೆಯಲ್ಲಿ ಎಂಟು, ಮೊಳಕಾಲ್ಮುರುವಿನಲ್ಲಿ ಎಂಟು, ಮತ್ತು ಹಿರಿಯೂರಲ್ಲಿ ಶ್ರೀ ವೆಂಕಟಸುಬ್ಬಯ್ಯ ಮೊದಲಾದ ಹದಿನಾರು ಜನರು ಬಂಧಿಸಲ್ಪಟ್ಟು ಚಿತ್ರದುರ್ಗಕ್ಕೆ ಕರೆತರಲ್ಪಟ್ಟಿದ್ದಾರೆ. ಹಿರಿಯೂರಲ್ಲಿ ಗಂಧದ ಗಿಡಕಡಿದ ಒಬ್ಬನನ್ನು ಗಿಡಸಹಿತ ಹಿಡಿದುಕೊಂಡು ಬರಲಾಗಿದೆಯಂತೆ. ಇದೊಂದು ಪೋಲೀಸ ಸಾಹಸದ ಅದ್ಭುತವೆಂದು ಅಧಿಕಾರಿಗಳೆನ್ನಿಸಿರಬೇಕು. ಆದರೆ ಸಂಸ್ಥಾನದ ಅನೇಕ ಪ್ರದೇಶಗಳಲ್ಲಿ ಅಂತಹ ಎಷ್ಟೋ ಸಾವಿರಾರು ಗಂಧದ ಗಿಡಗಳನ್ನು ಕಡಿದು ಒಲೆಗೆ ಹಾಕಿ ನೀರು ಕಾಯಿಸಿದವರೆಷ್ಟು ಜನರೋ! ಅದನ್ನು ಇವರು ಬಲ್ಲರೇ? ಸತ್ಯಾಗ್ರಹಿಗಳ ದೃಢಪ್ರತಿಜ್ಞೆ, ಅಭೂತಪೂರ್ವ ಸಾಹಸ ಮತ್ತು ಅಖಂಡ ಪ್ರತಿಭಟನೆಗಳು ಅಪ್ರತಿಹತವಾಗಿ ಕಾರ್ಯ ನಡೆಸುತ್ತಿವೆಯೆಂಬುದಕ್ಕೆ ಹೊಸದುರ್ಗ, ಹಿರಿಯೂರು ಮತ್ತು ಚಳ್ಳಕೆರೆ ಮುಂತಾದ ಪಟ್ಟಣಗಳಲ್ಲಿ ಪರಿಸ್ಥಿತಿ ಕೈಮೀರಿ ಹೋಗಿದೆಯೆಂಬ ಸುದ್ದಿಯೇ ಆಧಾರವಾಗಿದೆ. ತಾಲೂಕು ಕಚೇರಿಗಳ ಮುಂದೆ ಯಶಸ್ವಿ ಪಿಕೆಟಿಂಗ ನಡೆದಿದ್ದು ತತ್ಪರಿಣಾಮವಾಗಿ ಹಿರಿಯೂರ ಕಚೇರಿಯು ಮೂರು ದಿನಗಳಿಂದ ಮುಚ್ಚಿರುವುದಾಗಿ ತಿಳಿದು ಬರುತ್ತದೆ. ಕಚೇರಿಯ ಮುಂದೆ "ಗುಲಾಮಸರಕಾರ ನಹಿ ರಖನಾ" ಎಂದು ಘೋಷಿಸಿದ್ದಕ್ಕೆ ೧೨ ವರ್ಷದ ಕೆಳಗಿನ ೨೦ ಬಾಲಕರು ಒಬ್ಬರಾದಮೇಲೊಬ್ಬರಂತೆ ಬಂಧಿಸಲ್ಪಟ್ಟರು.

ಹಾಸನದ ತಾಲೂಕು ಕಚೇರಿಯ ರಿಕಾರ್ಡ್ಸ್‌ಗೆ ಕೋಣೆಗೆ ತಾ ೨೩ ರಲ್ಲಿ ಬೆಂಕಿ ಹಚ್ಚುವ ಪ್ರಯತ್ನ ನಡೆಯಿತು. ಕೆಲವು ಕಾಗದಪತ್ರಗಳು ಸುಟ್ಟು ಹೋದವಂತೆ. ಕೋರ್ಟುಗಳ ಮುಂದೆ ಪಿಕೆಟಿಂಗ ನಡೆದದ್ದರಿಂದ ಪೋಲೀಸ ಕಾವಲು ಹೆಚ್ಚಾಗಿದೆ. ವಿದ್ಯಾರ್ಥಿಗಳು ಎರಡು ಪೀಪಾಯಿ ಸೇಂದಿ ಉರುಳಿಸಿದರು. ಶ್ರೀ ಹೊನ್ನಪ್ಪನವರ ನೇತೃತ್ವದಲ್ಲಿ ೯ ಜನರು ಅರಣ್ಯ ಸತ್ಯಾಗ್ರಹಮಾಡಿ ಈಚಲ ಗಿಡಗಳನ್ನು ಕಡಿದರೆಂದು ಗೊತ್ತಾಗಿದೆ.

ಇಷ್ಟಲ್ಲದೆ ಪೋಲೀಸರು ಲಾಠಿ ಪ್ರಹಾರ ಮಾಡಿದುದರ ಪರಿಣಾಮವಾಗಿ ತಾ. ೨೩ ರಲ್ಲಿ ಬೆಂಗಳೂರು ದಂಡಿನ ರಸೆಲ್‌ಮಾರ್ಕೆಟ ಪ್ರದೇಶದಲ್ಲಿ ಗಂಭೀರ ಪರಿಸ್ಥಿತಿಯುಂಟಾಗಿತ್ತಂತೆ. ಪೋಲೀಸರ ಮೇಲೆ ಕಲ್ಲುಗಳು ಬಿದ್ದವೆಂದು ಹೇಳಲಾಯಿತು. ಕಲ್ಲುಗಳಿಗಿಂತ ಕಠಿನವಾದ ಜನತಾಶಾಪ ಬೀಳುವುದನ್ನು ಬಹುಶಃ ಅವರು ಅರಿಯದಿರಬಹುದು. ಈಗ ಅರಿಯದಿದ್ದರೂ ಮುಂದೆ ಅದರ ಪರಿಣಾಮವನ್ನವರು ಅನುಭವಿಸಲೇಬೇಕಾದೀತು. ಮಹಾರಾಜರ ನಿಷ್ಪ್ರಯೋಜಕ ಘೋಷಣೆಯನ್ನು ೧೪ ನೆಯ ಪುಟದಲ್ಲಿ ಕೊಡಲಾಗಿದೆ. 'ಮಡಿಸಕಾಲಕ್ಕೆ ಮದ್ದಿಲ್ಲ, ಕೆಡುವ ಕಾಲಕ್ಕೆ ಬುದ್ಧಿಲ್ಲ' ಎಂದು ಅದನ್ನು ಕಂಡು ಹೇಳಬೇಕಾಗಿ ಬಂದಿದೆ.

ಅ. ಭಾ. ಕಾಂಗ್ರೆಸ ಕಾರ್ಯ ಸಮಿತಿಯ ಪ್ರಕಟನೆ

ಕಾಂಗ್ರೆಸ ಕಾರ್ಯ ಸಮಿತಿಯು ತಾ. ೨೪ ರಲ್ಲಿ ಹೊಸದಿಲ್ಲಿಯಲ್ಲಿ ಸೇರಿದಾಗ ರಾಷ್ಟ್ರದಲ್ಲಿಯ ಗಲಭೆಗೊಂದಾಂತರಗಳ ಪರಿಸ್ಥಿತಿಯ ಬಗ್ಗೆ ಕೆಳಗಿನ ಪ್ರಕಟಣೆಯನ್ನು ಹೊರಡಿಸಲಾಯಿತು.

"ಹಿಂದುಸ್ಥಾನದ ಇತಿಹಾಸದ ಅತ್ಯಂತ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಕಾಂಗ್ರೆಸ ಕಾರ್ಯಸಮಿತಿ ಸಭೆ ಸೇರಲಿದೆ. ಸ್ವತಂತ್ರ ಹಿಂದುಸ್ಥಾನ ಜನ್ಮವೆತ್ತಿ ಕೆಲ್ಸುವಷ್ಟರಲ್ಲಿ ಜಾತೀಯ ಗಲಭೆಗಳು ಪ್ರಾರಂಭವಾಗಿ ಹಿಂದುಸ್ಥಾನದ ಧವಲ ಕೀರ್ತಿಗೆ ಕಳಂಕ ತಂದದ್ದಲ್ಲದೆ ಲಕ್ಷೋಪಲಕ್ಷ ಜನರ ಮಾನ ಪ್ರಾಣ ಆಸ್ತಿಪಾಸ್ತಿಗಳ ವಿನಾಶವು ವರ್ಣನಾತೀತವಾಗಿ ಸಾಗಿದೆ. ಕಾಂಗ್ರೆಸ್ಸು ರಾಷ್ಟ್ರ ವಿಚ್ಛೇದವನ್ನೊಪ್ಪಿಕೊಂಡರೂ ಮುಸ್ಲಿಂ ಲೀಗು ಪ್ರತಿಪಾದಿಸಿದ ದ್ವಿರಾಷ್ಟ್ರ ತತ್ವವನ್ನು ಸ್ವೀಕರಿಸಿಲ್ಲ. ವಿಭಕ್ತ ಭಾರತದಲ್ಲೂ ಕೊಲೆ ಸುಲಿಗೆ ಕೊಳ್ಳಿ ಮೊದಲಾದ ಕುತ್ಸಿತ ಕೃತ್ಯಗಳು ನಡೆದುದು ಅತ್ಯಂತ ಶೋಚನೆಗೆ ಕಾರಣವಾಗಿದೆ.

ಈ ಅನರ್ಥ ಪರಂಪರೆಗಳು ಕಾಂಗ್ರೆಸ್ಸಿನ ರಾಷ್ಟ್ರೀಯತೆಯನ್ನು ಬದಲಿಸಲಾರವು. ಹಿಂದುಸ್ಥಾನವು ವಿವಿಧ ಧರ್ಮ ಮತ್ತು ಜನಾಂಗಗಳ ನಾಡು. ಇನ್ನು ಮುಂದೆಯೂ ಅದು ಹಾಗೇ ವಿಶ್ವಜನೀನ ವೃತ್ತಿಯಿಂದ ಸಾಗತಕ್ಕದ್ದೆಂಬುದನ್ನು ಮೂಲ ತತ್ವವನ್ನಾಗಿ ಘಟನಾ ಸಮಿತಿಯು ಒಪ್ಪಿರುತ್ತದೆ. ಅದರಂತೆ ನಡೆಯುವುದು ಪ್ರತಿಯೊಬ್ಬ ಹಿಂದೀಯನಕರ್ತವ್ಯ. ಹಿಂದುಸ್ಥಾನದಅಲ್ಪಸಂಖ್ಯಾಕರನ್ನೆಲ್ಲ ಕಾಂಗ್ರೆಸ್ ಸರಕಾರಗಳಿದ್ದಲ್ಲಿ ರಕ್ಷಿಸುವುದಾಗಿ ಕಾಂಗ್ರೆಸ್ಸು ಆಶ್ವಾಸನ ಕೊಡುತ್ತದೆ. ಆದರೆ ಅವರು ಬಹುಸಂಖ್ಯಾಕರಂತೆ ರಾಷ್ಟ್ರನಿಷ್ಠರಾಗಿರಬೇಕೆಂದು ಕಾಂಗ್ರೆಸ್ಸು ಬಯಸುತ್ತದೆ. ರಾಷ್ಟ್ರನಿಷ್ಠೆ ತೋರಿಸದ ನಾಗರಿಕರ ಅಸ್ತಿತ್ವವನ್ನು ಯಾವ ರಾಷ್ಟ್ರವೂ ಸಹಿಸಲಾರದು. ಆದರೂ ಹಿಂದುಸ್ಥಾನದಿಂದ ಹೋಗಬಯಸುವವರಿಗೆ ಸರ್ವ ಸೌಕರ್ಯಗಳನ್ನೂ ಒದಗಿಸಲಾಗುವುದು. ಪ್ರಾಣ ಮತ್ತು ಮಾನ ರಕ್ಷಣೆಗಾಗಿ ಪಾಕಿಸ್ತಾನದಿಂದ ಹಿಂದುಸ್ಥಾನಕ್ಕೆ ಬಂದ ಮತ್ತು ಬರುವ ಮುಸಲ್ಮಾನೇತರರನ್ನು ರಕ್ಷಿಸಲು ಕಾಂಗ್ರೆಸ್ಸು ಬದ್ಧವಿರುತ್ತದೆ. ಅವರು ಈ ರಾಷ್ಟ್ರದ ಜಾತ್ಯತೀತ ಘಟನೆಯನ್ನು ಮನ್ನಿಸಬೇಕು. ಇಷ್ಟಾದರೆ ಮಾತ್ರ ನಾವು ಪ್ರಬಲ ರಾಷ್ಟ್ರವನ್ನು ಕಟ್ಟಲು ಸಮರ್ಥರಾಗುತ್ತೇವೆ. ಮತ್ತು ಕಾಂಗ್ರೆಸ್ಸಿನ ಪೂರ್ಣ ಸ್ವರಾಜ್ಯದ ಕನಸು ನನಸಾಗುತ್ತದೆ."

ಮೇಲಿನ ಪ್ರಕಟನೆಯನ್ನು ರೂಪಿಸುವಲ್ಲಿ ರಾಷ್ಟ್ರಮಾನ್ಯರಾದ ಆಚಾರ್ಯ ಕೃಪಲಾನಿ, ಅಧ್ಯಕ್ಷ ಪಂ. ಜವಾಹರಲಾಲರು, ಸರದಾರ ವಲ್ಲಭಭಾಯಿಯವರು, ಕಾರ್ಯದರ್ಶಿ ಶಂಕರರಾವ ದೇವರು ಮೊದಲಾದ ಭಾರತವೀರರ ಕೈವಾಡವಿತ್ತು. ಅವರ ಮುತ್ಸದ್ದಿತನದಿಂದಲೇ ಇಂದಿನ ರಕ್ತರಂಜಿತ ಭಾರತವು ಶಾಂತಿಯ ಅಮೃತಾಸ್ವಾದವನ್ನು ಮಾಡಬೇಕಾಗಿದೆ. ಪಾಕಿಸ್ತಾನವು ಅನಾಹೂತ ಹಿಂಸೆಯನ್ನು ನಿಲ್ಲಿಸಿ, ಸ್ವಪರ ವಿನಾಶಕ ಮಾರ್ಗವನ್ನು ಬಿಟ್ಟು, ಮೇಲಿನ ಪ್ರಕಟನೆಯಲ್ಲಿಯ ತತ್ವವನ್ನು ತನ್ನಲ್ಲೂ ಅಮಲಿನಲ್ಲಿ ತಂದರೆ ಇಡೀ ಭರತಖಂಡದ ಯಶಶ್ಚಂದ್ರಿಕೆಯಲ್ಲಿಯ ಕಲಂಕ ದೂರವಾಗಿ ಉಭಯ ಸಾಮಂತ ರಾಜ್ಯಗಳೂ ಅಂತರ್ರಾಷ್ಟ್ರೀಯ ಮಾನ್ಯತೆಗೆ ಪಾತ್ರವಾಗಲನುಕೂಲವಾಗುವುದಲ್ಲವೇ?

ಹೈದರಾಬಾದಿನ ಸತ್ಯಾಗ್ರಹಿಗಳ ಹುಮ್ಮಸ್ಸು

ಪೋಲೀಸು ಇನ್‌ಸ್ಪೆಕ್ಟರರೊಬ್ಬರು ತಾ. ೨೩ ರಲ್ಲಿ ಶ್ರೀ ರಾಘವೇಂದ್ರರಾವ ಜಾಕಲಬ್ಬಿ ವಕೀಲರ ಮನೆಯನ್ನು ಶೋಧಿಸಿ ಅವರನ್ನು ಹೈದರಾಬಾದು ಸಂರಕ್ಷಣ ಕಾಯದೆಯನ್ವಯ ಬಂಧಿಸಿದರಂತೆ. ವಿದ್ಯಾರ್ಥಿ ಸತ್ಯಾಗ್ರಹಿಗಳಾದ ಮಲ್ಲನಗೌಡ ಚಂಬಯ್ಯ ಮೊದಲಾದವರು ಮೂರು ದಿನಗಳ ಹಿಂದೆ ಕುಕನೂರಲ್ಲಿ ಕಾಯದೆ ಭಂಗ ಮಾಡಿದ್ದರಿಂದ ಸೆರೆಹಿಡಿಯಲ್ಪಟ್ಟರೆಂದು ತಿಳಿದಿದೆ. ಪೋಲೀಸರ ಕೈ ಸೋಲಬೇಕು, ಸೆರೆಮನೆಗಳು ಮೈಸೂರಿನಲ್ಲಿಯಂತೆ ತುಂಬಿ ಒಡೆಯದಂತಾಗಬೇಕು, ಜನತಾ ಜನಾರ್ದನನ ಸ್ವಾತಂತ್ರ್ಯ ಸಿಂಹನಾದ ಅಳರಸನ ಹೃದಯ ಕುಹರವನ್ನು ಉತ್ಕಂಪಿಸಬೇಕು. ಅಲ್ಲಿಯ ವರೆಗೆ ಹೈದರಾಬಾದಿನ ಸತ್ಯಾಗ್ರಹಿಗಳ ಹುಮ್ಮಸ್ಸು ಕಾರ್ಯದಿಂದ ಹಿಂದಿರುಗದು, ಹಿಮ್ಮೆಟ್ಟದು.

ಮೇಲಿನ ಮಾತಿಗೆ ನಿದರ್ಶನವೆಂಬಂತೆ ಗಂಗಾವತಿಯ ಸಾರ್ವಜನಿಕ ಸಭೆಯೊಂದರಲ್ಲಿ ಪ್ರಮುಖ ವಿದ್ಯಾರ್ಥಿಗಳು ಕಾಯದೆ ಮುರಿದು ಭಾಷಣ ಮಾಡಿ ಸಾವಿರಾರು ಜನರಲ್ಲಿ ಸತ್ಯಾಗ್ರಹ ಹಸ್ತಪತ್ರಿಕೆಗಳನ್ನು ಹಂಚಿ ಬಂಧನಕ್ಕೊಳಗಾದರೆಂಬ ಸುದ್ದಿ ಬಂದಿದೆ. ಬಂಧಿಸಲು ಪೋಲೀಸರು ಹಿಂಜರಿದರಂತೆ, ಸರಕಲ ಇನ್‌ಸ್ಪೆಕ್ಟರರೇ ಸ್ವತಃ ಗಡಿಬಿಡಿಯಿಂದ ಉಡುಪು ಧರಿಸಿ ಧಾವಿಸಿ ಬಂದು ಸತ್ಯಾಗ್ರಹಿ ತರುಣರನ್ನು ಹಿಡಿಯಬೇಕಾಯಿತಂತೆ! ಜನಬಲವೇ ಜನಾರ್ದನನ ಬಲವೆಂಬುದು ಪೋಲೀಸರಿಗೆ ತಿಳಿದು ಬಂದಿರಬೇಕು; ಆದರೆ ಅವರ ಮೇಲಧಿಕಾರಿಗಳು ಹಾಗೂ ಮಹಾವೈಭವಶಾಲಿಗಳೆಂದು ತಿಳಿದುಕೊಂಡ ನಿಜಾಮರೂ ಅದನ್ನು ತಿಳಿದಂತೆ ಕಾಣುವುದಿಲ್ಲ. ಒನಕೆ ಚಿಗುರುವುದೂ ಅವರಿಗೆ ಬುದ್ಧಿ ಬರುವದೂ ಏಕಕಾಲದಲ್ಲೆನ್ನಬೇಕೆ? ಅವರ ಧನಬಲ ಯೋಧಬಲಗಳು ಜನರ ಛಲವನ್ನು ಮುರಿಯಲು ಸಾಕಾಗವೆಂಬುದರ ಅರಿವಿಲ್ಲದೆ ಹಿಂಸೆ, ಪ್ರತೀಕಾರ, ದಮನನಗಳನ್ನು ನಡೆಸುತ್ತಿದ್ದಾರೆ.

ಸುದ್ದಿ ಖಾತೆಯ ಮಂತ್ರಿಗಳಾದ ನವಾಬ ಮೊಯಿನ ನವಾಜ ಜಂಗರು ಪತ್ರಿಕೋದ್ಯೋಗಿಗಳ ಸಭೆಯಲ್ಲಿ ಸಂಸ್ಥಾನ ಕಾಂಗ್ರೆಸ ಚಳವಳದ ಕಡೆಗೆ ದೊರಳಿ ಹಿಂದೀ ಒಕ್ಕೂಟ ಧ್ವಜಕ್ಕೆ ಅವಮಾನವಾದುದು ಸುಳ್ಳು, ಸಾರ್ವಜನಿಕ ಸ್ಥಳಗಳಲ್ಲಿ ಸಂಸ್ಥಾನೇತರ ಧ್ವಜ ಹಾರಿಸಲು ಬರದು, ಸ್ವಚ್ಛಂದವಾಗಿ ಸರಕಾರದ ಕಾಯದೆಗಳ ಭಂಗವನ್ನು ಅದು ಸಹಿಸದು ಎಂದು ಮುಂತಾಗಿ ಹೇಳಿದರು. ಪೂರ್ವ ಪರಿಶೀಲನಸಮಿತಿಯನೇಮಕದಿಂದ ಪತ್ರಿಕಾ ಸ್ವಾತಂತ್ರ್ಯ ಅಪಹೃತವಾಗದು, ಹೊರಗಣ ಪತ್ರಿಕೆಗಳಿಗೆ ಹಾಗೂ ಅವರ ಪ್ರತಿನಿಧಿಗಳಿಗೆ ಆ ನಿಯಮ ಅನ್ವಯಿಸದು—ಎಂದು ಮುಂದೆ ಸಾಗಿ ಹೇಳಿದರೆಂದು ವರದಿ ಬಂದಿದೆ. ಮಂತ್ರಿ ಮಹಾಶಯರಿಗೆ ಕಾಲಜ್ಞಾನವನ್ನು ಮಾಡಿಕೊಡಬೇಕಾಗಿದೆಯೆಂದು ತೋರುತ್ತದೆ. ಸ್ವಚ್ಛಂದ ಕಾರಭಾರಕ್ಕೆ ಸ್ವಚ್ಛಂದ ಕಾಯದೆ ಭಂಗವೇ ಉತ್ತರವಲ್ಲವೇ? ಹೊರಗಣ ಪತ್ರಿಕೆಗಳನ್ನು ಒಳಗೆ ತರಿಸದಂತೆ ನಿರ್ಬಂಧಿಸುವದೊಂದನ್ನು ಬಿಟ್ಟರೆ ಅವುಗಳ ಮೇಲೆ ಅವರ ಸರಕಾರಕ್ಕೆ ಯಾವ ಅಧಿಕಾರವಿದೆ? ಮಾನವ ಪ್ರಗತಿಯ ಅರಿವಿಲ್ಲದ, ಪರಿಸ್ಥಿತಿಯ ಪರಿಜ್ಞಾನವಿಲ್ಲದ ಅಳರಸರು ಸ್ವತಃ ಅವಮಾನಕರವಾದ ರೀತಿಯಿಂದ ಅಧಿಕಾರಾರೂಢರಾಗಿರುವಾಗ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿಯೂ ಇಲ್ಲೆಂಬ ಹೇಡಿತನವನ್ನು ತೋರುವುದರಲ್ಲಿ ಆಶ್ಚರ್ಯವೇನು?

ಜನಬಲ ಕುಗ್ಗದಿರಲಿ, 'ಪ್ರಜಾ ಪ್ರತ್ಯಕ್ಷ ದೇವತಾ' ಎಂಬುದನ್ನು ಅದು ಸಾರಲಿ!

ದಿಲ್ಲಿಯ ಪರಿಷತ್ತು

ಭಾರತ ಮತ್ತು ಪಾಕಿಸ್ತಾನಗಳ ಪ್ರತಿನಿಧಿಗಳ ಸಭೆಯು ತಾ. ೧೯ ಮತ್ತು ೨೦ ರಲ್ಲಿ ಹೊಸದಿಲ್ಲಿಯಲ್ಲಿ ಕೂಡಿ ಉಭಯ ರಾಜ್ಯಗಳಲ್ಲಿ ಶಾಂತತೆಯನ್ನು ಸ್ಥಾಪಿಸುವಲ್ಲಿ ಎರಡೂ ಸರಕಾರಗಳು ಸಹಕರಿಸಬೇಕೆಂದೂ ತಿಕ್ಕಾಟಗಳಿಗೆ ಅವಕಾಶ ಕೊಡಬಾರದೆಂದೂ ಇದರಿಂದ ಉಭಯತ್ರ ಹಾನಿಯಿದೆಯೆಂದೂ ಅಭಿಪ್ರಾಯ ಪಟ್ಟಿತು. ಒಂದೇ ಪಕ್ಷದ ಪರವಾಗಿರುವ ಇಲ್ಲವೆ ವೃಥಾ ದ್ವೇಷಕ್ಕೆ ಎಡೆಗೊಡುವ ಹೊಣೆಗಾರ ಧುರೀಣರ ಹೊಣೆಯಿಲ್ಲದ ಹೇಳಿಕೆಯನ್ನು ತಡೆಯಬೇಕೆಂದು ನಿರ್ಣಯವಾಯಿತು. ಕೆಲ ವೃತ್ತಪತ್ರಗಳು ಸುಳ್ಳು ಸುದ್ದಿಗಳಿಗೆ ಹೆಚ್ಚು ಸ್ಥಳಕೊಟ್ಟು ಉದ್ರಿಕ್ತಭಾವದಿಂದ ಅಗ್ರಲೇಖಗಳನ್ನು ಬರೆಯುತ್ತಿರುವುದನ್ನು ಸಭೆಯ ಗಮನಕ್ಕೆ ತರಲಾಯಿತು. ಅಂಥವುಗಳನ್ನು ತಡೆಯಬೇಕೆಂದು ಸಭೆಯು ನಿರ್ಧರಿಸಿತು. ಅಲ್ಪಸಂಖ್ಯಾಕರು ಪ್ರತಿ ಸಾಮಂತ ರಾಜ್ಯದಲ್ಲೂ ಸುರಕ್ಷಿತವಾಗಿ ವಾಸಿಸುವಂತೆ ಯೋಜನೆಗಳನ್ನು ಕೈಕೊಳ್ಳಬೇಕೆಂದು ಉಭಯ ಸರಕಾರಗಳೂ ಒಪ್ಪಿದವು. ಉಭಯ ಸರ್ಕಾರಗಳಲ್ಲಿ ನಿಕಟ ಸಂಬಂಧ ಬೆಳೆಸಲು ಮತ್ತು ಸಂಯುಕ್ತ ವಿಚಾರವಿನಿಮಯಕ್ಕೆ ಅಸ್ಪದಕೊಡಲು ಉಭಯ ಸರಕಾರಗಳ ಮಂತ್ರಿಗಳು ಆಗಿಂದಾಗ ಒಮ್ಮೆ ದಿಲ್ಲಿಯಲ್ಲಿ ಇನ್ನೊಮ್ಮೆ ಲಾಹೋರಲ್ಲಿ ಸರದಿಯಂತೆ ಕೂಡತಕ್ಕದ್ದೆಂದು ನಿರ್ಣಯವಾಯಿತು. ಗಲಭೆಗಳು ಕಡಿಮೆಯಾಗುವವರೆಗೆ ತಾವು ತಮ್ಮ ಸನ್ನಿಧಿ ಕೇಂದ್ರವನ್ನು ಲಾಹೋರಿಗೆ ವರ್ಗಾಯಿಸುವದಾಗಿ ಪಾಕಿಸ್ತಾನದ ಮುಖ್ಯಮಂತ್ರಿಗಳು ತಿಳಿಸಿದರು. ನಿರಾಶ್ರಿತರ ಸಾಗಾಟದ ಬಗ್ಗೆ ಕೆಳಗಿನ ಸಂಯುಕ್ತ ಘೋಷಣೆ ಹೊರಡಿಸಲ್ಪಟ್ಟಿತು:—

"ಪಂಜಾಬಿನ ಅಶಾಂತ ಪರಿಸ್ಥಿತಿಯ ಮೂಲಕ ಮುಸ್ಲಿಂ ಹಾಗೂ ಹಿಂದುಗಳು ಸಾಮೂಹಿಕವಾಗಿ ಅನುಕ್ರಮವಾಗಿ ಪಶ್ಚಿಮ ಮತ್ತು ಪೂರ್ವ ಪಂಜಾಬುಗಳಿಗೆ ಹೋಗುತ್ತಿರುವದರಿಂದ ಅವರ ಪಯಣಕ್ಕೆ ಪ್ರಥಮ ಪ್ರಾಶಸ್ತ್ಯ ಕೊಡಬೇಕಲ್ಲದೆ ಆ ಬಗ್ಗೆ ಉಭಯತರೂ ಸಹಕರಿಸಿ ಪ್ರಸ್ತುತ ಪ್ರಯಾಣ ಸುಗಮವಾಗುವಂತೆ ನೋಡಿಕೊಳ್ಳುವುದು ಉಭಯ ಸರಕಾರಗಳ ಕರ್ತವ್ಯವೆಂಬುದನ್ನು ನಾವು ಒಪ್ಪುತ್ತೇವೆ. ಈ ಬಗ್ಗೆ ನಾವು ಸಾರ್ವಜನಿಕರ ಸಹಕಾರವನ್ನು ಅಪೇಕ್ಷಿಸುತ್ತೇವೆ. ಈ ನಿರಾಶ್ರಿತರ ಪ್ರಯಾಣವನ್ನು ಯಾವನು ತಡೆಯಲು ಯತ್ನಿಸುವನೋ ಅವನು ತನ್ನ ಜಾತಿ ಬಾಂಧವರಿಗೆ ದ್ರೋಹ ಬಗೆದಂತಾಗುವುದು. ಹೀಗೆ ತಡೆಯುವವರನ್ನು ಉಗ್ರ ಶಿಕ್ಷೆಗೆ ಗುರಿ ಮಾಡಲು ಸರಕಾರಗಳು ನಿರ್ಧರಿಸಿವೆ."

ಶೀಖಿಸ್ತಾನಕ್ಕೆ ಅರ್ಥವಿಲ್ಲ


ಹೊಸದಿಲ್ಲಿಯ ಸುದ್ದಿಗಾರರ ಸಭೆಯಲ್ಲಿ ಮಾಸ್ಟರ್ ತಾರಾಸಿಂಗರು ಭಾರತ ವಿಭಜನೆಯ ಪೂರ್ವದಲ್ಲಿ ತಾವು ಶೀಖಿಸ್ತಾನ ಕಟ್ಟುವ ಪ್ರಯತ್ನ ಮಾಡಿದುದಾಗಿಯೂ ಈಗ ವಿಭಕ್ತ ಭಾರತದಲ್ಲಿ ಬಹುಸಂಖ್ಯಾಕರೊಡನೆ ಒಂದಾಗಿಯೇ ಬಾಳುವುದಾಗಿಯೂ ಸಾರಿದರು. 'ನಾವು ಬಹು ಪಕ್ಷೀಯರಾದ ಹಿಂದುಗಳೊಡನೆ ಒಂದಾಗಿಯೆ ಬಾಳುವೆವು ಇಲ್ಲವೆ ಅವರೊಡನೆಯೆ ಅಳಿಯುವೆವು. ಹಿಂದುಗಳು ಉಳಿದು ಶೀಖರು ಸಾಯಲಾರರು, ಶೀಖರು ಉಳಿದು ಹಿಂದುಗಳು ಸಾಯಲಾರರು. ನಮ್ಮ ನಮ್ಮಲ್ಲಿ ಮತಭೇದಗಳಿರಬಹುದು, ಕಿಡಿಗಳೂ ಹಾರಬಹುದು; ಆದರೆ ಸಂಕಟ ಸಮಯದಲ್ಲಿ ನಾವು ಒಟ್ಟಾಗಿಯೆ ಉಳಿಯುವೆವು ಅಥವಾ ಸಾಯುವೆವು!" ಎಂದು ಅವರು ಉದ್ಗರಿಸಿದರು.

ತಾರಾಸಿಂಗರು ಮತ್ತೆ ಮುಂಬರಿದರು: "ಪಂಜಾಬಿನಲ್ಲಿ ನಮ್ಮ ಮೇಲೆ ಕಳೆದ ಮಾರ್ಚಿಯಿಂದಲೂ ದಾಳಿ ನಡೆಯುತ್ತಿವೆ. ಆದರೆ ನಾವು ಪ್ರತಿಭಟಿಸಲಿಲ್ಲ. ಇದನ್ನು ಕಂಡು ಹಿಂದುಗಳೂ ಶೀಖರೂ ಹೆಂಬೇಡಿಗಳೆಂದು ಅವರು ಹೀಯಾಳಿಸುತ್ತಿದ್ದರು. ತಮ್ಮ ಅನುಯಾಯಿಗಳ ಅತ್ಯಾಚಾರವನ್ನು ಮುಸ್ಲಿಂಮುಖಂಡರು ಖಂಡಿಸಲಿಲ್ಲ. ಅನಂತರ ಆಡಳಿತವನ್ನು ವಹಿಸಿಕೊಂಡ ಪಶ್ಚಿಮಪಂಜಾಬಿನ ಸರಕಾರವು ಕ್ರಮಬದ್ಧವಾಗಿ ಇಟ್ಟುಕೊಂಡಿದ್ದ ಶಸ್ತ್ರಾಸ್ತ್ರಗಳನ್ನು ನಮ್ಮ ಕಡೆಯಿಂದ ಕಸಿದುಕೊಂಡಿತು. ಶೀಖರ ಕೃಪಾಣಗಳನ್ನು ಪೋಲೀಸರೂ ಸೈನಿಕರೂ ಕಸಿದುಕೊಂಡರು. ಇಂಥ ಪರಿಸ್ಥಿತಿಯಲ್ಲಿ ಪಶ್ಚಿಮ ಪಂಜಾಬಿನಲ್ಲಿ ಸಶಸ್ತ್ರ ಹೋರಾಟ ಪ್ರಾರಂಭವಾಗಿ ಇಂದಿನ ಪರಿಸ್ಥಿತಿಗೆ ಬಂದು ಮುಟ್ಟಿದೆ. ಶೀಖರು ತಮಗಾಗಿ ಪ್ರತ್ಯೇಕ ಪ್ರಾಂತ ಕೇಳುತ್ತಿದ್ದಾರೆಂದು ಪೂರ್ವ ಪಂಜಾಬಿನಲ್ಲಿಯ ಮುಸ್ಲಿಮರು ಹೆದರಿ ಪಶ್ಚಿಮ ಪಂಜಾಬಿಗೆ ಓಡಿಹೋಗುತ್ತಿದ್ದಾರೆ. ಇದು ಮೂರ್ಖತನ. ನಮ್ಮ ಪ್ರಯತ್ನ ಸಫಲವಾಗಿದ್ದರೆ ಅದು ಹಿಂದು ಪ್ರಾಂತವಾಗುತ್ತಿತ್ತು. ಅಲ್ಲಿ ಕೂಡ ನಾವು ಅಲ್ಪಸಂಖ್ಯಾಕರಾಗಿಯೆ ಉಳಿಯುತ್ತಿದ್ದೆವು. ಮುಸ್ಲಿಮರು ಸುಮ್ಮನೆ ಈಗ ಅಪಪ್ರಚಾರ ನಡೆಸಿದ್ದಾರೆ. ಹಿಂದು— ಶೀಖರಲ್ಲಿ ಒಡಕುಹುಟ್ಟಿಸಲು ಮುಸ್ಲಿಮರು ಹೂಡಿದ ಆಟವಿದು."

ಮಾಸ್ಟರ ತಾರಾಸಿಂಗರ ಅಭಿಪ್ರಾಯವನ್ನು ಸರದಾರ ಹರನಾಮಸಿಂಗರು ಸಮರ್ಥಿಸಿದರು. ಪಶ್ಚಿಮ ಪಂಜಾಬಿನಲ್ಲಿ ಸುಮಾರು ೨ ಲಕ್ಷ ಜನ ಸತ್ತಿದ್ದರೆ ಅದರ ಅರ್ಧದಷ್ಟು ಮಾತ್ರ ಪೂರ್ವ ಪಂಜಾಬಿನಲ್ಲಿ ಸತ್ತಿದ್ದಾರೆಂದೂ ನಿರಾಶ್ರಿತರನ್ನು ಸುರಕ್ಷಿತವಾಗಿ ದಾಟಿಸುವುದರಲ್ಲಿ ಪಶ್ಚಿಮ ಪಂಜಾಬಿನ ಸರಕಾರಕ್ಕಿಂತ ಪೂರ್ವ ಪಂಜಾಬಿನ ಹಾಗೂ ಹಿಂದುಸ್ಥಾನದ ಸರಕಾರಗಳು ಹೆಚ್ಚು ಆಸ್ಥೆ ವಹಿಸಿವೆಯೆಂದೂ ತಾರಾಸಿಂಗರೆಂದರು. ಇದರಿಂದ ಮುಸ್ಲಿಮರ ಜಂಬೂಕನೀತಿಯು ಸ್ಪಷ್ಟವಾಗುತ್ತದೆ; ಹಿಂದು ಶೀಖರ ತಾಳ್ಮೆ ಮತ್ತು ಔದಾರ್ಯಗಳು ವ್ಯಕ್ತವಾಗುತ್ತವೆ. 'ಹುಟ್ಟುಗುಣ ಗಟ್ಟಹತ್ತಿದರೂ ಬಿಡದು' ಎಂಬ ಮಾತಿನಂತೆ ಪಾಕಿಸ್ತಾನ ಪಂಡಿತರು ತಮ್ಮ ಕುನೀತಿಯನ್ನು ಬಿಡುವುದುಂಟೇ?

ಪಟ್ಟಾಭಿಯವರ ಪ್ರಕಟನೆ

ಅ. ಭಾ. ಸಂ. ಪ್ರ. ಪರಿಷತ್ತಿನ ಅಧ್ಯಕ್ಷರಾದ ಡಾ. ಪಟ್ಟಾಭಿ ಸೀತಾರಾಮಯ್ಯನವರು ಮೈಸೂರ ಸತ್ಯಾಗ್ರಹದ ಬಗ್ಗೆ ಒಂದು ಪ್ರಕಟನೆ ಹೊರಡಿಸಿ, ಅದಷ್ಟು ಬೇಗ ಜನರೊಡನೆ ಒಪ್ಪಂದ ಮಾಡಿಕೊಂಡು ಯೋಗ್ಯ ಸಮಯದಲ್ಲಿ ಘೋಷಣೆ ಮಾಡಿದರೆ, ದಿವಾಣರೂ ಜನರೂ ಇನ್ನೂ ಸಹಕರಿಸಬಹುದಾಗಿದೆಯೆಂದು ಹೇಳಿದ್ದಾರೆ. ಮೈಸೂರ ಸರಕಾರವು ಹಟದ ಧೋರಣೆ ಕೈಕೊಂಡಿದ್ದರಿಂದ ಜನರು ಸ್ವಾತಂತ್ರ್ಯಕ್ಕಾಗಿ ಪ್ರಚಂಡ ಹೋರಾಟ ಹೂಡಬೇಕಾಯಿತು ಎಂದು ಅವರು ಹೇಳಿದ್ದಾರೆ.



ಪಾಲಿಸ್ತಾನದ ಪ್ರಕರಣ

ಸಂಯುಕ್ತ ರಾಷ್ಟ್ರ ಸಂಘವು ಆಚರಣಾರ್ಹವಾದ ಒಂದು ಯೋಜನೆಯನ್ನು ಪಾಲಿಸ್ತಾನದ ಪ್ರಶ್ನೆಯನ್ನು ಇತ್ಯರ್ಥ ಪಡಿಸುವದರ ಸಲುವಾಗಿ ತಯಾರಿಸಿಕೊಡದೆ ಹೋದರೆ ಪಾಲಿಸ್ತಾನದ ಅಧಿಕೃತ ರಕ್ಷಕ ರಾಷ್ಟ್ರವಾದ ಬ್ರಿಟನ್ನು ಅದರ ರಕ್ಷಣೆಯ ಹೊಣೆಯನ್ನು ಬಿಟ್ಟುಕೊಟ್ಟು ಆ ಬಗ್ಗೆ ಇಡಲಾಗಿರುವ ೧, ಲಕ್ಷ ಬ್ರಿಟಿಶ ಸೈನಿಕರನ್ನು ಹಿಂದಕ್ಕೆ ಕರೆಸಿಕೊಳ್ಳುವದಾಗಿ [ಹೇಳಿಕೆ ಕೊಟ್ಟಿದು ವಿಶ್ವಸನೀಯವೆಂದು ಹೇಳಲಾಗಿದೆ. ಈಗಾಗಲೇ ಸಂಯುಕ್ತ ರಾಷ್ಟ್ರ ಸಂಘವು ತಯಾರಿಸಿಕೊಟ್ಟ ಪಾಲಿಸ್ತಾನ ವಿಭಜನಾ ಯೋಜನೆಯು ಸರ್ವಪಕ್ಷ ಸಮ್ಮತವೆನಿಸಲಿಲ್ಲ; ಮತ್ತು ಪಾಲಿಸ್ತಾನದಲ್ಲಿ 'ಪಾಕಿಸ್ತಾನ'ಕ್ಕೆಡೆಗೊಡಲಾರೆವೆಂದು ಅರಬರು ಖಂಡಿತೋಕ್ತಿಯಿಂದ ಹೇಳಿರುವುದಲ್ಲದೆ ಯಾವದಾದರೊಂದು ನಿರ್ಣಯವನ್ನು ಒತ್ತಾಯದಿಂದ ಹೇರಬಂದರೆ ಅದರ ಪ್ರತಿಭಟನೆಗೆಂದು ಅರ್ಧ ಲಕ್ಷ ಸೈನಿಕರನ್ನು ತರಬೇತುಮಾಡುತ್ತಲಿದ್ದಾರೆಂದು ತಿಳಿದುಬಂದಿದೆ. ಭಾರತವೇನೋ ಅರಬ ಪಕ್ಷಕ್ಕೆ ಬೆಂಬಲವಿತ್ತಿದೆ. ಆದರೆ ಯೆಹೂದಿಗಳ ಬಗ್ಗೆ ಅಲಕ್ಷ್ಯ ಅಥವಾ ವಿರೋಧ ಮಾಡಲು ಇಂಗ್ಲಂಡಿನ ಕೂಲಿಕಾರ ಸರಕಾರಕ್ಕೆಲ್ಲಿಯ ಹಕ್ಕಿದೆ? ಸಮಯ ಸಾಧಕತೆಯಲ್ಲಿ ಅಂಗ್ಲೋ—ಅಮೇರಿಕನ್ನರು ಎಲ್ಲರಿಗಿಂತಲೂ ಅಗ್ರಗಣ್ಯರು. ಆದರಿಂದಲೇ ಯೆಹೂದಿಗಳಿಗಿತ್ತ ಆಶ್ವಾಸನವನ್ನು ಬ್ರಿಟನ್ನಿಂದು ಅಲಕ್ಷ್ಯದಿಂದ ಕಾಣುತ್ತಿದೆ. ರಶಿಯ ಅರಬರಿಗೆ ಬೆಂಬಲವಿತ್ತೀತೆಂದೂ ಅರಬರೊಡನೆ ನಿಷ್ಠುರವಾಗಿ ನಡೆದುಕೊಂಡರೆ ಮಧ್ಯ ಪೂರ್ವದ ಎಣ್ಣೆಯ ಸವಲತ್ತುಗಳಲ್ಲಿ ತಮಗಿಂತ ರಶಿಯಕ್ಕೆ ಹೆಚ್ಚುಪಾಲು ದೊರೆವಂತಾದೀತೆಂದೂ ಅಂಗ್ಲೋ—ಅಮೇರಿಕನ್ನರ ಭಯ. ಇಂತಹ ಪ್ರಸಂಗದಲ್ಲಿ ತನ್ನ ಪ್ರಾಮಾಣಿಕತೆಯನ್ನು ಪ್ರದರ್ಶಿಸಲು ಬ್ರಿಟನ್ನಿಂದು ಪಾಲಿಸ್ತಾನವನ್ನು ಅರಕ್ಷಿತವಾಗಿ ಮಾಡುವ ಹೆದರಿಕೆಯನ್ನು ಹಾಕಿದೆ. ಪ್ರತಿನಿತ್ಯವೂ ಯೆಹೂದಿಗಳ ಚಟುವಟಿಕೆಯನ್ನು ಹತ್ತಿಕ್ಕಲು ಬ್ರಿಟಿಶ ಅಧಿಕಾರಿಗಳು ಕಾರ್ಯಕ್ರಮ ತೆಗೆದುಕೊಳ್ಳುತ್ತಲಿದ್ದಾರೆ; ಅವರ ಅತ್ಯಾಚಾರ, ಕ್ರಾಂತಿಕಾರಕಚರ್ಯೆ ಇವುಗಳನ್ನು ಹಳಿಯುವದು ದ್ವೇಷ ಪ್ರದರ್ಶನ ಮಾಡುವವರೆಗೂ ಹೋಗಿದೆ. ಅಮೇರಿಕ ಬೆಂಬಲವನ್ನು ಯಾವ ಪಕ್ಷಕ್ಕೆ ಕೊಡುವುದೋ ಅದಕ್ಕೆ ಬ್ರಿಟನ್ನು ಬೆಂಬಲ ಕೊಡದಿರದು. ಗೆದ್ದೆತ್ತಿನ ಬಾಲಹಿಡಿಯದಿದ್ದರೆ ಗತಿಯುಂಟೇ?

ಜರ್ಮನಿಯಲ್ಲಿ ರಶಿಯದ ಸೈನ್ಯ ಸಿದ್ಧತೆ

ನಾಳಿನ ನವೆಂಬರದಲ್ಲಿ ಕೂಡಲಿರುವ ಲಂಡನ್ ಪರಿಷತ್ತು ಅಯಶಸ್ವಿಯಾಗಿ ಜರ್ಮನಿಯ ಭವಿತವ್ಯದ ವಿಷಯದಲ್ಲಿ ಪೂರ್ವ ಪಶ್ಚಿಮ ರಾಷ್ಟ್ರಗಳಲ್ಲಿರುವ ಮೂಲಭೂತ ಮತಭೇದವು ಬಹಿರಂಗವಾಗಿ, ಅಪಾಯಕರ ಪರಿಸ್ಥಿತಿಯುಂಟಾದರೆ ಅದನ್ನು ಇದಿರಿಸಲು ತಕ್ಕ ಮುಂಜಾಗ್ರತೆಯೆಂದು ಈಗಾಗಲೆ ರಶಿಯವು ತನ್ನ ಆಡಳಿತಕ್ಕೊಳಪಟ್ಟ ಜರ್ಮನಿಯ ಆಯಕಟ್ಟಿನ ಪ್ರದೇಶಗಳಲ್ಲಿ ತನ್ನ ಸೇನೆಯನ್ನು ಆಧುನಿಕ ಯುದ್ಧೋಪಕರಣಗಳಿಂದ ಸುಸಜ್ಜಿತವನ್ನಾಗಿ ಮಾಡಿ ಇಡಹತ್ತಿದೆ. ಈ ಪೂರ್ವ ಸಿದ್ಧತೆಯನ್ನು ಶರತ್ಕಾಲದ ಚಟುವಟಿಕೆಯೆಂದು ಅಧಿಕೃತವಾಗಿ ಕರೆಯಲಾಗಿದೆ. ಇನ್ನು ಆರು ವಾರಗಳಲ್ಲಿ ಚತುರ್ರಾಷ್ಟ್ರ ಸಮ್ಮೇಲನ ನಡೆಯಲಿದ್ದು ಅದರಲ್ಲಿ ಜರ್ಮನಿಯ ಬಗ್ಗೆ ಬ್ರಿಟನ್, ಅಮೇರಿಕ, ರಶಿಯ, ಫ್ರಾನ್ಸ ಈ ನಾಲ್ಕೂ ರಾಷ್ಟ್ರಗಳ ಧೋರಣಗಳನ್ನು ಚರ್ಚಿಸಲಾಗುವುದು. ಕಳೆದ ನಾಲ್ಕು ವಾರಗಳಲ್ಲಿ ಸ್ಕ್ವಾಪರನ್ನಿನಲ್ಲಿಯ ೫೦೦ ಜರ್ಮನ್ ಗೃಹಸ್ಥರಿಗೆ ರಶಿಯದ ಸೈನಿಕರಿಗೆ ಸ್ಥಳ ಕೊಡಲು ಆಜ್ಞೆ ಮಾಡಲಾಗಿದೆ. ರಶಿಯದ ಬಾಲ್ಟಿಕ್ ಗಡಿಯಲ್ಲಿ ಈಗ ಕಂಡಕಂಡಲ್ಲಿ ರಶಿಯದ ಸೈನಿಕರು ತುಂಬಿಕೊಂಡಿದ್ದಾರೆ. ರಶಿಯದ ಈ ಹೊಣೆಗಾರಿಕೆಯ ಪೂರ್ವ ಸಿದ್ಧತೆಯಿಂದ ಸಮರ ತಂತ್ರದಲ್ಲಿ ಹಿಂದುಳಿದ ಪೌರಸ್ತ್ಯ ರಾಷ್ಟ್ರಗಳು ಬುದ್ಧಿಗಲಿಯಬೇಕಾಗಿದೆ. ಸ್ವತಂತ್ರವಾಗಿ, ಸಾಗರಮೇಖಲವಾಗಿ, ಸ್ವಯಂಪೂರ್ಣವಾಗಿ ನಿಂತ ಅಮೇರಿಕವೇ ಇಂದು ಆಟಂ ಬಾಂಬುಗಳ ತಯಾರಿಕೆ, ವೈಮಾನಿಕನಿಲ್ಲದ ವಿಮಾನಗಳ ರಚನೆ ಇತ್ಯಾದಿ ಯುದ್ಧೋಪಯೋಗಿಯಾದ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುತ್ತಿರುವಾಗ ತದಿತರ ರಾಷ್ಟ್ರಗಳು ತಮ್ಮ ಸುರಕ್ಷಿತತೆಯ ಬಗ್ಗೆ ಎಷ್ಟು ಮುಂಜಾಗ್ರತೆ ಮತ್ತು ಪೂರ್ವ ಸಿದ್ಧತೆ ಮಾಡಿದರೂ ಕಡಿಮೆಯೇ ಅಲ್ಲವೇ? 'ಯುದ್ಧ ಕಾಲೇ ಶಸ್ತ್ರಾಭ್ಯಾಸಃ' ಎಂಬಂತೆ ೧೧ ತಾಸಿಗೆ ಯುದ್ಧ ಸಿದ್ಧತೆ ನಡೆಸುವಂತಾದುದರಿಂದಲೇ ಆಜಾದ ಹಿಂದ ಫೌಜು ಸೋತುಹೋಗಬೇಕಾಯಿತು. ರಾಜರಿಗೆ (ಸರಕಾರಗಳಿಗೆ) ಮಿತ್ರರಿಲ್ಲವೆಂಬ ಗಾದೆಯಂತೆ ಸತ್ಯಸ್ಥಿತಿಯಿರುವುದರಿಂದ ರಶಿಯದ ಮುಂಜಾಗ್ರತೆಯನ್ನು ಆದರ ಆಕ್ರಮಣಶೀಲತೆಯೆಂದು ಆಂಗ್ಲೋ ಅಮೇರಿಕನರಷ್ಟೇ ಜರಿದರೂ ರಾಜಕೀಯ ರಂಗದಲ್ಲಿ ಅನಾಗತವಿಧಾತರೆನಿಸುವವರು ರಶಿಯದ ದೂರದೃಷ್ಟಿಯನ್ನು ಮೆಚ್ಚದಿರರು.

ದಕ್ಷಿಣ ಆಫ್ರಿಕದ ಹಿಂದೀಯರ ಸಮಸ್ಯೆ

ಸ್ಮಟ್ಸ ಸಾಹೇಬರು ಹಿಂದೀಯರ ಮೇಲೆ ಹೇರಿದ ನಿರ್ಬಂಧಗಳ ವಿರುದ್ಧ ಸತ್ಯಾಗ್ರಹ ಪ್ರಾರಂಭವಾದುದು, ಹಿಂದುಸ್ತಾನ ಸರಕಾರ ದ. ಆಫ್ರಿಕದ ಒಕ್ಕೂಟ ಸರಕಾರದ ಮೇಲೆ ಆರ್ಥಿಕ ಬಹಿಷ್ಕಾರ ಹಾಕಿದುದು ಮತ್ತು ಸಂಯುಕ್ತ ರಾಷ್ಟ್ರ ಸಂಘಕ್ಕೆ ದೂರು ಕೊಟ್ಟಿದು ಮುಂತಾದ ಸಂಗತಿಗಳು ಆಗಲೇ ಪ್ರಸಿದ್ಧವಿವೆ. ಈ ಸಂದರ್ಭದಲ್ಲಿ ಪಾಕಿಸ್ತಾನದ ಪ್ರತಿನಿಧಿ ಮಂಡಲದ ನಾಯಕರಾದ ಸರ್ ಮಹಮ್ಮದ್ ಜಾಫರುಲ್ಲಾ ಖಾನರು ದ. ಆಫ್ರಿಕದಲ್ಲಿಯ ಹಿಂದೀಯರ ಬಗ್ಗೆ ತಮ್ಮ ಸಂಪೂರ್ಣ ಸಹಾನುಭೂತಿ ಇದೆಯೆಂದೂ ಸಂಪೂರ್ಣ ನಾಗರಿಕ ಹಕ್ಕುಗಳನ್ನು ಪಡೆವ ಅವರ ಹೋರಾಟಕ್ಕೆ ಪಾಕಿಸ್ತಾನದ ನಿರ್ವಿಶೇಷಣ ಪೂರ್ಣ ಬೆಂಬಲವಿದೆಯೆಂದೂ ದ. ಆಫ್ರಿಕದ ಹಿಂದೀ ನಿಷ್ಕ್ರಿಯ ಪ್ರತೀಕಾರ ಸಂಘದ ಸದಸ್ಯನೊಬ್ಬನಿಗೆ ಹೇಳಿದ್ದಾಗಿ ತಿಳಿದು ಬಂದಿದೆ. ಅಲ್ಲದೆ ನ್ಯೂಯಾರ್ಕಿನಲ್ಲಿ ಸೆಪ್ಟೆಂಬರ ೧೮ ರಲ್ಲಿ ಸಂ. ರಾ. ಸಂಘದ ಸಭೆಸೇರಿದಾಗ ಸೀನಾರ ಕಾರ್ಲೋಸ ರೊಮುಲೋರವರು ಕಳೆದ ವರ್ಷ ಸಭೆ ಕೊಟ್ಟ ನಿರ್ಣಯವನ್ನು ಸ್ಮಟ್ಸರ ಸರಕಾರ ಪಾಲಿಸದಿದ್ದುದರತ್ತ ಸಭೆಯ ಗಮನ ಸೆಳೆದರು. ಸ್ಮಟ್ಸರ ಸರಕಾರವು ತನ್ನ ಧೋರಣವನ್ನೂ ಶಾಸನಗಳನ್ನೂ ಏಶಿಯದ ಜನಾಂಗಗಳಿಗೆ ಸಂಬಂಧಿಸಿದ ಸಂಯುಕ್ತ ರಾಷ್ಟ್ರ ಸಂಘದ ತತ್ವಗಳನುಸಾರವಾಗಿ ಪರಿವರ್ತಿಸಬೇಕೆಂದು ಸಂಘದ ಸಭೆ ತೀರ್ಮಾನಿಸಿದ್ದರೂ ದ. ಆಫ್ರಿಕ ಹಾಗೆ ನಡೆದುಕೊಳ್ಳದಿದ್ದುದು ಪ್ರತಿಷೇಧಾಧಿಕಾರದ ದುರುಪಯೋಗಕ್ಕಿಂತಲೂ ಹೆಚ್ಚು ನಿಂದ್ಯವಾದುದೆಂದು ಅವರು ಹೇಳಿದರು; ಮತ್ತು ಸಂಘದ ನಿರ್ಣಯಗಳಿಗೆ ತಲೆ ಬಾಗದ ಸದಸ್ಯ ರಾಷ್ಟ್ರಗಳ ವಿರುದ್ಧ ಕ್ರಮತೆಗೆದುಕೊಳ್ಳಬೇಕೆಂದೂ ಅವರು ವಾದಿಸಿದರು. ಶ್ರೀ ರೊಮುಲೋರವರು ಕಾಲೋಚಿತ ಸಲಹೆಯಿತ್ತಿದ್ದಾರೆಂಬುದನ್ನು ಯಾರೂ ಅಲ್ಲಗಳೆಯಲಾರರು. ಸಂ. ರಾ. ಸಂಘವು ಕೇವಲ ಠರಾವು ಪಾಸು ಮಾಡುವ ಸಂಘವಾಗಿ ಉಳಿದರೆ ಹಿಂದಿನ 'ಲೀಗ್ ಆಫ್ ನೇಶನ್ಸಿ'ನಂತೆಯೇ ತನ್ನ ತೀರ್ಪನ್ನು ಕಾರ್ಯರೂಪಕ್ಕೆ ತರಲಾಗದ ನಿರ್ವೀರ್ಯವೂ ನಿರುಪಯೋಗಿಯೂ ಆದ ಸಂಸ್ಥೆಯೆನಿಸದಿರದು. ಆಗಲೇ ರಶಿಯವು ಅದರಿಂದ ಹೊರಬೀಳಬಹುದೆಂಬ ಸುದ್ದಿ ಹಬ್ಬಿದೆ. ಬಲಿಷ್ಠ ರಾಷ್ಟ್ರಗಳು ಹೊರಬಿದ್ದರೆ ಅವುಗಳ ಅನುಯಾಯಿ ರಾಷ್ಟ್ರಗಳೂ ಹೊರಬೀಳುವುದು ಖಂಡಿತ. ಹೀಗೆ ದ. ಆಫ್ರಿಕದ ಹಿಂದೀಯರ ಪ್ರಶ್ನೆಯು ಪ್ರಸ್ತುತ ಸಂಘದ ಶಕ್ತಿಗೆ ನಿಕಷವಾಗಿದೆಯೆನ್ನಬಹುದು. ಸ್ಮಟ್ಸ ಸಾಹೇಬರು ಇದರ ಮಧ್ಯೆ ಪಾಕಿಸ್ತಾನದ ಪ್ರೀತಿ ಸಂಪಾದಿಸಿ ಅದರ ಕಣ್ಣಿಗೆ ಮಣ್ಣೆರಚಲು ಸ್ನೇಹ ಮಂಡಲವೊಂದನ್ನು ಕಳುಹಲಿರುವರೆಂಬ ಸುದ್ದಿಯಿದೆ. ಇದಕ್ಕೆ ಪಾಕಿಸ್ತಾನ ಬಲಿಬೀಳದೆಂದು ನಮ್ಮ ನಂಬಿಗೆ.

ಸಂಯುಕ್ತ ರಾಷ್ಟ್ರ ಸಂಘದಲ್ಲಿ ಹಿಂದುಸ್ತಾನದ ಸದಸ್ಯತ್ವ!

ಇತ್ತೀಚಿಗೆ ಸಂಯುಕ್ತ ರಾಷ್ಟ್ರ ಸಂಘದ ಸ್ಟಿಯರಿಂಗ ಕಮೀಟಿಯ ಸಭೆಯಲ್ಲಿ ಹಿಂದುಸ್ತಾನಕ್ಕೆ ನ್ಯಾಯವಾದ ಸದಸ್ಯತ್ವವಿಲ್ಲ, ಅದು ಮಹಾದ್ವಾರದಿಂದ ಸಂಘವನ್ನು ಪ್ರವೇಶಿಸದೆ ಬಿಲದ್ವಾರದಿಂದ ತಲೆಹಾಕಿದೆಯೆಂದು ಅರ್ಜಂಟೀನಾದ ಪ್ರತಿನಿಧಿ ಹೇಳಿದನು. ಪಾಕಿಸ್ತಾನ ಹಿಂದುಸ್ತಾನಗಳೆರಡೂ ಹೊಸ ಸಾಮಂತರಾಜ್ಯಗಳೆಂದೂ ಹಳೆಯ ಹಿಂದುಸ್ತಾನವಿಂದಿಲ್ಲವಾದುದರಿಂದ ಅವೆರಡಕ್ಕೂ ಸಮಾನ ನ್ಯಾಯದಿಂದ ಸದಸ್ಯತ್ವವನ್ನು ಕೊಡಬೇಕೆಂದೂ ಅವನು ವಾದಿಸಿದನು. ಅದಕ್ಕುತ್ತರವಾಗಿ ಹಿಂದುಸ್ತಾನದ ಪ್ರತಿನಿಧಿಗಳಾದ ಸರ್ ಫಾಜಿಲ್ ಅಲಿಯವರು ಪಾಕಿಸ್ತಾನ ಸ್ಥಾಪನೆಯಿಂದ ಹಿಂದುಸ್ತಾನದ ವ್ಯಕ್ತಿತ್ವಕ್ಕೆ ಭಂಗವುಂಟಾಗಲಿಲ್ಲೆಂದೂ ಈ ಅಭಿಪ್ರಾಯವನ್ನು ಪ್ರಸ್ತುತ ಸಂಘದ ಪ್ರಧಾನ ಕಾರ್ಯದರ್ಶಿಗಳು ಒಪ್ಪಿರುವರೆಂದೂ ಬ್ರಿಟಿಶ ಪಾರ್ಲಿಮೆಂಟಿನ ಕಾಯದೆಯ ಪ್ರಕಾರ ಹಿಂದುಸ್ತಾನದ ವಿಭಜನೆಯಲ್ಲಿ ಅದರ ಪರರಾಷ್ಟ್ರ ವ್ಯವಹಾರವೆಲ್ಲ ಹೊಸ ಹಿಂದುಸ್ತಾನಕ್ಕೆ ಸೇರುವದೆಂದೂ ಹೇಳಿ, ಹಿಂದುಸ್ತಾನದ ಸದಸ್ಯತ್ವವನ್ನು ಸಮರ್ಥಿಸಿದರು. ಅದರಮೇಲೆ ಬ್ರಿಟಿಶರ ಅಟಾರ್ನಿ ಜನರಲ್ಲರಾದ ಸರ್ ಹಾರ್ಟ್ಲೆ ಶಾಕ್ರಾಸರು ಹಿಂದುಸ್ತಾನ ಪಾಕಿಸ್ತಾನಗಳ ಸ್ಥಾನ ಭೇದವನ್ನು ಎತ್ತಿಹಿಡಿದು ಹಿಂದಿನಿಂದ ಇದ್ದ ಅದರ ವ್ಯಕ್ತಿತ್ವ ಹಾಗೂ ಸಂಬಂಧಗಳಲ್ಲಿ ವ್ಯತ್ಯಾಸವೇನೂ ಆಗಿಲ್ಲವೆಂದು ವಿಶದಪಡಿಸಿ ಪಾಕಿಸ್ತಾನಕ್ಕೆ ಸದಸ್ಯತ್ವ ಕೊಡಬೇಕೆಂಬ ಅರ್ಜಂಟೀನದ ಸೂಚನೆಯನ್ನು ಹಿಂತೆಗೆದುಕೊಳ್ಳಲು ಬಿನ್ನವಿಸಿದರು. ಆಗ ಅರ್ಜಂಟೀನದ ಪ್ರತಿನಿಧಿಯಾದ ಸೀನಾರ ಜೋಸ ಅರ್ಸನು ಸಂಯುಕ್ತ ರಾಷ್ಟ್ರ ಸಂಘವನ್ನು ಹಿಂದುಸ್ತಾನ ಪ್ರವೇಶಿಸಿದ ಬಗೆಗೆ ಹಿಂದೀ ಪ್ರತಿನಿಧಿ ಮಂಡಳಕ್ಕೆ ಸಮಾಧಾನವಿದ್ದರೆ ತಾನು ತನ್ನ ಸೂಚನೆಯನ್ನು ಹಿಂತೆಗೆದುಕೊಳ್ಳುವದಾಗಿ ಹೇಳಿದನು. ಇದರಿಂದ ರಾಜಕಾರಣಗಳಲ್ಲಿ—ನಿರ್ದಿಷ್ಟ ಸಂಬಂಧವಿಲ್ಲದಲ್ಲೂ ಸಂಚು ಹೊಂಚುಗಳಿಂದ ಹೇಗೆ ರಾಷ್ಟ್ರಗಳು ಭವಿಷ್ಯದ ಕನಸು ಕಟ್ಟಿಕೊಂಡು ಹೊಸ ಹೊಸ ತಂತ್ರಗಳನ್ನು ನಡೆಸಲುಪಕ್ರಮಿಸುವವೆಂಬುದು ಸ್ಪಷ್ಟವಾಗುತ್ತದೆ. ಮೆತ್ತಗಿದ್ದವನಿಗೆ ಮತ್ತೊಂದು ಗುದ್ದೆಂಬಂತೆ ಮಿತಭಾಷಿಯಾದ ಹಿಂದುಸ್ತಾನದ ಸ್ಥಾನದ ಬಗ್ಗೆ ಪ್ರಶ್ನೆಯೆತ್ತಿ ಅರ್ಜಂಟೀನ ಕೆಣಕಬಂದಿತು; ಆದರದು ಸಫಲವಾಗಲಿಲ್ಲ.

ಪ್ರಮುಖ ರಾಷ್ಟ್ರಗಳ ವಿಶೇಷಾಧಿಕಾರ

ಪ್ರಮುಖ ರಾಷ್ಟ್ರಗಳ ಪ್ರತಿಷೇಧಾಧಿಕಾರವನ್ನು ಕಿತ್ತೊಗೆಯಲು ಸರ್ವ ಸಾಮಾನ್ಯ ಪರಿಷತ್ತನ್ನು ಕರೆಯಬೇಕೆಂಬ ಸೂಚನೆಯನ್ನು ಸಂ. ರಾ. ಸಂಘದ ವಿಷಯ ಪಟ್ಟಿಯಲ್ಲಿ ಸೇರಿಸಬೇಕೆಂಬ ಸೂಚನೆಯು ಸಂ. ರಾ. ಸಂಘದ ಸಾಮಾನ್ಯ ಸಭೆಯ ಮಾರ್ಗ ಶೋಧಕ ಸಮಿತಿಯಿಂದ ಸ್ವೀಕರಿಸಲ್ಪಟ್ಟಿದಾಗಿ ತಿಳಿಯುತ್ತದೆ. ಈ ಪ್ರತಿಷೇಧಾಧಿಕಾರವು ಸಂಘದ ಉದಯಕಾಲದಲ್ಲಿ ಜಗತ್ತಿನ ಸ್ವಯಂಕೃತ ನೇತೃಗಳೆಂದುಕೊಂಡ ರಶಿಯ, ಅಮೇರಿಕ, ಬ್ರಿಟನ್ ಮತ್ತು ಫ್ರಾನ್ಸ್ ದೇಶಗಳು ತಮ್ಮ ವಿಶೇಷಾಧಿಕಾರವಾಗಿ ಇಟ್ಟುಕೊಂಡವು. ಕಳೆದ ಮಹಾಯುದ್ಧದಲ್ಲಿ ಜರ್ಮನಿಯ ಸೊಕ್ಕು ಮುರಿವಲ್ಲಿ ಪ್ರಧಾನ ಪಾತ್ರವಹಿಸಿದ ರಾಷ್ಟ್ರಗಳಾದ ಅವು ಆ ವಿಶೇಷಾಧಿಕಾರವಿಟ್ಟುಕೊಂಡುದನ್ನು ಉಳಿದ ಸದಸ್ಯ ರಾಷ್ಟ್ರಗಳು ಒಂದೇ ಬಾರಿಗೆ ವಿರೋಧಿಸಲಿಲ್ಲ. ಆದರೆ ಆಂಗ್ಲೋ-ಅಮೇರಿಕನರ ಹಾಗೂ ರಶಿಯದ ನಡುವೆ ದಿನೇ ದಿನೇ ಮನಸ್ತಾಪ ಹೆಚ್ಚುತ್ತ ಹೋಗಿ ಪಕ್ಷದ್ವಯದಲ್ಲಿ ಧ್ರುವಾಂತರ ವ್ಯತ್ಯಾಸವುಂಟಾಗಿ ಸಂ. ರಾ. ಸಂಘದ ಅನೇಕ ಸಭೆಗಳಲ್ಲಿ ಆಂಗ್ಲೋ—ಅಮೇರಿಕನ್ನರ ಸೂಚನೆಗಳಿಗೆ ರಶಿಯವು ಪ್ರತಿಷೇಧ ಪ್ರಯೋಗಮಾಡಿ ಅವುಗಳನ್ನು ತಡೆಹಿಡಿದುದರಿಂದ ಆಂಗ್ಲೋ—ಅಮೇರಿಕನ್ನರು ಹವಣಿಟ್ಟಿದ್ದಾರೆ. ಇದರ ಜೊತೆಗೆ ಅವರ ಬೆಂಬಲಿಗರಾದ ಅನೇಕ ಚಿಕ್ಕಪುಟ್ಟ ರಾಷ್ಟ್ರಗಳು ಅಂತಹ ಮಹಾಸಂಸ್ಥೆಗಳಲ್ಲಿ ಸಣ್ಣ ದೊಡ್ಡ ರಾಷ್ಟ್ರಗಳಲ್ಲಿ ಅಧಿಕಾರ ಭೇದವಿರುವದು ನ್ಯಾಯವಲ್ಲವೆಂಬ ವಾದವನ್ನಾಧರಿಸಿ ತಮ್ಮದು ಹೋದರೂ ಹೋಗಲಿ ರಶಿಯದ ಪ್ರತಿಷೇಧಾಧಿಕಾರ ಹೋದರೆ ಸಾಕು ಎಂಬ ಸ್ಥಿತಿಗೆ ಬಂದು ಮುಟ್ಟಿದ ಆಂಗ್ಲೋ—ಅಮೇರಿಕನ್ನರ ಮಹೋಗ್ರತೆಯನ್ನರಿತಾಕೆಂದು ಮೇಲಿನ ಸೂಚನೆಯನ್ನು ಸಮರ್ಥಿಸುವುದು ಸಹಜವಾಗಿದೆ. ಆದರೆ ರಶಿಯ ಮತ್ತು ಅದರ ಅಲ್ಪಸಂಖ್ಯಾಕರಾದ ಬೆಂಬಲಿಗ ರಾಷ್ಟ್ರಗಳು ಅಂತಹ ಸೂಚನೆಯನ್ನು ಮೂಲತಃ ವಿರೋಧಿಸುವುದೂ ಸಹಜವಾಗಿದೆ. ಏಕೆಂದರೆ, ಸದ್ಯದ ಪ್ರಪಂಚದಲ್ಲಿ ರಶಿಯದ ವರ್ಚಸ್ಸಿಗಿಂತ ಆಂಗ್ಲೋ-ಅಮೇರಿಕನ್ನರ ವರ್ಚಸ್ಸು ಹೆಚ್ಚು ವ್ಯಾಪ್ತಿಯುಳ್ಳದ್ದು. ಸಾಮ್ಯವಾದಿಗಳಿದ್ದರೂ ಎಷ್ಟೋ ರಾಷ್ಟ್ರಗಳು ಆಂಗ್ಲೋ—ಅಮೇರಿಕನ್ನರ ಬಲಕ್ಕಂಜಿ ಇಲ್ಲವೆ ಅವರಿಂದ ಸಹಾಯ ಪಡೆವ ಬಯಕೆಯಿಂದ ಅವರನ್ನು ಸದಾ ಪ್ರಸನ್ನರನ್ನಾಗಿ ಇಟ್ಟಿರಲು ಪ್ರಯತ್ನಿಸುತ್ತಿವೆ; ಅಲ್ಲದೆ ಆಂಗ್ಲೋ-ಅಮೇರಿಕನ್ನರ ಹಂಗಿನಲ್ಲಿರುವ ರಾಷ್ಟ್ರಗಳೂ ಎಷ್ಟೋ ಇವೆ. ರಶಿಯದ ಬಗ್ಗೆ ಸಹಾನುಭೂತಿಯಿದ್ದರೂ ಪ್ರಕಟವಾಗಿ ಮತಕೊಡುವಷ್ಟು ಧೈರ್ಯವನ್ನು ಅವಲಂಬಿಸುವ ರಾಷ್ಟ್ರಗಳು ಕಡಿಮೆ. ಅದರಿಂದ ಸಾಮಾನ್ಯ ಸಭೆಯಲ್ಲಿ ಯಾವ ಪ್ರಶ್ನೆಯು ಇತ್ಯರ್ಥವಾಗುವಾಗಲೂ ಅದನ್ನು ಮತಕ್ಕೆ ಹಾಕಿದರೆ ರಶಿಯನರೂ ಅವರ ಪಕ್ಷಪಾತಿಗಳೂ ಅಲ್ಪಸಂಖ್ಯಾಕರಾಗಿ ಉಳಿದು ಯಾವಾಗಲೂ ಪಶ್ಚಿಮದ 'ಪ್ರಜಾಪ್ರಭುತ್ವ'ಗಳೆಂದು ಕರೆಯಲ್ಪಡುವ ಬ್ರಿಟನ್, ಅಮೇರಿಕ, ಫ್ರಾನ್ಸ ಮತ್ತು ಅವರ ಬಾಲ ಬಡಿವ ರಾಷ್ಟ್ರಗಳೇ ಬೇಳೆಬೇಯಿಸಿಕೊಳ್ಳುವಂತಾಗುವುದು. ಇದನ್ನು ತಿಳಿದು ರಶಿಯ ಮತ್ತು ಅದರ ಮಿತ್ರ ರಾಷ್ಟ್ರಗಳು ಮೇಲಿನ ಅರ್ಜಂಟೀನದ ಸೂಚನೆಯನ್ನು ವಿರೋಧಿಸಿದವು. ಇದರಿಂದ ಪ್ರತಿಷೇಧಾಧಿಕಾರವಿದ್ದರೆ ಮಾತ್ರ ಈ ಸಂಘದಲ್ಲಿ ರಶಿಯ ಉಳಿಯಬಹುದೆಂದೂ ಅದು ಹೋದರೆ ಒಂದು ಗಳಿಗೆಯೂ ಅಲ್ಲಿ ನಿಲ್ಲಲಾರದೆಂದೂ ಸ್ಪಷ್ಟವಾಗುತ್ತದೆ. ಪರಂಪರಾಪ್ರಸಿದ್ಧವಾದ ಲಕ್ಷ್ಮಿ ಸರಸ್ವತಿಯರ ವೈರದಂತೆ ಬಂಡವಾಲಶಾಹಿ ಮತ್ತು ಸಾಮ್ಯವಾದಿ ರಾಷ್ಟ್ರಗಳಲ್ಲಿ ಎಂದೂ ಏಕಮತವುಂಟಾಗದು.

ಇಂಡೋನೇಶಿಯದ ಆಹ್ವಾನ

ಡಚ್ಚರು ಭೇದೋಪಾಯವನ್ನು ಬಳಸುತ್ತಿರುವರೆಂದೂ ಹಾಗಲ್ಲದೆ ನಿಜವಾದ ಪ್ರಜಾಶಯವನ್ನು ತಿಳಿಯಬೇಕೆಂದಿದ್ದರೆ ನ್ಯಾಯವಾದ ರೀತಿಯಲ್ಲಿ ಸಾರ್ವಜನಿಕ ಮತಗಣನೆ ಮಾಡಬಹುದೆಂದೂ ಪ್ರಜಾರಾಜ್ಯದ ಅಧ್ಯಕ್ಷರಾದ ಡಾ. ಸೋಕರ್ನೋರವರು ಪಶ್ಚಿಮ ಜಾವಾ ಸಮರ ಸಮಿತಿಯಲ್ಲಿ ಮೊನ್ನೆ ಹೇಳಿದುದಾಗಿ ತಿಳಿಯುತ್ತದೆ. ಸಂಯುಕ್ತ ರಾಷ್ಟ್ರ ಸಂಘವು ಯುದ್ಧ ನಿಲ್ಲಿಸಬೇಕೆಂದು ಆಜ್ಞೆಯಿತ್ತರೂ ! ಅಲ್ಲಲ್ಲಿ ಯುದ್ಧವನ್ನು ಸಾಗಿಸುತ್ತಲೇ ನಡೆದ ಡಚ್ಚರನ್ನು ನಿರ್ವಾಹವಿಲ್ಲದೆ ಇಂಡೋನೇಶಿಯನ್ನರು ಪ್ರತಿಭಟಿಸುತ್ತ ನಡೆದಿದ್ದಾರೆ. ಜಾವಾದ ನಡುವೆ ಡಚ್ಚರು ಪ್ರಜಾರಾಜ್ಯದ ರಾಜಧಾನಿಗೆ ೫೦ ಮೈಲಿನಲ್ಲಿರುವ ಕಾರಂಗಂಜರನ್ನು ಮುತ್ತಿರುವರೆಂದೂ ಸೆಮರಾಂಗಿನಲ್ಲಿ ಪ್ರಜಾಪಕ್ಷದವರು ಅವರನ್ನು ಪ್ರತಿಭಟಿಸಿರುವರೆಂದೂ ಇತ್ತೀಚಿನ ವಾರ್ತೆ. ಆದರೆ ಡಚ್ಚರು ಪ್ರಜಾಪಕ್ಷದವರು ಹೊತ್ತುಕೊಂಡು ಹೋಗುತ್ತಿದ್ದ ನೂರು ಚೀನೀಯರನ್ನು ತಾವುಬಿಡಿಸಿದುದಾಗಿ ಸಾರುತ್ತಾರೆ. ಹಿಂದುಸ್ತಾನದಲ್ಲಿ ಮುಸ್ಲಿಮೇತರ ಸ್ತ್ರೀಯರನ್ನು ಅಪಹರಿಸಿಕೊಂಡುಹೋದಂತೆ ಇಂಡೋನೇಶಿಯದಲ್ಲಿ ಚೀನೀಯ ಪುರುಷರನ್ನು ಇಂಡೋನೇಶಿಯನ್ನರು ಅಪಹರಿಸಿಕೊಂಡು ಹೋಗುತ್ತಿದ್ದರೆಂದರೆ ಜಗತ್ತು ನಂಬಬಹುದೇ ಇಲ್ಲವೇ ಎಂಬುದನ್ನೂ ವಿಚಾರಿಸದ ಡಚ್ಚರ ಸುಳ್ಳು ಹೇಳುವ ಪ್ರತಿಭೆಗೆ, ಕುರಿಮರಿಗಾಗಿ ಹಸಿದ ತೋಳನ ಹಾಗೆ ವ್ಯಾಜಾಂತರವನ್ನು ಹುಡುಕುವ ಬುದ್ಧಿಗೆ ಭೇಷೆನ್ನಬೇಕು. ಸಂ. ರಾ. ಸಂಘವು ತನ್ನ ಪಂಥತೆಗೆ ನಾಚುವುದಾದರೆ, ತನ್ನ ನಿರ್ಣಯಕ್ಕೆ ಡಚ್ಚರು ವಿಧೇಯರಾಗುವಂತೆ ಬಲಪ್ರಯೋಗ ಮಾಡಬೇಕು ಮತ್ತು ಡಾ. ಸೋಕರ್ನೋರವರ ಆಹ್ವಾನದ ಪ್ರಕಾರ ಇಂಡೋನೇಶಿಯನ್ನರಿಗೆ ಇಷ್ಟವಾದುದು ಸ್ವರಾಜ್ಯವೋ ಡಚ್ಚರಾಳಿತವೋ ಎಂಬುದನ್ನು ಸಾರ್ವಜನಿಕ ಮತಗಣನೆ ಮಾಡಿಸಿ ಅದರಂತೆ ವ್ಯವಸ್ಥೆ ಮಾಡಬೇಕು.

ಕರ್ನಾಟಕ

ಧಾರವಾಡ

ಕರ್ನಾಟಕ ಏಕೀಕರಣ ನಿಧಿಗೆ ಗದುಗಿನ ಪ್ರಸಿದ್ಧ ಮಹನೀಯರಾದ ಶ್ರೀ ಬಸರೀಗಿಡದ ವೀರಪ್ಪಣ್ಣನವರು ೫೫೫೫ ರೂಪಾಯಿಗಳ ಕಾಣಿಕೆಯ ವಾಗ್ದಾನವನ್ನು ಮಾಡಿ ಈಗ ೧೧೧೧ ರೂಪಾಯಿಗಳನ್ನು ಕೊಟ್ಟಿದ್ದಾರೆ. ನಿಧಿಮಂಡಳದವರು ಇದಕ್ಕಾಗಿ ಅವರನ್ನು ತುಂಬ ಅಭಿನಂದಿಸಿ ಉಳಿದ ಮಹನೀಯರೂ ಇದರಂತೆ ಕೊಡುಗೈಯಿಂದ ಧನಸಹಾಯ ಮಾಡಬೇಕೆಂದು ಬಿನ್ನವಿಸಿಕೊಳ್ಳುತ್ತಾರೆ.

ಶ್ರೀ ದಿವಾಕರರಂಗರಾಯರು ಹುಬ್ಬಳ್ಳಿಯಲ್ಲಿ ೨೦ ನೇ ತಾರೀಕು ಸಾಯಂಕಾಲ ಶ್ರೀ ಮುನವಳ್ಳಿಯವರ ಅಧ್ಯಕ್ಷತೆಯಲ್ಲಿ ಮುನಿಸಿಪಾಲಿಟಿಯ ಅಟ್ಟದ ಮೇಲೆ ಕೂಡಿದ್ದ ಸಾರ್ವಜನಿಕ ಸಭೆಯಲ್ಲಿ ಮಾತಾಡುತ್ತ ಕರ್ನಾಟಕ ಪ್ರಾಂತೀಕರಣ ಪ್ರಶ್ನೆಯಲ್ಲಿಗೆ ಬಂದಿದೆಂಬುದನ್ನು ವಿವರಿಸಿದರು. ಹೊಸ ಘಟನೆಯ ಕರಡು ಬರೆಯುವಾಗ ಈ ವಿಷಯ ಅದರಲ್ಲಿ ಸಮಾವೇಶವಾಗುವದೆಂದೂ ಅದರೂ ಕರ್ನಾಟಕಸ್ಥರು ಈ ಬಗ್ಗೆ ಜೋರಾದ ಚಳವಳಿ ಸಾಗಿಸಬೇಕೆಂದೂ ಹೇಳಿದರು.

ಧಾರವಾಡದಲ್ಲಿ ಕರ್ನಾಟಕ ಕಾಲೇಜಿನ ಹಳೆಯ ವಿದ್ಯಾರ್ಥಿ ಸಂಘದ ಪರವಾಗಿ ಕಾಲೇಜಿನಲ್ಲಿ ಪ್ರಿನ್ಸಿಪಾಲ ಕೋರಿಯಾ ಇವರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಶ್ರೀ ದಿವಾಕರರು ಮಾತಾಡುತ್ತ ಹಿಂದುಸ್ಥಾನದ ಹೊಸಘಟನೆಯ ಸ್ವರೂಪವನ್ನು ವಿವರಿಸಿದರು. ಸದ್ಯದ ಪ್ರಸಂಗದಲ್ಲಿ ಈ ಘಟನೆ ಕ್ರಾಂತಿಕಾರಕ ಘಟನೆಯಾಗದೆಂದೂ ಪಾರ್ಲಿಮೆಂಟರಿ ಮಾದರಿಯ ಘಟನೆಯಾಗುವದೆಂದೂ ತಿಳಿಸಿ ಘಟನೆಯ ಹಿನ್ನೆಲೆಯನ್ನು ಸೂಕ್ಷ್ಮವಾಗಿ ವಿವರಿಸಿದರು. ಭಾಷಾನ್ವಯ ಪ್ರಾಂತಗಳಾಗಿಯೇ ತೀರುವವೆಂದೂ ಅಭಿಪ್ರಾಯಪಟ್ಟರು.

ಕರ್ನಾಟಕ ವಾಚನಾಲಯಗಳ ಕೈಪಿಡಿಯೊಂದನ್ನು ಸಿದ್ಧಪಡಿಸುವುದಿದ್ದು ಆಯಾ ವಾಚನಾಲಯಗಳ ವ್ಯವಸ್ಥಾಪಕರು ತಮ್ಮ ವಾಚನಾಲಯಗಳ ಬಗ್ಗೆ ವಿವರಗಳನ್ನು ತಿಳಿಸಬೇಕೆಂದು ಶ್ರೀ. ಎಂ. ಪಿ. ಮಹಿಷಿ ಕಲಘಟಗಿ ಚಾಳ ಸ್ಟೇಶನ ರೋಡ ಹುಬ್ಬಳ್ಳಿ ಇವರು ತಿಳಿಸುತ್ತಾರೆ.

೧೯೪೨ ರ ಆಗಸ್ಟದಿಂದ ಈ ವರೆಗೆ ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಮಹಾತ್ಮಾ ಗಾಂಧಿ ಹಾಗು ಪಂಡಿತ ಜವಾಹರರ ಹಸ್ತಾಕ್ಷರಗಳ ಸಹಿತ ಹಿಂದೀ ಸಂದೇಶವುಳ್ಳ ತ್ರಿವರ್ಣರಾಷ್ಟ್ರಧ್ವಜಗಳನ್ನು ಬಹುಮಾನವಾಗಿ ಕೊಡುವ ಸಮಾರಂಭ ಪ್ರಾಂತೀಯ ಹಿಂದೀ ಪ್ರಚಾರ ಸಭೆಯ ವತಿಯಿಂದ ಧಾರವಾಡದಲ್ಲಿ ಶ್ರೀ ರಂಗರಾವ ದಿವಾಕರರ ಅಧ್ಯಕ್ಷತೆಯಲ್ಲಿ ೧೬ ನೇ ತಾರೀಕು ಸಾಯಂಕಾಲ ಜರುಗಿತು.

ಕರ್ನಾಟಕ ಸಮಾಜವಾದಿ ಪಕ್ಷದ ಧಾರವಾಡ ಶಾಖೆಯ ಕಾರ್ಯದರ್ಶಿಗಳಾದ ಶ್ರೀ ಗುಂಡೂ ಸನೀಮೋಳಿಯವರನ್ನು ಪೋಲೀಸರು ಶಿವಮೊಗ್ಗೆಯಲ್ಲಿ ಸೆರೆಹಿಡಿದಿರುವರು. ಕಳೆದ ಒಂದೆರಡುವಾರಗಳಿಂದ ಅವರು ಮೈಸೂರು ಸಂಸ್ಥಾನಗಡಿಯಲ್ಲಿ ಸತ್ಯಾಗ್ರಹದ ಸಂಘಟನೆ ಮಾಡುತಿದ್ದರಂತೆ.

ಧಾರವಾಡ ಜಿಲ್ಹಾ ಲೋಕಲ್‌ಬೋರ್ಡಿನ ಅಧ್ಯಕ್ಷರಾಗಿರುವ ಶ್ರೀ. ಬಿ. ಆರ್. ತಂಬಾಕದ ಇವರ ಮೇಲೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯವರು ಶಿಸ್ತುಭಂಗ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಣಯಿಸಿದ್ದರಷ್ಟೆ. ಈ ಬಗ್ಗೆ ಅವರು ಅ. ಭಾ. ಕಾಂ. ಸ. ಗೆ ಅಪೀಲು ಮಾಡಿಕೊಂಡಿದ್ದರು. ಅದರ ವಿಚಾರಣೆ ಮುಗಿದು ನಿರ್ಣಯವಾಗುವ ವರೆಗೆ ಶಿಸ್ತುಭಂಗ ಕ್ರಮ ತೆಗೆದುಕೊಳ್ಳುವದನ್ನು ತಡೆಹಿಡಿಯಬೇಕೆಂದು ಅ. ಭಾ. ಕಾ. ಸ. ಯವರು ಕೆ.ಪಿ.ಸಿ.ಸಿ. ಗೆ ತಿಳಿಸಿರುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ.

ವರ್ಧಾದಲ್ಲಿ ಕೂಡಿದ್ದ ಅ. ಭಾ. ಚರಕಸಂಘದ ಸಭೆಯಲ್ಲಿ ಬೇರೆ ಬೇರೆ ಮಾದರಿಯ ಚರಕಗಳ ಪ್ರದರ್ಶನವಾಗಿ ಕರ್ನಾಟಕ ಚರಕಸಂಘದ ಸರಂಜಾಮು ಕಾರ್ಯಾಲಯದ ಶ್ರೀ ವರದೇದೀ ರಾಮಾಚಾರ್ಯರು ಸಿದ್ಧಪಡಿಸಿದ ಪ್ರವಾಸಿ ಚರಕ ಉತ್ತಮವೆಂದು ನಿರ್ಣಯಿಸಲ್ಪಟ್ಟು ೩೦ ರೂ. ಬಹುಮಾನ ಕೊಡಲಾಯಿತು.

ಧಾರವಾಡದಲ್ಲಿಯ ಆದರ್ಶ ವಿದ್ಯಾನಿಲಯದ ಪ್ರಥಮ ವಾರ್ಷಿಕೋತ್ಸವ ಶ್ರೀ ದಿವಾಕರರ ಅಧ್ಯಕ್ಷತೆಯಲ್ಲಿ ೨೧ ನೇ ತಾರೀಕು ಸಾಂಗವಾಯಿತು. ಬಡಬ್ರಾಹ್ಮಣ ವಿದ್ಯಾರ್ಥಿಗಳಿಗೆ ಸಹಾಯ ಮಾಡುವದಕ್ಕಾಗಿ ಈ ನಿಲಯವನ್ನು ಸ್ಥಾಪಿಸಲಾಗಿದೆ. ಇದರಲ್ಲಿ ಈಗ ಹತ್ತು ವಿದ್ಯಾರ್ಥಿಗಳಿರುವರು. ನಿಲಯಕ್ಕೆ ಸಸ್ಥರೀತಿಯಿಂದ ಸಹಾಯ ಸಲ್ಲಿಸಬೇಕೆಂದು ನಿಲಯದ [illegible]ಗಳಾದ ಶ್ರೀ ಅರ್ಜುನಗಿ ರಾಮಣ್ಣಾ ಇವರು ತಮ್ಮ ವರದಿಯಲ್ಲಿ ನಿವೇದಿಸಿಕೊಂಡರು. ಶ್ರೀ ಕಮಲಾಪುರ, ಕೇಶವಕರ್ಣ ಗಲಗಲಿ, ಸುತ್ತು ಸಾದಗೀರರು ಭಾಷಣ ಮಾಡಿದ ಬಳಿಕ ಶ್ರೀ ದಿವಾಕರರು ಸಮಯೋಚಿತ ಉಪದೇಶ ಮಾಡಿದರು.

ಬೆಳಗಾವಿ

ನಂದಗಡ ಪೋಲೀಸ ಸಬ್ ಇನಸ್ಪೆಕ್ಟರರಾಗಿದ್ದ ಶ್ರೀ. ಎಸ್. ಎಸ್. ಮುಂಡರಗಿಯವರು ೨೦ನೇ ತಾರೀಕಿನ ಬೆಳಗು ಮುಂಜಾನೆ ೪ ಗಂಟೆಗೆ ಪಿಸ್ತೂಲಿನ ಗುಂಡಿನ ಹೊಡೆತದಿಂದ ರಕ್ತದ ಮಡುವಿನಲ್ಲಿ ಸತ್ತು ಬಿದ್ದದ್ದು ಕಂಡು ಬಂದಿತು. ಅವರು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ತೋರುತ್ತದೆ.

ಬೆಳಗಾಂವಿ ಸಿಟಿಝನ್ಸ ಬ್ಯಾಂಕಿನ ಡಾಯರೆಕ್ಟರ ಶ್ರೀ. ಎಸ್. ಆರ್. ಸುಂಠಣಕರರು ಬ್ಯಾಂಕಿನ ಒಬ್ಬ ಅಧಿಕಾರಿಗಳ ಮೇಲೆ ಲೆಕ್ಕದ ಪುಸ್ತಕದಲ್ಲಿ ಸುಮಾರು ೩೦ ಸಾವಿರ ರೂಪಾಯಿ ಸುಳ್ಳು ಖರ್ಚು ಹಾಕಿ ಅಫರಾತಫರ ಮಾಡಿರುವರೆಂದು ಆರೋಪ ಹೊರಿಸಿ ಪೋಲೀಸ ಫಿರ್ಯಾದ ಮಾಡಿದ್ದರಿಂದ ಪೋಲೀಸರು ಬೆಳಗಾವಿಯಲ್ಲಿಯ ಆ ಬ್ಯಾಂಕಿಗೆ ಹೋಗಿ ಅಲ್ಲಿನ ಕಾಗದಪತ್ರಗಳನ್ನೆಲ್ಲ ಜಪ್ತ ಮಾಡಿಕೊಂಡು ಹೋಗಿರುವರು.

ಮುರಗೋಡ ಪೋಲೀಸ ಜವಾದಾರರಾದ ಶ್ರೀ. ಕಮಾಲ ಸಾಹೇಬರು, ಎರಝುರ್ವಿಯಿಂದ ಕಳ್ಳಪೇಟೆಗೆ ಸಾಗುತ್ತಿದ್ದ ೪೦ ಚೀಲ ಜೋಳವನ್ನು ಹಿಡಿದು ಪಂಚನಾಮೆ ಮಾಡಿ ಖಟ್ಲೆ ಹಾಕಿರುತ್ತಾರೆ. ಕಾಳು ಒಯ್ಯುತ್ತಿದ್ದ ಟ್ರಕ್ಕು ಬೈಲಹೊಂಗಲದ್ದಂತೆ.

ಬಳ್ಳಾರಿ

ಹೊಸಪೇಟೆ ತಾಲೂಕ ರಾಮಸಾಗರದಿಂದ ಬಳ್ಳಾರಿ ತಾಲೂಕು ಮಂದೀಹಾಳಿಗೆ ಹೋಗುತಿದ್ದ ೮೦ ಚೀಲ ಬೆಲ್ಲದ ನಾಲ್ಕು ಗಾಡಿಗಳನ್ನು ಪೋಲೀಸರು ಜಪ್ತ ಮಾಡಿದ್ದಾರೆ.'

ಬಳ್ಳಾರಿ ಜಿಲ್ಹಾ ನಿವೃತ್ತಪತ್ರಿಕೋದ್ಯೋಗಿಗಳ ಸಭೆ ಶ್ರೀ ಡಿ. ಎಸ್, ಹಣಮಂತರಾಯರ ಅಧ್ಯಕ್ಷತೆಯಲ್ಲಿ ಸೇರಿ ಹೈದರಾಬಾದ ಮೈಸೂರುಗಳಲ್ಲಿ ನಡೆದ ದಬ್ಬಾಳಿಕೆಯನ್ನು, ಅಲ್ಲಿಯ ನಿಜವಾದ ಅಂಶಗಳನ್ನು ಬಚ್ಚಿಡಲು ನಡೆಸಿದ ಪ್ರಯತ್ನಗಳನ್ನು, ಇಂಡಿಯನ್ ಎಕ್ಸಪ್ರೆಸ್ ಪತ್ರಿಕೆಯ ಸುದ್ದಿಗಾರರ ಮೇಲಾದ ಹಾಳಿಯನ್ನು ಖಂಡಿಸಲಾಯಿತು.

ಬದನೇಹಾಳು ಗ್ರಾಮ ಕೇಂದ್ರ ಕರ್ನಾಟಕ ಏಕೀಕರಣ ಸಂಘದ ಸಭೆ ೧೭ ಕ್ಕೆ ಸೇರಿ ಶ್ರೀ ಸಾಬಡೆ ಹಾಗು ಮುದವೀಡು ಕೃಷ್ಣರಾಯರ ನಿಧನದ ಬಗ್ಗೆ ದುಃಖ ಪ್ರದರ್ಶನ ಮಾಡಲಾಯಿತು. ಆಂಧ್ರ ರಾಜಕೀಯ ಮಹಾಸಭೆಯವರು ಆದವಾನಿ, ಆಲೂರ, ರಾಯದುರ್ಗಗಳನ್ನು ಆಂಧ್ರಕ್ಕೆ ಸೇರಿಸಿಕೊಳ್ಳಲು ಪ್ರಯತ್ನಿಸುತಿದ್ದುದರ ಖಂಡನ, ಮೈಸೂರು ಹೋರಾಟಕ್ಕೆ ಬೆಂಬಲ ಹಾಗು ಪ್ರಜೆಗಳ ಆಕಾಂಕ್ಷೆಯನ್ನು ಪೂರೈಸಲು ಮಹಾರಾಜರಲ್ಲಿ ಪ್ರಾರ್ಥನೆ ಮೊದಲಾದ ಗೊತ್ತುವಳಿಗಳನ್ನು ಸ್ವೀಕರಿಸಲಾಯಿತು.

ಹೊಸಪೇಟೆ ಹತ್ತರ ಕಟ್ಟಬೇಕಾದ ತುಂಗಭದ್ರಾ ಆಣೆಕಟ್ಟನ್ನು ಸಿಮೆಂಟಿನಿಂದ ಕಟ್ಟಬೇಕೋ ಎಂಬ ವಿಷಯದಲ್ಲಿ ಸರಕಾರದವರ ಕೋರಿಕೆ ಪ್ರಕಾರ ತಮ್ಮ ಸಲಹೆಯನ್ನು ಕೊಡಲು ಸರ್ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ೧೧ ಕ್ಕೆ ಹೊಸಪೇಟೆಗೆ ಬಂದಿದ್ದರು. ಆಗ ಮುನಿಸಿಪಲ್ ಹಾಯಸ್ಕೂಲಿನಲ್ಲಿ ಸೇರಿದ್ದ ಸಾರ್ವಜನಿಕ ಸಭೆಗಳಲ್ಲಿ ಬೇರೆ ಬೇರೆ ಸಂಘ ಸಂಸ್ಥೆಗಳ ಪರವಾಗಿ ಮಾನಪತ್ರವನ್ನರ್ಪಿಸಲಾಯಿತು.

ಹೊಸಪೇಟೆಯ ಸೀದಾಧಿಕಾರಿಗಳಾಗಿದ್ದ ಶ್ರೀ ಕೆ. ತಿರುಮಲರಾಯರಿಗೆ ಲಂಚದ ಬಗ್ಗೆ ಬಳ್ಳಾರಿ ಡಿ. ಮ್ಯಾಜಿಸ್ಟ್ರೇಟರು ವಿಧಿಸಿದ್ದ ಶಿಕ್ಷೆಯನ್ನು ಹಾಯಕೋರ್ಟಿನವರು ಕಾಯಂ ಮಾಡಿ ಶಿಕ್ಷೆಯ ಅವಧಿಯನ್ನು ೬ ತಿಂಗಳಿಗೆ ಇಳಿಸಿದ್ದಾರೆ.

ಹುಬ್ಬಳ್ಳಿಯಲ್ಲಿ ಕಳೆದ ಮೂರು ವಾರಗಳಿಂದ ಸೀದಾ ಕಾರ್ಡಧಾರಿಗಳಿಗೆಲ್ಲ ಜೋಳ ಸಿಕ್ಕದಿದ್ದುದರಿಂದ ಊರಲ್ಲೆಲ್ಲ ಗದಿಬಿದಿಯುಂಟಾಗಿದೆ. ಸೀದಾ ಅಂಗಡಿಗಳ ಮುಂದೆ ಒಂದೇ ಸಮನೆ ಜನಸಮ್ಮರ್ದ ಕೂಡಹತ್ತಿದೆ. ಬಲವಂತರು ಮುನ್ನುಗ್ಗಿ ಸೀದಾ ಒಯ್ಯಹತ್ತಿರುವರು. ಕೈಲಾಗದವರು ಅತ್ಯಂತ ಖಿನ್ನರಾಗಿ ಸೀದಾ ತತ್ವಕ್ಕೆ ವಿರೋಧಕವಾದ ಯೋಜನೆಯನ್ನು ಖಂಡಿಸುತ್ತ ಮರಳಿ ಹೋಗುತಿರುವರು. ರೀಲ್ವೆ ವರ್ಕಶಾಪಿನವರು ಈ ಬಗ್ಗೆ ಅನ್ನಸತ್ಯಾಗ್ರಹವನ್ನು ಹೂಡಿದ್ದರು. ಆದರೆ ಸಮಾಧಾನಕಾರಕ ಆಶ್ವಾಸನ ದೊರೆತದ್ದರಿಂದ ಮತ್ತೆ ಕೆಲಸ ಪ್ರಾರಂಭಿಸಿದರು.

ವಿಜಾಪುರ

ಹಿಂದುಸ್ಥಾನ ಸರಕಾರದ ಆದೇಶದ ಮೇರೆಗೆ ಮುಂಬಯಿ ಸರಕಾರದವರು ಶ್ರೀ ಬಿ. ವಿ. ಭೂಮರೆಡ್ಡಿ ಮತ್ತು ಕಂಪನಿಯವರಿಗೆ ಬಾಗಲಕೋಟಿಯಲ್ಲಿ ೧೨೦೦೦ ಕದರುಗಳುಳ್ಳ ನೂಲುವ ಗಿರಣಿಯೊಂದನ್ನು ತೆರೆಯಲು ಅಪ್ಪಣೆಯನ್ನಿತ್ತಿದ್ದಾರೆ.

ಬಾಗಲಕೋಟೆಯ ವಾಸುದೇವ ವಿನೋದಿನಿ ನಾಟ್ಯ ಸಭೆಯ ವಾರ್ಷಿಕೋತ್ಸವ ಶ್ರೀ. ವ. ರಾ. ಬೇಂದ್ರೆ ಇವರ ಅಧ್ಯಕ್ಷತೆಯಲ್ಲಿ ಶ್ರೀ ಗಣೇಶ ಚತುರ್ಥಿಯ ದಿನ ಒಳ್ಳೆ ಉತ್ಸಾಹದಿಂದ ಸಾಂಗವಾಯಿತು.

ಡಾ. ಭಗೀರಥರಾವ ದೇಶಪಾಂಡೆಯವರು ಬಾಗಲಕೋಟೆಯಲ್ಲಿ ೧೩ ನೇ ತಾರೀಕು ಸೇರಿದ್ದ ಬ್ರಾಹ್ಮಣ ಸಮಾಜದ ಜಾಹೀರ ಸಭೆಯಲ್ಲಿ ಬ್ರಾಹ್ಮಣ ಸಮಾಜದ ಸಂಘಟನೆಮತ್ತು ಏಳ್ಗೆಯ ಬಗ್ಗೆ ತಮ್ಮ ವಿಚಾರಗಳನ್ನು ಮಂಡಿಸಿ ಕರ್ನಾಟಕ ಎಜ್ಯುಕೇಶನ ಸೊಸಾಯಿಟಿಯ ಸ್ಥಳೀಯ ಸಮಿತಿಯೊಂದನ್ನು ಸ್ಥಾಪಿಸಿದರು. ಅದಕ್ಕೆ ಶ್ರೀ ಭಬ್ರಿ ಹನುಮಂತರಾಯರು ಅಧ್ಯಕ್ಷರು ಶ್ರೀ ಅಣೇಕರ ವಕೀಲರು ಕಾರ್ಯದರ್ಶಿಗಳು ಮತ್ತು ಶಲವಡಿ ವಕೀಲರು ಸಹಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಉಪಮಂತ್ರಿಗಳಾದ ಶ್ರೀ ಎಸ್. ಆರ್. ಕಂಠಿಯವರು ಬಾಗಲಕೋಟೆಯಲ್ಲಿ ನಾಲ್ಕು ದಿನ ಬಿಡಾರ ಹಾಕಿ ವಿಜಾಪುರ ಜಿಲ್ಹಾ ಇಂಡಸ್ಟ್ರಿಯಲ್ ಅಸೋಸಿಯೇಶನ ಬಗ್ಗೆ ಬೆಳೆದು ಬಂದ ವಿತುಷ್ಟತೆಯನ್ನು ಹೋಗಲಾಡಿಸಿ ಇಬ್ಬಣಗಳಲ್ಲಿ ಐಕ್ಯವನ್ನು ಪ್ರಸ್ಥಾಪಿಸಿದರು. ಚುನಾವಣೆಯ ಜಂಜಾಟವಿಲ್ಲದೆ ಈ ವರ್ಷದ ಕಾರ್ಯಕಾರೀ ಮಂಡಳವನ್ನು ಆರಿಸಲಾಯಿತು.

ಕೆರೂರಿನ ಉದಾರಿಗಳಾದ ಶ್ರೀಮಂತ ಈರಪ್ಪಣ್ಣ ಮೆಣಸಿಗಿಯವರು ಊರಲ್ಲಿ ಮಲೇರಿಯಾದಿಂದ ಬಳಲುತಿರುವ ಬಡವರಿಗಾಗಿ ಔಷಧೋಪಚಾರಕ್ಕಾಗಿ ೫೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಉತ್ತರ ಕನ್ನಡ

೧೯೪೨ರ ಚಲೇಜಾವ ಚಳವಳಿಯಲ್ಲಿ ಹಳ್ಯಾಳ ತಾಲೂಕಿನ ಕೆಲ ಹಳ್ಳಿಗಳ ಜನರಿಂದ ಹೆದರಿಕೆ ಬೆದರಿಕೆಗಳಿಂದ ಹಣವನ್ನು ಸೆಳೆಯುತ್ತಿದ್ದರೆಂಬ ಆರೋಪದ ಮೇಲೆ ಕಾರವಾರದ ಶ್ರೀ. ಮುಲ್ಲಾ ಎಂಬ ಹೋಮ ಇನಸ್ಪೆಕ್ಟರರನ್ನು ಮುಂಬಯಿ ಸರಕಾರದವರು ಕೆಲಸದಿಂದ ತಾತ್ಪೂರ್ತಿಕವಾಗಿ ತೆಗೆದು ಹಾಕಿರುವರೆಂದು ತಿಳಿಯುತ್ತದೆ.

ಕಾರವಾರದ ಇನ್ನೊಬ್ಬ ಕಮ್ಯುನಿಸ್ಟ ಕಾರ್ಯಕರ್ತರನ್ನು ಸೆರೆಹಿಡಿದು ಸ್ಥಾನಬದ್ಧತೆಯಲ್ಲಿಡಲಾಗಿದೆ. ಕಿಸಾನ ಸಂಘದ ಇನ್ನೊಬ್ಬ ಕಮ್ಯುನಿಸ್ಟ ಕಾರ್ಯಕರ್ತರ ಮೇಲೆಯೂ ವಾರಂಟಿದ್ದು ಅವರು ಈಗ ತಲೆ ತಪ್ಪಿಸಿಕೊಂಡು ಅಡ್ಡಾಡುತಿರುವರು.

ಕೊಂಕಣಿ ಪರಿಷತ್ತಿನ ಕಾರ್ಯದರ್ಶಿ ಶ್ರೀ. ಶಾನಭಾಗರು ಹಿಂದುಸ್ಥಾನ ಸರಕಾರದ ಆಹಾರ ಖಾತೆಯ ಮಂತ್ರಿಗಳಿಗೆ ಪತ್ರ ಬರೆದು ನಿಯಂತ್ರಣವನ್ನು ಸಡಲಿಸಬೇಕು, ಅಕ್ಕಿಯ ಅನಿರ್ಬಂಧ ವ್ಯಾಪಾರಕ್ಕೆ ಅವಕಾಶ ಕೊಡಬೇಕೆಂದು ಮುಂತಾಗಿ ಬಿನ್ನವಿಸಿಕೊಂಡಿದ್ದರು. ಇದು ಸಾಧ್ಯವಿಲ್ಲ ಎಂದು ಮಂತ್ರಿಗಳ ಕಾರ್ಯದರ್ಶಿಗಳಿಂದ ಅವರಿಗೆ ಉತ್ತರ ಬಂದಿರುವದಾಗಿ ತಿಳಿಯುತ್ತದೆ.

ಉತ್ತರ ಕನ್ನಡ ಜಿಲ್ಹಾ ಕಲೆಕ್ಟರರಾದ ಆರ್. ಜಿ. ರಬೆಲ್ಲೊ ಇವರನ್ನು ಮುಂಬಯಿ ಪ್ರಾಂತೀಯ ಸಾರಿಗೆ ನಿಯಂತ್ರಣಾಧಿಕಾರಿಗಳನ್ನಾಗಿ ನೇಮಿಸಲಾಗಿದೆ. ಈ ವರ್ಷದಲ್ಲಿ ಕಲೆಕ್ಟರರ ವರ್ಗಾವರ್ಗಿ ಮೇಲಿಂದ ಮೇಲೆ ನಡೆದದ್ದರಿಂದ ಜನತೆಯಲ್ಲಿ ಅಸಮಾಧಾನವಾಗಿದೆ.

ಕನ್ನಡ ಸಂಸ್ಥಾನ

ಯಾದಗಿರಿಯಲ್ಲಿ ಪ್ರತಿ ವರ್ಷ ವ್ಯಾಪಾರೀ ಮಂಡಳದವರು ಪೇಟೆಯಲ್ಲಿ ಸಾರ್ವಜನಿಕ ಗಣಪತಿ ಕೂಡಿಸುತಿದ್ದರು, ಈ ವರ್ಷ ಜಾತೀಯ ದಂಗೆಯಾಗದಂತೆ ಯೋಗ್ಯ ಜಾಮೀನ ಕೊಟ್ಟ ಹೊರತು ಅಪ್ಪಣೆ ಕೊಡಲಾಗುವದಿಲ್ಲೆಂದು ಅಧಿಕಾರಿಗಳು ಹಿಂದುಗಳಿಗೆ ತಿಳಿಸಿದ ಮೂಲಕ ಯಾರೂ ಸಾರ್ವಜನಿಕ ಗಣಪತಿಯನ್ನು ಕೂಡ್ರಿಸಿರುವದಿಲ್ಲ.

ಕುಂದಗೋಳದಲ್ಲಿ ರೇಲ್ವೆ ಪೋಲೀಸರು ಕಳವಿನ ಮಾಲು ಹತ್ತೆ ಹಚ್ಚಿ ಮೂವರನ್ನು ಬಂಧಿಸಿಕೊಂಡು ಹೋಗಿದ್ದಾರೆ. ಇಬ್ಬರು ಪರಾರಿಯಾಗಿರುವರು. ಸಂಶಿ ಸ್ಟೇಶನ್ನಿನ ತುಸು ದೂರದಲ್ಲಿಯ

ಕನ್ನಡ ವಕ್ತೃತ್ವ ಸ್ಪರ್ಧೆ
ಶ್ರೀ ಮುದವೀಡು ಕೃಷ್ಣರಾಯರ ಸ್ಮರಣಾರ್ಥ

ದಿವಂಗತ ಶ್ರೀ ಮುದವೀಡು ಕೃಷ್ಣರಾಯರ ಹಲವೊಂದು ಶ್ರೇಷ್ಠ ಗುಣಗಳಲ್ಲಿ ವಕ್ತೃತ್ವವು ಉತ್ತಮೋತ್ತಮವಾದದು. ತಮ್ಮೊಡನೆಯೆಹುಟ್ಟಿಬಂದ ವಕ್ತೃತ್ವವನ್ನು ಬೆಳೆಸಿ ಅದಕ್ಕೆ ಕಲೆಯ ಕಳೆಯನ್ನು ಕಟ್ಟಿ ಅದನ್ನು ಅವರು ಅತ್ಯಂತ ಉಚ್ಚಾಯಸ್ಥಿತಿಗೆ ತಂದರೆಂದು ಹೇಳಬಹುದು. ಕನ್ನಡ ವಾಗ್ಮಿಗಳಲ್ಲಿ ಅವರಿಗೆ ಪ್ರಥಮ ಸ್ಥಾನವಿತ್ತು ಎಂಬುದನ್ನು ಎಲ್ಲರೂ ಒಪ್ಪುವ ಮಾತು. ಅವರ ಆ ಗುಣದ ಸ್ಮರಣಾರ್ಥವಾಗಿ ಕರ್ನಾಟಕದಲ್ಲಿ ಆ ಕಲೆಯನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಒಂದು ವಾಕ್ ಸ್ಪರ್ಧೆಯನ್ನು ೫ ವರುಷಗಳ ವರೆಗೆ ಲೋಕ ಶಿಕ್ಷಣ ಟ್ರಸ್ಟಿನ ಪರವಾಗಿ ಏರ್ಪಡಿಸಬೇಕೆಂದು ಗೊತ್ತು ಮಾಡಲಾಗಿದೆ.

ಸ್ಪರ್ಧೆಯಲ್ಲಿ ಎರಡು ಭಾಗಗಳು: ಒಂದು ಭಾಗವು 'ಅಭ್ಯಸ್ತ ವಿಷಯಗಳ ಭಾಷಣ ಸ್ಪರ್ಧೆ' ಯೆಂದೂ ಇನ್ನೊಂದು ಭಾಗವು "ಆಶು ಭಾಷಣ ಸ್ಪರ್ಧೆ" ಯೆಂದೂ ಏರ್ಪಡಿಸಿದೆ. ಈ ಸ್ಪರ್ಧೆ ಧಾರವಾಡ ವಿದ್ಯಾವರ್ಧಕ ಸಂಘದ ಅಟ್ಟದ ಮೇಲೆ ತಾ. ೧೮ ಮತ್ತು ೧೯ ಅಕ್ಟೋಬರ ೧೯೪೭ ಸಂಜೆ ೪ ರಿಂದ ೭ ರ ವರೆಗೆ ನಡೆಯುವದು.

ಅಭ್ಯಸ್ತ ಭಾಷಣದ ವಿಷಯಗಳು

೧. ಸಮಗ್ರ ಕರ್ನಾಟಕದ ಆದರ್ಶ ವ್ಯವಸ್ಥೆ ಹೇಗಿರಬೇಕು ?
೨. ಸಂಯುಕ್ತ ರಾಷ್ಟ್ರಸಂಸ್ಥೆಯ ಭವಿತವ್ಯ.
೩. ಪಾಕಿಸ್ತಾನವು ಜಾತೀಯ ಸಮಸ್ಯೆಯನ್ನು ಬಿಡಿಸಿರುವದೆ ?

ಭಾಷಣದ ಅವಧಿ

೨೦ ರಿಂದ ೩೦ ನಿಮಿಷ.

ಆಶು ಭಾಷಣದ ಅವಧಿ

೧೦ ನಿಮಿಷ ವಿಷಯವನ್ನು ಆಗಲೆ ತಿಳಿಸಲಾಗುವದು.

ಅಭ್ಯಸ್ತ ವಿಷಯಗಳ ಭಾಷಣ ಸ್ಪರ್ಧೆಯಲ್ಲಿ ಎಲ್ಲರಿಗಿಂತ ಹೆಚ್ಚು ಗುಣಗಳನ್ನು ಪಡೆದ ವಿದ್ಯಾರ್ಥಿಗೆ ೫೦ ರೂ. ಗಳ ಪಾರಿತೋಷಕ ಕೊಡಲಾಗುವದು.

'ಆಶುಭಾಷಣ ಸ್ಪರ್ಧೆ' ಯಲ್ಲಿ ಮೇಲಾದ ವಿದ್ಯಾರ್ಥಿಗೆ ೩೦ ರೂ. ಗಳ ಮೆಚ್ಚು ಕೊಡಲಾಗುವದು.

ಸ್ಪರ್ಧೆಯ ವಿಷಯದಲ್ಲಿ ಪರೀಕ್ಷಕರನ್ನು ನಿಯಮಿಸುವ, ಪಾರಿತೋಷಕವನ್ನು ಒಬ್ಬರಿಗಿಂತ ಹೆಚ್ಚು ಜನರಲ್ಲಿ ಹಂಚುವ ಮತ್ತು ವಕ್ತೃತ್ವದ ಮಟ್ಟ ಸಾಕಷ್ಟು ಉಚ್ಚವಿಲ್ಲದ ವರುಷ ಪಾರಿತೋಷಕ ಕೊಡದಿರುವ ಸ್ವಾತಂತ್ರ್ಯವು ಕಾದಿಡಲಾಗಿದೆ.

ಈ ಸ್ಪರ್ಧೆಯಲ್ಲಿ ಕರ್ನಾಟಕದ ಎಲ್ಲ ಸಾಲೆ ಕಾಲೇಜುಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು ಕರ್ನಾಟಕದ ಹೊರಗಿನ ಸಾಲೆ ಕಾಲೇಜುಗಳ ಕನ್ನಡ ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಬಹುದು

ಆಶು ಭಾಷಣ ಮತ್ತು ಅಭ್ಯಸ್ತ ಭಾಷಣ ಸ್ಪರ್ಧೆಗೆ ಪ್ರತಿಯೊಂದಕ್ಕೆ ೦-೮-೦ ಆಣೆಗಳಂತೆ ಪ್ರವೇಶ ಶುಲ್ಕವಿದ್ದು ಶುಲ್ಕ ಹಾಗು ಆಯಾ ಸಾಲೆ ಕಾಲೇಜುಗಳ ಮುಖ್ಯಾಧ್ಯಾಪಕರ ಪರಿಚಯ ಪತ್ರದೊಂದಿಗೆ ಕೆಳಗೆ ಕಾಣಿಸಿದವರಿಗೆ ೧೫—೧೦—[illegible]ರೊಳಗಾಗಿ ತಮ್ಮ ಅರ್ಜಿ ಮುಟ್ಟಿಸಿ ಪಾವತಿ ಪಡೆಯಬೇಕು.

ಹುಬ್ಬಳ್ಳಿ.
೨೨—೯—೪೭

ರಂಗನಾಥ ದಿವಾಕರ
ಧರ್ಮದರ್ಶಿ
ಲೋಕ ಶಿಕ್ಷಣ ಟ್ರಸ್ಟ

ಹದ್ದಿನಲ್ಲಿ ಗುಡ್ಸ್‌ಗಾಡಿಯಲ್ಲಿನ ಒಂದು ತುತ್ತೆ ಚೀಲ ಉರುಳಿ ಬಿದ್ದುದರ ನಿಮಿತ್ತ ಈ ಶೋಧ ನಡೆದು ೧೦—೧೨ ಸಾವಿರ ರೂಪಾಯಿಗಳ ಸರಕು ಜಪ್ತ ಮಾಡಲ್ಪಟ್ಟಿದೆ. ಲವಂಗ ಚೀಲಗಳು ದೊಡ್ಡ ಹಂಡೆಗಳು ಮನ್ಸರಾಯಿಜ್ದ ಧೋತರ ಮೊದಲಾದವು ಹೊರಟಿವೆ.

ಮುಧೋಳ ಪ್ರಜಾ ಪರಿಷತ್ತಿನವರು ಹೊಣೆಗಾರ ರಾಜ್ಯ ಸ್ಥಾಪನೆಗಾಗಿ ಸತ್ಯಾಗ್ರಹ ಪ್ರಾರಂಭಿಸಲಾಗುವದೆಂದು ಈ ಮೊದಲು ಗೊತ್ತುವಳಿ ಪಾಸ ಮಾಡಿಕೊಂಡು ಸಂಸ್ಥಾನ ಸರಕಾರಕ್ಕೆ ಕಳಿಸಿರುವರಷ್ಟೆ. ಈ ವರೆಗೆ ೫೦೦ ಕ್ಕಿಂತ ಹೆಚ್ಚು ಜನರು ಈ ಸತ್ಯಾಗ್ರಹದಲ್ಲಿ ಸೇರಲು ಹೆಸರು ನೋಂದಾಯಿಸಿರುವರೆಂದು ತಿಳಿಯುತ್ತದೆ.

ಮಿರಜ ಶಾಸನಸಭೆಯಲ್ಲಿ ಅಂದಾಜ ಪತ್ರಿಕೆಯ ಚರ್ಚೆ ಪ್ರಾರಂಭವಾಗಿದೆ. ಮತಕ್ಕೆ ಹಾಕಲಾಗದ ವೆಚ್ಚ ಬಹಳಿದ್ದು ಅದನ್ನು ಕಡಿಮೆಮಾಡಬೇಕೆಂದು ಪ್ರತಿಪಾದಿಸಲಾಯಿತು.

ಕರ್ಮವೀರ
ಹರಿಜನ ಪುರವಣಿ

ನನ್ನ ಕರ್ತವ್ಯ

ಮೋ. ಕ. ಗಾಂಧಿ

'ಹರಿಜನ' ಪತ್ರಿಕೆಗಳನ್ನು ನಡೆಸುವ ನನ್ನ ಕರ್ತವ್ಯದ ಮಟ್ಟಿಗೆ ಈ ತಲೆಬರಹದ ಸಂಬಂಧವಿದೆ. ನನ್ನ ಪ್ರಶ್ನೆಗೆ ಸಾಕಷ್ಟು ಉತ್ತರಗಳು ಬಂದಿವೆ. ಈ ಪತ್ರಿಕೆಗಳನ್ನು ನಡೆಸಬೇಕೆಂದು ಬಹುಸಂಖ್ಯಾಕ ಓದುಗರ ಅಭಿಪ್ರಾಯವಿದೆ. ಸದ್ಯದ ಸಮಸ್ಯೆಗಳ ಬಗೆಗೆ ನನ್ನ ಅಭಿಪ್ರಾಯಗಳು ತಮಗೆ ಬೇಕೆಂಬುದೇ ಈ ಉತ್ತರಗಳ ಮುಖ್ಯ ತಾತ್ಪರ್ಯವಾಗಿದೆ. ನನ್ನ ಮರಣದ ನಂತರ ಈ ಅಭಿಪ್ರಾಯಗಳು ಕದಾಚಿತ್ ಬೇಡವೆಂದೇ ಇವರ ಅರ್ಥ.

ನನ್ನ ಮರಣವು ಮೂರು ಬಗೆಗಳಲ್ಲಿ ಸಂಭವಿಸಬಹುದು.

(೧) ವಾಡಿಕೆಯಂತೆ ದೇಹಪಾತವಾದಾಗ.

(೨) ಕಣ್ಣುಗಳು ಮಾತ್ರ ತಿರುಗುತಿದ್ದು ಮನಸ್ಸು ನಿಷ್ಕ್ರಿಯವಾಗುವದರಿಂದ.

(೩) ದೇಹ ಮನಸ್ಸುಗಳೆರಡೂ ಕೆಲಸ ಮಾಡುತ್ತಿರಬಹುದು ಆದರೆ ಸಾರ್ವಜನಿಕ ಜೀವನದಿಂದ ನಾನು ಸಂಪೂರ್ಣ ನಿವೃತ್ತನಾದರೆ.

ಮೊದಲನೆ ಬಗೆಯು ಎಲ್ಲರಿಗೂ ಬರತಕ್ಕದ್ದೇ. ಕೆಲವರಿಂದು ಸಾಯಬಹುದು; ಬೇರೆ ಕೆಲವರು ನಾಳೆ ಸಾಯಬಹುದು. ಅದರ ವಿಚಾರ ಅನಗತ್ಯ.

ಎರಡನೆಯ ಪ್ರಕಾರವು ಯಾರಿಂದಲೂ ಬಯಸಲ್ಪಡುವದಿಲ್ಲ. ಇಂತಹ ನಿಷ್ಕ್ರಿಯ ಅವಸ್ಥೆಯನ್ನು ನಾನಂತೂ ಬಯಸುವದಿಲ್ಲ. ಭೂಮಿಗೆ ಭಾರವಾದ ಅವಸ್ಥೆಯದು.

ಮೂರನೆಯ ಬಗೆಯನ್ನು ಕುರಿತು ಮಾತ್ರ ಗಂಭೀರ ವಿಚಾರ ಅವಶ್ಯಕ. ಚಟುವಟಿಕೆಯ ಜೀವನವನ್ನು ನಾನಿನ್ನು ಬಿಟ್ಟುಕೊಡಬೇಕೆಂದು ಕೆಲ ಓದುಗರು ಸೂಚಿಸಿರುವರು. ಹಿಂದುಸ್ತಾನದಲ್ಲಿ ಕಳೆದ ೧೫ ನೇ ಅಗಸ್ಟದಿಂದ ಹೊಸಯುಗವು ಆರಂಭವಾಗಿದೆ. ಆ ಯುಗದಲ್ಲಿ ನನಗೇನೂ ಸ್ಥಾನವಿಲ್ಲ. ಈ ಉಪದೇಶದಲ್ಲಿರುವ ಶಬ್ದಗಳನ್ನು ನೋಡಿದರೆ ಅದರಲ್ಲಿ ಸಿಟ್ಟಿನ ಅಂಶವಿದೆಂದು ನನಗನಿಸುತ್ತದೆ. ಆಂತಹ ಉಪದೇಶಕರ ಸಂಖ್ಯೆ ಕಡಿಮೆಯಾಗಿದೆ. ಸ್ವತಂತ್ರ ನಿರ್ಣಯಕ್ಕೆ ನಾನೀಗ ಬರಬೇಕಾಗಿದೆ. ನವಜೀವನ ಧರ್ಮನಿಧಿಯ ಪರವಾಗಿ ಹರಿಜನ ಪತ್ರಿಕೆಗಳನ್ನು ಪ್ರಸಿದ್ಧಿಸಲಾಗುತ್ತಿದೆ. ಅವರು ಬೇಕಾದಾಗ ಅವುಗಳನ್ನು ನಿಲ್ಲಿಸಬಹುದು. ಅವರಿಗೆ ಪೂರ್ಣ ಅಧಿಕಾರ ಉಂಟು. ಹೀಗೆ ನಿಲ್ಲಿಸಬೇಕೆಂದು ಅವರ ಇಚ್ಛೆಯಿಲ್ಲ. ಪ್ರತ್ಯಕ್ಷ ಸಾರ್ವಜನಿಕ ಸೇವೆಯನ್ನು ಮಾಡಬೇಕೆಂದೇ ನನ್ನ ಆಯುಷ್ಯ ರೇಷೆಯಿದೆ (ಹಣೆ ಬರಹವಿದೆ). "ಆಕರ್ಮಣಿಚಕರ್ಮ" ಎಂಬ ಅವಸ್ಥೆಯನ್ನು ನಾನಿನ್ನೂ ಮುಟ್ಟಿಲ್ಲ. ಆದುದರಿಂದ ಕೊನೆಯ ಉಸಿರಿನ ವರೆಗೂ ನನ್ನ ಚಟುವಟಿಕೆಯು ನಡೆಯಬೇಕೆಂದೇ ದೈವಸಂಕಲ್ಪವಿದ್ದಂತೆ ತೋರುತ್ತಿದೆ. ಅದನ್ನು ವಿಂಗಡಿಸಿ ಪ್ರತ್ಯೇಕಿಸುವದು ಸಾಧ್ಯವಿಲ್ಲ. ಅಹಿಂಸೆಯೆಂಬ ಇನ್ನೊಂದು ಹೆಸರುಳ್ಳ ಸತ್ಯದಲ್ಲಿಯೇ ಎಲ್ಲದರ ಮೂಲವಿರುವದು. ಆದುದರಿಂದ ಪತ್ರಿಕೆಗಳು ಈಗಿದ್ದಂತೆಯೆ ಮುಂದೆ ಸಾಗಬೇಕು. "ನನಗೊಂದು ಹೆಜ್ಜೆ ಸಾಕು."

ಹೊಸದಿಲ್ಲಿ ೨೨-೯-೪೭

ಗುಜರಾತಿಯಿಂದ ಅನುವಾದಿತ

ಮಾದಕಗಳ ಪ್ರತಿಬಂಧ

(ಮೋ. ಕ. ಗಾಂಧಿ)

ಈ ಸುಧಾರಣೆಗೆ ಇದುವೆ ತಕ್ಕ ಸಮಯ. ಜನತೆಯ ಸರಕಾರವಿದೆ. ಹಿಂದುಸ್ತಾನದ ಎರಡೂ ಭಾಗಗಳು ಮತ್ತು ಸಂಸ್ಥಾನಗಳು ಸುಧಾರಣೆಗೆ ಸಿದ್ಧವಾಗಿವೆ. ಎರಡೂ ಭಾಗಗಳಲ್ಲಿ ಅನ್ನ ವಸ್ತ್ರಗಳ ಕೊರತೆಯಿದೆ. ಜನರು ಉಪವಾಸ ಸಾಯುವ ಹಾಗು ಬತ್ತಲೆ ತಿರುಗುವ ಪರಿಸ್ಥಿತಿಯಲ್ಲಿರುವಾಗ ಮಾದಕಗಳೆಲ್ಲ ಪೇಯವಿರಲಿ ಓಷಧೀಯವಿರಲಿ—ಆಸಕ್ತನಾಗುವದಕ್ಕೆ ಯಾರಾದರೂ ಎಳೆಸಬಹುದೆ? ಸರೆಸಿಂದಿಗಳ ಸಲುವಾಗಿ ಮತ್ತು ಮಾದಕ ದ್ರವ್ಯಗಳ ಸಲುವಾಗಿ ವೆಚ್ಚ ಮಾಡಿದ ಹಣವು ಬರೀ ಹಾಳಷ್ಟೇ ಅಲ್ಲ; ಅವರ ಮನೋನಿಗ್ರಹವಿಲ್ಲದಂತೆ ಮಾಡುವದು. ನಿರ್ಮಾದಕ ಅವಸ್ಥೆಯಲ್ಲಿದ್ದಾಗ ಎಂದೂ ಮಾಡದಂತಹ ಕೃತಿಗಳನ್ನು ಮಾದಕ ಪ್ರಭಾವಕ್ಕೊಳಗಾದವನು ಮಾಡುವನು. ಹೀಗೆ ಪ್ರತಿಯೊಂದು ದೃಷ್ಟಿಯಿಂದಲೂ ಮದ್ಯಪಾನ ಪ್ರತಿಬಂಧವು ಜೀವಾಳದ ಅವಶ್ಯಕತೆಯಾಗಿದೆ.

ಬರೀ ಶಾಸನಗಳನ್ನು ಮಾಡುವದರಿಂದ ನಾವೆಂದೂ ಈ ಅನರ್ಥದ ಉಚ್ಚಾಟನೆಯನ್ನು ಮಾಡಲಾರೆವು. ಸೆರೆಬಡಕನು ಹೇಗಾದರೂ ಮಾಡಿ ತನ್ನ ಅಪೇಕ್ಷೆಯನ್ನು ಪೂರೈಸಿಕೊಳ್ಳುವನು. ಕಳ್ಳಸ್ಸವಹಾರ ಮಾಡುವವರು ಅದನ್ನು ಬಿಡಲಾರರು. ಆದುದರಿಂದ ಸುಧಾರಣೆ ಯಶಸ್ವಿಯಾಗಲು ಕೆಳಗೆ ಕೊಟ್ಟ ಉಪಾಯಗಳನ್ನಾದರೂ ಅದೇ ಕಾಲಕ್ಕೆ ಯೋಜಿಸಬೇಕಾಗ್ಗುವದು.

(೧) ಆವಶ್ಯಕ ಶಾಸನವನ್ನು ಮಾಡುವದು.

(೨) ಜನಮತವನ್ನು ಸಿದ್ಧಮಾಡುವದು.

(೩) ಸೆರೆಅಂಗಡಿಗಳಿದ್ದಲ್ಲಿ ಉಪಹಾರ ಗೃಹಗಳನ್ನು ತೆರೆದು ಅಲ್ಲಿ ನಿರಪಾಯಕರ ಪೇಯಗಳನ್ನು ಕೊಡುವ ಮತ್ತು ಪುಸ್ತಕ, ವೃತ್ತಪತ್ರ, ಆಟೋಟಗಳ ಏರ್ಪಾಡನ್ನು ಮಾಡುವದು.

(೪) ಮಾದಕ ಪದಾರ್ಥಗಳ ಮಾರಾಟದಿಂದ ಬರುವ ಹಣವನ್ನು ಮದ್ಯಪಾನ ಪ್ರತಿಬಂಧಕ್ಕನುಕೂಲವಾದ ಮತಪ್ರಚಾರಕ್ಕೆ ವಿನಿಯೋಗಿಸುವದು.

ನಾಡಿನ ಮಕ್ಕಳ ಶಿಕ್ಷಣಕ್ಕೆಂದು ಅಥವಾ ಲೋಕೋಪಯೋಗಿ ಕೆಲಸಗಳಿಗೆಂದು ಮಾದಕ ಪದಾರ್ಥಗಳ ಮಾರಾಟದಿಂದ ಬರುವ ಉತ್ಪನ್ನವನ್ನು ವೆಚ್ಚಮಾಡುವದು ಮಹಾ ಅಪರಾಧ. ರಾಷ್ಟ್ರನಿರ್ಮಾಣ ಕಾರ್ಯಗಳಿಗೆ ಇಂತಹ ಹಣವನ್ನು ಬಳಸುವ ಮೋಹವನ್ನು ಸರಕಾರವು ತೊರೆಯಬೇಕು. ಮದ್ಯಪಾನವನ್ನು ಬಿಟ್ಟುಕೊಟ್ಟವರಿಗೆ ಆಗುವ ಶಾರೀರಿಕ ಹಾಗು ನೈತಿಕ ಲಾಭವು ಈ ಕಲಂಕಿತ ಉತ್ಪನ್ನವನ್ನು ಕಳೆದುಕೊಳ್ಳುವದರಿಂದಾಗುವ ಹಾನಿಯನ್ನು ಸಹಜವಾಗಿ ತುಂಬಿಕೊಡುತ್ತದೆ. ಈ ಅನರ್ಥವನ್ನು ನಾವು ನಿರ್ಮೂಲ ಮಾಡಿದರೆ ನಾಡಿನ ಹುಟ್ಟುವಳಿಯನ್ನು ಬೆಳೆಸಲು ಬೇರೆ ಸಾಧನೋಪಾಯಗಳನ್ನು ಸಹಜವಾಗಿ ಹುಡುಕುವೆವು.

(ಗುಜರಾತಿಯಲ್ಲಿಯ ಮೂಲದಿಂದ)

ದಿಲ್ಲಿಯ ಗಾಡಿಯಲ್ಲಿ

೮-೯-೧೯೪೭

ಮಂತ್ರಿಗಳ ಮುಂದಿನ ಕಾರ್ಯ

(ಮೋ. ಕ. ಗಾಂಧಿ)

ಮಂತ್ರಿಗಳ ಸುಖಾಸಕ್ತ ಜೀವನವನ್ನು ಉಗ್ರವಾಗಿ ಟೀಕಿಸುವ ಅನೇಕ ಪತ್ರಗಳು ನನ್ನ ಮುಂದಿವೆ. ಅವರಮೇಲೆ ಪಕ್ಷಪಾತದ, ಸ್ವಜನ ಪಕ್ಷಪಾತದ ಆರೋಪವನ್ನು ಕೂಡ ಮಾಡಲಾಗುತ್ತದೆ. ಇಂತಹ ಟೀಕೆಯೆಲ್ಲ ಅಜ್ಞಾನದ ಮೂಲಕ ಆಗುತ್ತದೆಂಬುದನ್ನು ನಾನು ಬಲ್ಲೆ. ಮಂತ್ರಿಗಳು ಇದರ ಬಗ್ಗೆ ಬಹಳ ಮನಸ್ಸಿಗೆ ಹಚ್ಚಿಕೊಳ್ಳಬಾರದು. ದೋಷಾರೋಪಕ ಟೀಕೆಗಳನ್ನು ಕೂಡ ಅವರು ಒಳ್ಳೆಯ ಅರ್ಥದಲ್ಲಿಯೇ ತೆಗೆದುಕೊಳ್ಳಬೇಕು, ನನ್ನ ಕಡೆಗೆ ಬಂದ ಪತ್ರಗಳೆಲ್ಲ ಅವರಿಗೆ ಕಳಿಸಿದರೆ ಅವರು ಚಕಿತರಾಗಬಹುದು-ಕದಾಚಿತ್ ಅದಕ್ಕಿಂತ ಕೆಟ್ಟ ಪತ್ರಗಳು ಅವರಿಗೆ ಬರುತ್ತಿರಬಹುದು- ಅದೇನೇ ಇದ್ದರೂ ಸರಳತೆ, ಧೈರ್ಯ, ಪ್ರಾಮಾಣಿಕತೆ ಉದ್ಯೋಗ ಶೀಲತೆಗಳಲ್ಲಿ ಇತರರಿಗಿಂತ ಹೆಚ್ಚಾಗಿ ಜನಸೇವಕರಾದ ತಮ್ಮ ಮಂತ್ರಿಗಳಿಂದ ಟೀಕಾಕಾರರು ಹೆಚ್ಚಿನದನ್ನು ಅಪೇಕ್ಷಿಸುತ್ತಾರೆಂಬುದೇ ಇದರ ನೀತಿ ಬೋಧವೆಂದು ನಾನು ಬಗೆಯುತ್ತೇನೆ. ಹಿಂದಿನ ಆಂಗ್ಲ ಅರಸರನ್ನು ನಾವು ಈ ವಿಷಯದಲ್ಲಿ ಅನುಕರಿಸಲಾರೆವು; ಆದರೆ ಅವರ ಉದ್ಯೋಗ ಪ್ರೀತಿ ಮತ್ತು ಓರಣಗಳನ್ನು ಮಾತ್ರ ಅನುಕರಿಸಬಹುದು. ಒಂದೆಡೆ ಮಂತ್ರಿಗಳು ನಿಜವಾದ ಟೀಕೆಯಿಂದ ಲಾಭ ಪಡೆದುಕೊಂಡರೆ ಮತ್ತು ಇನ್ನೊಂದೆಡೆ ಟೀಕಾಕಾರರು ತಾಳ್ಮೆಯುಳ್ಳವರಾಗಿ ನಿಜ ಸಂಗತಿಗಳ ಬಗ್ಗೆ ದಕ್ಷರಾದರೆ ಈ ಟಿಪ್ಪಣಿಯ ಪೂರ್ಣ ಉದ್ದೇಶವು ಈಡೇರಿದಂತಾಗುವದು. ಅತಿಶಯೋಕ್ತಿ ಅಥವಾ ಅಯಥಾರ್ಥತೆ ಒಳ್ಳೆಯ ಕೆಲಸ ಹಾಳು ಮಾಡುವದು.

ದಿಲ್ಲಿಯ ಗಾಡಿಯಲ್ಲಿ

೮—೯—೧೯೪೭

ಮೈಸೂರ ಸಂಸ್ಥಾನದಲ್ಲಿ

"ಸಂಯುಕ್ತ ಕರ್ನಾಟಕ"ದ ಮೇಲೆ ನಿರ್ಬಂಧ

ಬೆಂಗಳೂರಲ್ಲಿ ಸಂಚಿಕೆಯ ಜಪ್ತಿ

ಮೈಸೂರ ಸರಕಾರದವರು ತಮ್ಮ ಸಂಸ್ಥಾನದಲ್ಲಿ ಹುಬ್ಬಳ್ಳಿಯ "ಸಂಯುಕ್ತ-ಕರ್ನಾಟಕ" ದ ಪ್ರಸಾರ ಮತ್ತು ಮಾರಾಟದ ಮೇಲೆ ನಿರ್ಬಂಧ ಹಾಕಿರುವರು.

ಪೋಲೀಸರು ೨೮ ನೇ ತಾರೀಖಿನ ದಿವಸ ಸಂಯುಕ್ತ-ಕರ್ನಾಟಕ ಏಜಂಟರ ಕಚೇರಿಯ ಝಡತಿ ಮಾಡಿ ೨೩ ಮತ್ತು ೨೪ ನೇ ದಿನಾಂಕದ ಸಂಚಿಕೆಗಳನ್ನು ಜಪ್ತ ಮಾಡಿರುವರು.

ರಾಷ್ಟ್ರೀಯ ಸೇವಕ ಸಂಘದ ಸದಸ್ಯರಿಗೆ

(೧೬ ನೆಯ ದಿನಾಂಕ ಬೆಳಿಗ್ಗೆ ಗಾಂಧೀಜಿ ರಾ. ಸೇ. ಸಂಘದ ಸದಸ್ಯರಿಗೆ ಕೆಲವು ಮಾತುಗಳನ್ನು ಹೇಳಿದರು. ಅವನ್ನು ಕೆಳಗೆ ಕೊಡಲಾಗಿದೆ. —ಸುಶೀಲಾ ನಯ್ಯರ.)

ತ್ಯಾಗವೊಂದೇ ಸಾಲದು.

ಈ ಬೆಳಿಗ್ಗೆ ಭಂಗಿ ವಸತಿಯಲ್ಲಿ ಸುಮಾರು ಐನೂರು ಜನ ರಾಷ್ಟ್ರೀಯ ಸೇವಕ ಸಂಘದ ಸದಸ್ಯರನ್ನುದ್ದೇಶಿಸಿ ಮಾತನಾಡುತ್ತ ಸ್ಥಾಪಕರಾದ ಶ್ರೀ ಹೆಡ್ಗೇವರರು ಬದುಕಿದ್ದಾಗ ರಾ. ಸೇ. ಸಂಘದ ಶಿಬಿರಕ್ಕೆ ತಾವು ಬಹಳ ವರ್ಷಗಳ ಕೆಳಗೆ ಭೆಟ್ಟಿಯಿತ್ತುದಾಗಿ ಗಾಂಧೀಜಿ ಹೇಳಿದರು. ದಿವಂಗತರಾದ ಶ್ರೀ ಜಮನಾಲಾಲ ಬಜಾಜರು ತಮ್ಮನ್ನು ಅಲ್ಲಿಗೆ ಕರೆದೊಯ್ದರೆಂದೂ ಆಗ ತಮಗೆ ಅಲ್ಲಿಯವರ ಶಿಸ್ತು, ಸಂಪೂರ್ಣ ಅನಸ್ಪೃಶ್ಯತೆ ಮತ್ತು ಉಗ್ರ ಸರಳತೆಗಳು ಮೆಚ್ಚಿಗೆಯಾದವೆಂದು ಅವರು ಅಭಿಪ್ರಾಯ ಪಟ್ಟರು. ಅಂದಿನಿಂದ ಸಂಘವು ಬಹಳ ಮಟ್ಟಿಗೆ ಬೆಳೆದಿದೆ. ಗಾಂಧೀಜಿಯ ಮತದಂತೆ ಸೇವೆ ಸ್ವಾರ್ಥತ್ಯಾಗಗಳನ್ನು ಧ್ಯೇಯವನ್ನಾಗಿಟ್ಟುಕೊಂಡ ಯಾವ ಸಂಸ್ಥೆ ಯಾವರೂ ಬಲಿತು ಸಮರ್ಥವಾಗಿ ನಿಲ್ಲದಿರದು. ಆದರೆ ನಿಜವಾಗಿಯೂ ಉಪಯುಕ್ತ ಸಂಸ್ಥೆಯಾಗಿರಬೇಕಾದರೆ ಸ್ವಾರ್ಥತ್ಯಾಗದ ಜೊತೆಗೆ ಉದ್ದೇಶ ಪಾವಿತ್ರ್ಯ ಮತ್ತು ಯಥಾರ್ಥ ಜ್ಞಾನವು ಇರುವುದವಶ್ಯಕ. ಇವೆರಡಿಲ್ಲದ ಬರಿಯ ತ್ಯಾಗವು ಸಮಾಜಕ್ಕೆ ಹಾನಿಕರವಾಗಿ ಪರಿಣಮಿಸುವದು ಅನುಭವ ಸಿದ್ಧವಾದುದು.

ಸನಾತನಿ ಹಿಂದು

ಮೊಟ್ಟಮೊದಲು ಹಾಡಲಾದ ಪ್ರಾರ್ಥನಾ ಪದ್ಯವು ಭಾರತ ಮಾತೆ, ಹಿಂದು ಸಂಸ್ಕೃತಿ ಮತ್ತು ಹಿಂದುಧರ್ಮಗಳ ಸ್ತುತಿಪರವಾದುದಾಗಿತ್ತು. ತಾವು ಸನಾತನಿ ಹಿಂದುವಿರುವದಾಗಿ ಗಾಂಧೀಜಿ ಹೇಳಿದರು. ಅವರು ಸನಾತನ ಶಬ್ದದ ಯೋಗಾರ್ಥವನ್ನು ಗ್ರಹಿಸಿದರು. ಹಿಂದು ಶಬ್ದದ ಮೂಲವನ್ನು ಸರಿಯಾಗಿ ಯಾರೂ ಅರಿಯರು. ಆ ಹೆಸರನ್ನು ನಮಗೆ ಕೊಡಲಾಯಿತು ಮತ್ತು ನಾವು ಸ್ವಾಭಾವಿಕವಾಗಿ ಅದನ್ನು ಸ್ವೀಕರಿಸಿದೆವು. ಹಿಂದುಧರ್ಮವು ಜಗತ್ತಿನ ಎಲ್ಲ ಧರ್ಮಗಳ ಅತ್ಯುತ್ತಮಾಂಶಗಳನ್ನು ತನ್ನಲ್ಲಿ ಅಡಕಮಾಡಿಕೊಂಡಿದೆ ಮತ್ತು ಆ ಅರ್ಥದಲ್ಲಿ ಅದೊಂದು ವಿಶಿಷ್ಟ ಧರ್ಮವೇ ಅಲ್ಲವೆನ್ನಬಹುದು. ಆದುದರಿಂದ ಅದಕ್ಕೆ ಇಸ್ಲಾಂ ಅಥವಾ ಅದರ ಅನುಯಾಯಿಗಳಲ್ಲಿ ಜಗಳವಿಲ್ಲ—ಇಂದು ಹಾಗೆ ಕಲಹವುಂಟಾಗಿರುವದು ದುರ್ದೈವದ ಸಂಗತಿ. ಹಿಂದು ಧರ್ಮದಲ್ಲಿ ಅಸ್ಪೃಶ್ಯತೆಯ ಕಾಲಕೂಟವು ಹೊಕ್ಕೊಡನೆ ಅದರ ಇಳಿಗಾಲ ಆರಂಭವಾಯಿತು. ಒಂದು ಮಾತ್ರ ಖಂಡಿತ. ಅದನ್ನು ಗಾಂಧೀಜಿ ಕಹಳೆಯಂತೆ ಧ್ವನಿಗೊಟ್ಟಿದ್ದಾರೆ: ಅಸ್ಪೃಶ್ಯತೆ ಬದುಕಿದರೆ ಹಿಂದುಧರ್ಮ ಸಾಯುತ್ತದೆ. ಹಾಗೇ ಹಿಂದುಸ್ತಾನದಲ್ಲಿ ಹಿಂದುಗಳಿಗಲ್ಲದೆ ಅನ್ಯರಿಗೆ ಅದರಲ್ಲೂ ಮುಸ್ಲಿಮೇತರರಿಗೆ, ವಿಶೇಷತಃ ಮುಸ್ಲಿಮರಿಗೆ ಸ್ಥಳವಿಲ್ಲವೆಂದು ಹಿಂದು ತಿಳಿದರೆ—ಇಲ್ಲಿ ಬದುಕಬೇಕೆನಿಸಿದರೆ, ಅವರು ಹಿಂದುಗಳ ಗುಲಾಮರಾಗಿ ಬದುಕಬೇಕಾಗುತ್ತದೆ—ಮತ್ತು ಆವರು ಹಿಂದುಧರ್ಮವನ್ನು ಕೊಲ್ಲುತ್ತಾರೆ. ಅದೇ ರೀತಿಯಿಂದ ಪಾಕಿಸ್ತಾನದಲ್ಲಿ ಮುಸ್ಲಿಮರಿಗೆ ಮಾತ್ರ ನ್ಯಾಯಬದ್ಧ ಸ್ಥಾನವಿದೆಯೆಂದು ಅದು ತಿಳಿದರೆ—ಮುಸ್ಲಿಮೇತರರು ಪೀಡಿತರಾಗಿ ಬಾಳಬೇಕಾಗುತ್ತದೆ—ಅದು ಭರತಖಂಡದಲ್ಲಿ ಇಸ್ಲಾಮಿಗೆ ಮೃತ್ಯುಪಾಶವೇ ಸರಿ.

ಕೇಡಿಗೆ ಬದಲು ಒಳಿತು

ಹಿಂದುಸ್ತಾನವು ವಿಭಕ್ತವಾಗಿರುವುದು ದುರ್ಭಾಗ್ಯ. ಒಂದು ವಿಭಾಗ ಉನ್ಮತ್ತವಾಗಿ ಕುತ್ಸಿತ ಕಾರ್ಯಗಳನ್ನು ಮಾಡಿದೊಡನೆ ಇನ್ನೊಂದು ವಿಭಾಗವೂ ಹಾಗೆ ಮಾಡಬೇಕೆಂದು ಯಾವ ನಿಯಮವಿದೆ? ಕೇಡಿಗೆ ಕೇಡೆಂಬುದರಲ್ಲಿ ಅರ್ಥವಿಲ್ಲ. ಗರ್ಮವು ನಮಗೆ ಕೇಡಿಗೆ ಬದಲು ಒಳಿತು ಮಾಡಬೇಕೆಂದು ಬೋಧಿಸುತ್ತದೆ.

ಸಂಘದ ಸಮರ್ಥನೆ

ಗಾಂಧೀಜಿ ರಾ. ಸೇ. ಸಂಘದ ಗುರುಗಳನ್ನು ಕೆಲತಿಂಗಳ ಹಿಂದೆ ನೋಡಿದ್ದರು. ಕಲಕತ್ತ ಮತ್ತು ದಿಲ್ಲಿಯಲ್ಲಿ ತಮ್ಮೆಡೆಗೆ ಸಂಘದ ವಿರುದ್ಧ ಬಂದ ದೂರುಗಳನ್ನು ಅವರು ಆ ಗುರುಗಳಿಗೆ ಹೇಳಿದ್ದರು. ತಮಗೆ ಸಂಘದ ಪ್ರತಿಯೊಬ್ಬ ಸದಸ್ಯನ ನಡತೆಯ ಬಗ್ಗೆ ಹೊಣೆ ಕೊಡಲಾಗದಿದ್ದರೂ ಇದೀ ಸಂಘದ ಪ್ರಸಿದ್ಧ ಧೋರಣವು ಹಿಂದುಗಳ ಮತ್ತು ಹಿಂದುಧರ್ಮದ ಸೇವೆಯೇ ಆದೂ ಯಾವನಾದರೊಬ್ಬನ ವಿತ್ತ ಜೀವಿತಾದಿಗಳನ್ನು ಬಲಿತೆಗೆದುಕೊಂಡಲ್ಲ— ಎಂಬುದರ ಬಗ್ಗೆ ಆಶ್ವಾಸನ ಕೊಡುವುದಾಗಿ ಸಂಘದ ಗುರುಗಳು ಹೇಳಿದರು. ಪೀಡೆಯಲ್ಲಿ ಸಂಘದ ಶ್ರದ್ಧೆಯಿಲ್ಲ. ಅಹಿಂಸೆಯಲ್ಲಿ ಅದಕ್ಕೆ ನಂಬಿಗೆಯಿಲ್ಲ. ಆತ್ಮರಕ್ಷಣಾ ಕಲೆಯನ್ನು ಅದು ಬೋಧಿಸುತ್ತದೆ, ಅದು ಸೇಡನ್ನೆಂದೂ ಉಪದೇಶಿಸಿಲ್ಲ.

ಅಜಾತಶತ್ರು

ಭಾರತನೌಕೆಯಿಂದು ವಿಷಮ ಜಲರಾಶಿಯಲ್ಲಿ ತೇಲಿ ನಡೆದಿದೆ. ಸರಕಾರದಲ್ಲಿ ಅಧಿಕೃತರಾದ ಮುಖಂಡರು ಹಿಂದುಸ್ತಾನದಲ್ಲೇ ಅತ್ಯುತ್ತಮರು. ಕೆಲವರಿಗೆ ಅವರಲ್ಲಿ ತೃಪ್ತಿಯಿಲ್ಲ. ಅಂಥವರು ಈಗಿನ ಮುಖಂಡರಿಗಿಂತ ಉತ್ತಮರಾದವರನ್ನು ತರಲಿ, ಹಾಗೆ ತಂದರೆ ಅವರಿಗೆ ತಾವು ಅಧಿಕಾರ ವಹಿಸಿ ಕೊಡುವಂತೆ ಸದ್ಯದ ಮುಖಂಡರಿಗೆ ಸಲಹೆ ಕೊಡುವೆವೆಂದು ಗಾಂಧೀಜಿ ಹೇಳಿದರು. ಎಷ್ಟಾದರೂ ಸರದಾರ ಪಟೇಲರು ಮುದುಕರಾಗಿದ್ದಾರೆ. ವಯಸ್ಸಿನಲ್ಲಿ ಮುದುಕರಲ್ಲದಿದ್ದರೂ ತಮ್ಮ ಹೆಗಲು ಹೊತ್ತ ಭಾರದಿಂದ ಪಂಡಿತ ಜವಾಹರರು ಮುಪ್ಪಡಸಿದ ನಿಸ್ತೇಜ ಮನುಷ್ಯರಾಗಿ ಕಾಣುತ್ತಾರೆ. ಅವರು ಜನಸೇವೆಗಾಗಿ ಶಕ್ತಿಮೀರಿ ಪ್ರಯತ್ನಿಸುತ್ತಿದ್ದಾರೆ. ಆದರೆ ಅವರು ತಮ್ಮ ಅನುಭವದ ಪ್ರಕಾರ ಮಾತ್ರ ನಡೆಯಬಲ್ಲರು. ಮಹಾಸಾಗರ ಪ್ರಮಾಣದ ಹಿಂದು ಜನಸಮುದಾಯವು ತಪ್ಪುದಾರಿಯಾದರೂ ಸರಿಯೆಂದು ಯಾವುದೋ ಒಂದು ದಾರಿ ಹಿಡಿದರೆ ಅದನ್ನು ತಡೆಯುವುದು ಯಾರಿಂದಲೂ ಸಾಧ್ಯವಿಲ್ಲ. ಆದರೆ ಯಾವನೇ ಆಗಲಿ ಒಬ್ಬ ವ್ಯಕ್ತಿಗೆ ಅದರ ವಿರುದ್ಧ ದನಿಯೆತ್ತಲು ಮತ್ತು ಅದಕ್ಕೆ ಎಚ್ಚರ ಕೊಡಲು ಹಕ್ಕಿದೆ. ಅದನ್ನೇ ತಾವು ಮಾಡುತ್ತಿರುವದಾಗಿ ಗಾಂಧೀಜಿಯೆಂದರು. ಅವರು ಮುಸ್ಲಿಮರ ಮಿತ್ರರು ಹಾಗೂ ಹಿಂದು ಶೀಖ ವೈರಿಗಳೆಂದು ಹೇಳುವವರಿದ್ದಾರೆ. ಆದರೆ ಅದು ತಪ್ಪು- ಅವರು ಮುಸ್ಲಿಮರಂಗೆ ಹೇಗೋ ಶೀಖ ಪಾರಸಿಗಳೂ ಹಾಗೇ ಗೆಳೆಯರು. ಈ ವಿಷಯದಲ್ಲಿ ಅವರು ೧೨ ವರ್ಷ ವಯಸ್ಸಿನಿಂದ ಇಂದಿನ ವರೆಗೂ ಅದೇ ರೀತಿಯ ನಡತೆಯುಳ್ಳವರಾಗಿದ್ದಾರೆ. ಆದರೆ ಅವರನ್ನು ಹಿಂದು ಶೀಖರ ಶತ್ರುವೆಂದು ಕರೆದವರು ಗಾಂಧೀಜಿಯನ್ನು ಚೆನ್ನಾಗಿ ತಿಳಿದವರಲ್ಲ. ಗಾಂಧೀಜಿ ಅಜಾತ ಶತ್ರು. ಹಿಂದು ಶೀಖರಿಗಂತೂ ಎಂದಿಗೂ ಹಗೆಯಲ್ಲ.

ದುಷ್ಕೃತ್ಯದ ಪರಿಣಾಮ

ಪಾಕಿಸ್ತಾನ ತಪ್ಪು ದಾರಿಯಲ್ಲಿ ನಡೆಯುತ್ತಲೇ ಹೋದರೆ ಭಾರತ ಮತ್ತು ಪಾಕಿಸ್ತಾನಗಳಲ್ಲಿ ಯುದ್ಧವಾಗಿಯೇ ತೀರುವುದು. ತಮ್ಮನ್ನು ಕೇಳುವುದಾದರೆ ಸೈನ್ಯ, ಪೋಲೀಸುಬಲ ಯಾವುದೂ ಅಗತ್ಯವಿಲ್ಲವೆಂದು ಗಾಂಧಿಯವರೆಂದರು. ಆದರೆ ಇದೆಲ್ಲ ದೊಡ್ಡ ದೊಡ್ಡ ಮಾತುಗ

೧೦ ನೇ ಪುಟಕ್ಕೆ—

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

ಹೊಸದಿಲ್ಲಿ ೧೫—೯—೪೭

ಸಾಮಾನ್ಯತಃ ಚೇತನದಾಯಿ ಮತ್ತು ಸಂತೋಷದಾಯಿಯಾದ ಮಳೆಯ ಸಪ್ಪಳವನ್ನು ಇಂದು ರಾತ್ರಿ ನಾನು ಕೇಳುತ್ತ ನಡೆದಂತೆ ನನ್ನ ಮನಸ್ಸೆಲ್ಲ ದಿಲ್ಲಿಯಲ್ಲಿಯ ನಿರ್ವಾಸಿತರ ಶಿಬಿರಗಳಲ್ಲಿ ಬಟ್ಟಬಯಲಿನಲ್ಲಿ ಬಿದ್ದುಕೊಂಡಿರುವ ಸಾವಿರಾರು ಜನರತ್ತ ಹರಿಯಿತು. ಎಲ್ಲ ಪಕ್ಕಗಳಿಂದ ಸಂರಕ್ಷಿಸಿಕೊಂಡು ಅಂಗಣದಲ್ಲಿ ನಾನು ಅವಿತುಕೊಂಡು ಮಲಗಿಕೊಂಡಿದ್ದೆ. ಆದರೆ ತನ್ನ ಬಾಂಧವನ ಮೇಲೆ ಮಾನವನು ತನ್ನ ಕ್ರೂರ ಕೈಮಾಡಿರದಿದ್ದರೆ ಇಂದು ಸಾವಿರಾರು ಸ್ತ್ರೀಪುರುಷರು ಚಿಕ್ಕಮಕ್ಕಳು ನಿರ್ವಾಸಿತರಾಗುತ್ತಿರಲಿಲ್ಲ ಮತ್ತು ಅನೇಕ ಸಂದರ್ಭಗಳಲ್ಲಿ ಅನ್ನವಿಲ್ಲದೆ ಬಳಲುತ್ತಿರಲಿಲ್ಲ. ಕೆಲಸ್ಥಳದಲ್ಲಿಯಂತೂ ಅವರು ಮೊಳಕಾಲು ಮಟ ನೀರಿನಲ್ಲಿ ನಿಲ್ಲದೆ ಗತ್ಯಂತರವಿರಲಿಲ್ಲ. ಇವೆಲ್ಲವು ಅಪರಿಹಾರ್ಯವಾಗಿದ್ದಿತೆ? ನನ್ನ ಅಂತರಾಳದಿಂದ ಇದಕ್ಕೆ ಬರುವ ಉತ್ತರ ಸ್ಪಷ್ಟ 'ನಕಾರಾ'ತ್ಮಕವಾಗಿದೆ. ಸ್ವಾತಂತ್ರ್ಯದ ಮೊಟ್ಟಮೊದಲನೆಯ ಫಲವೆ ಇದು? ಕೇವಲ ಒಂದು ತಿಂಗಳಿನ ಹಸುಗೂಸು! ಕಳೆದ ಇಪ್ಪತ್ತು ಗಂಟೆಗಳಿಂದ ಒಂದೇಸವನೆ ನನ್ನ ಮನಸಿನಲ್ಲಿ ಈ ವಿಚಾರ ಕಟಿಯುತ್ತಿದೆ. ನನ್ನ ಮೌನವು ಕಲ್ಯಾಣಪ್ರದವೆ ಆಗಿದೆ. ಅದರಿಂದ ಅಂತಃಪರಿಶೋಧನೆಗೆ ನನಗೆ ಅವಕಾಶ ದೊರೆತಿದೆ. ದಿಲ್ಲಿಯ ನಾಗರಿಕರು ಹುಚ್ಚರಾಗಿರುವರೆ? ಅವರಲ್ಲಿ ಮಾನವತೆಯು ಕೊಂಚ ಮಟ್ಟಿಗಾದರೂ ಉಳಿದಿಲ್ಲವೆ? ದೇಶಪ್ರೇಮ ಮತ್ತು ದೇಶಸ್ವಾತಂತ್ರ್ಯ ಅವರಿಗೆ ಸಂದೇಶವನ್ನು ಕೊಟ್ಟಿಲ್ಲವೆ?

ಹಿಂದು ಮತ್ತು ಶೀಖರ ಮೇಲೆಯೆ ನಾನು ಮೊದಲು ದೋಷವನ್ನು ಹೊರಿಸಿದರೆ ದಯವಿಟ್ಟು ನನ್ನನ್ನು ಕ್ಷಮಿಸಬೇಕು. ದ್ವೇಷಾಗ್ನಿಯನ್ನು ಶಾಂತಗೊಳಿಸಿಕೊಳ್ಳಲು ಶಕ್ತರಾಗದವರೇ ಅವರು? ಎಲ್ಲ ಬಗೆಯ ಅಂಜಿಕೆಯನ್ನು ಬಿಟ್ಟುಗೊಟ್ಟು ಪರಮಾತ್ಮನನ್ನೇ ನಂಬಿ, ಯಾವ ಶಸ್ತ್ರಾಸ್ತ್ರಗಳು ನಿಮ್ಮಲ್ಲಿರುವವೆಂದು ಹಿಂದುಗಳು ಮತ್ತು ಶೀಖರು ಭಯಭೀತರಾಗಿರುವರೊ ಆ ಶಸ್ತ್ರಾಸ್ತ್ರಗಳನ್ನೆಲ್ಲ ಹುಡುಕಿ ತೆಗೆಯಿರೆಂದು ನಾನು ದಿಲ್ಲಿಯಲ್ಲಿಯ ಮುಸಲ್ಮಾನರಿಗೆಲ್ಲ ಬಿನ್ನವಿಸಿಕೊಳ್ಳುತ್ತೇನೆ. ಹಿಂದು ಮತ್ತು ಶೀಖರಲ್ಲಿ ಶಸ್ತ್ರಾಸ್ತ್ರಗಳಿಲ್ಲೆಂದು ಇದರ ಅರ್ಥವಲ್ಲ; ಸಂಖ್ಯೆಯ ಪ್ರಶ್ನೆ ಇದರಲ್ಲಿ ಇದೆ. ನ್ಯಾಯ್ಯವನ್ನು ಮಾಡುವದಕ್ಕಾಗಿ ಅಲ್ಪಸಂಖ್ಯಾಕರು ಪರಮಾತ್ಮನನ್ನು ಮತ್ತು ಅವನು ಸೃಷ್ಟಿಸಿದ ಮಾನವರನ್ನಾದರೂ ನಂಬಬೇಕು, ಇಲ್ಲವೆ ಆ ಬಗೆಯ ನಂಬಿಗೆ ಅಶಕ್ಯವೆನಿಸಿದರೆ ಆತ್ಮರಕ್ಷಣೆಗಾಗಿ ಶಸ್ತ್ರಾಸ್ತ್ರಗಳನ್ನಾದರೂ ಆಶ್ರಯಿಸಬೇಕು.

ನಿಮ್ಮ ಸರಕಾರದ ಮೇಲೆ ವಿಶ್ವಾಸವಿಡಿರಿ

ನನ್ನ ಸಲಹೆ ಸ್ಪಷ್ಟ ಮತ್ತು ಗಟ್ಟಿಮುಟ್ಟಾಗಿದೆ. ಎಷ್ಟೇ ಶಸ್ತ್ರಾಸ್ತ್ರ ಸನ್ನದ್ಧರಾಗಿದ್ದ ತಪ್ಪಿತಸ್ಥರ ವಿರುದ್ಧವಾಗಿಯೂ ಪ್ರತಿಯೊಬ್ಬ ನಾಗರಿಕನ ರಕ್ಷಣೆಗಾಗಿ ನಿಮ್ಮ ಸರಕಾರದ ಮೇಲೆಯೇ ವಿಶ್ವಾಸವಿಡಿರಿ. ಅನ್ಯಾಯವಾಗಿ ಅಲ್ಪಸಂಖ್ಯಾಕರನ್ನು ನಿರಾಶ್ರಿತಗೊಳಿಸಿದ್ದಕ್ಕಾಗಿ ಆ ಸರಕಾರದಿಂದ ಹಾನಿಯನ್ನು ತುಂಬಿಕೊಡಲು ಕೇಳಿರಿ. ಮೃತರಾದವರನ್ನು ಪುನರುಜ್ಜೀವಿಸುವದನ್ನು ಜಗತ್ತಿನ ಯಾವ ಸರಕಾರವೂ ಮಾಡಲಾರದು. ಪಾಕಿಸ್ತಾನ ಸರಕಾರದಿಂದ ನ್ಯಾಯ್ಯವನ್ನು ಕೇಳಿಕೊಳ್ಳುವದನ್ನು ದಿಲ್ಲಿಯ ನಾಗರಿಕರು ಬಹಳ ಕಠಿಣಪಡಿಸುತ್ತಿರುವರು. ನ್ಯಾಯ್ಯವನ್ನು ಅಪೇಕ್ಷಿಸುವವರು ಸ್ವತಃ ನ್ಯಾಯ್ಯವನ್ನೆ ಮಾಡತಕ್ಕದ್ದು. ಸ್ವತಃ ಪರಿಶುದ್ಧರಾಗಿರತಕ್ಕದ್ದು. ಹಿಂದು ಮತ್ತು ಶೀಖರು ನ್ಯಾಯ್ಯವಾದ ಮಾರ್ಗವನ್ನನುಸರಿಸಿ ಮನೆಯಿಂದ ಹೊರದೆಗೆಲ್ಪಟ್ಟ ಮುಸಲ್ಮಾನರನ್ನು ಮರಳಿ ಮನೆಗೆ ಬರಲಿಕ್ಕೆ ಆಮಂತ್ರಿಸತಕ್ಕದ್ದು. ಎಲ್ಲ ದೃಷ್ಟಿಯಿಂದಲೂ ಸ್ತುತ್ಯವಾದ ಈ ಕಠಿಣ ನಡೆ ಮಾರ್ಗವನ್ನನುಸರಿಸಿದರೆ ಅವರು ನಿರ್ವಾಸಿತರ ಈ ಪ್ರಶ್ನೆಯನ್ನು ಬಹಳ ಸುಲಭಗೊಳಿಸುವರು. ಪಾಕಿಸ್ತಾನದ ಪ್ರಶಂಸೆಗೆ ಅವರ ಪಾತ್ರರಾಗುವರಷ್ಟೇ ಅಲ್ಲ ಇಡೀ ಜಗತ್ತಿನ ಮನ್ನಣೆಗೂ ಪಾತ್ರರಾಗುವರು. ದಿಲ್ಲಿಯನ್ನು ಮತ್ತು ಭಾರತವನ್ನು ಅಪಕೀರ್ತಿ ಮತ್ತು ವಿನಾಶದಿಂದ ರಕ್ಷಿಸಬಲ್ಲರು. ನನ್ನ ಮಟ್ಟಿಗೆ ಹೇಳುವದಾದರೆ ಕೋಟ್ಯವಧಿ ಹಿಂದು ಮತ್ತು ಶೀಖರು ಹಾಗು ಮುಸಲ್ಮಾನರು ಗುಳೇ ಹೋಗುವ ಪ್ರಶ್ನೆ ಅಶಕ್ಯವಾದುದು ಅದು ಸರಿಯಾದುದಲ್ಲ. ಜನತೆಯು ಗುಳೇ ಹೋಗುವುದನ್ನು ದೃಢ ನಿರ್ಧಾರದಿಂದ ತಪ್ಪಿಸಿ ಪಾಕಿಸ್ತಾನದ ತಪ್ಪನ್ನು ಸರಿಪಡಿಸಿಕೊಳ್ಳಬಹುದು. ಇದಕ್ಕೆ ಬೇರೆ ಯಾರ ಬೆಂಬಲವು ಇಲ್ಲದೆ ಹೋದರೂ ನಾನೊಬ್ಬನೆ ಈ ವ್ರತನಿರ್ವಾಹಕ್ಕೆ ಬದ್ಧನಾಗಿ ಉಳಿಯುವ ಧೈರ್ಯ ನನ್ನಲ್ಲಿ ಇರುವುದೆಂದು ನಾನು ಆಶಿಸುತ್ತೇನೆ.

ಗಣೇಶ ಲಾಯಿನ್ಸ ದಿಲ್ಲಿ
೧೭—೯—೪೭

ಒತ್ತಾಯವಿಲ್ಲ

ವಿಶಾಲವಾದ ಪಟಾಂಗಣದಲ್ಲಿ ದಿಲ್ಲಿ ಜವಳಿ ಗಿರಣಿಗಳ ಮತ್ತು ಹೊರಗಿನ ಗಿರಣಿಗಳ ಕೆಲಸಗಾರರ ಪ್ರಚಂಡ ಸಮ್ಮರ್ದ ಕೂಡಿದ್ದಿತು. ವಾಲ್ಮೀಕಿ ಆಶ್ರಮದಲ್ಲಿ ಗಾಂಧೀಜಿಯವರು ತಂಗಿದಾಗೆಲ್ಲ ಸ್ವಯಂಸೇವಕರನ್ನು ಒದಗಿಸುತ್ತಿದ್ದ ಕೆಲಸಗಾರರ ಬಿನ್ನಹದ ಮೇರೆಗೆ ಗಾಂಧೀಜಿಯವರು ಅಲ್ಲಿಗೆ ಹೋಗಿದ್ದರು. ಸಾಯಂಕಾಲ ೬-೩೦ ಗಂಟೆಗೆ ಗಾಂಧೀಜಿ ಅಲ್ಲಿಗೆ ಹೋದ ಕೂಡಲೆ ಧ್ವನಿವಾಹಕ ಯಂತ್ರದ ಮುಖಾಂತರ ಮಾತಾಡಲು ಪ್ರಯತ್ನಿಸಿದರು. ಆದರೆ ಆ ಧ್ವನಿವಾಹಕ ಯಂತ್ರ ಸರಿಯಾಗಿಲ್ಲದ್ದರಿಂದ ಮತ್ತೊಂದು ಯಂತ್ರವನ್ನು ಹಚ್ಚಿ ನೋಡಲಾಯಿತು. ಅದೇನೋ ಸ್ವಲ್ಪ ಕೆಲಸ ಕೊಟ್ಟಿತು. ಆದರೆ ದೂರದಲ್ಲಿ ಆಚೆಯ ಬದಿಗೆ ಕುಳಿತವರಿಗೆಲ್ಲ ಅದು ಕೇಳಿಸಲಿಲ್ಲ. ಆದರೆ ಗಾಂಧೀಜಿಯು ಹೇಳಿದುದನ್ನೆಲ್ಲ ಶಬ್ದಶಃ ತಿರುಗಿ ಹೇಳಲು ಪಂಜಾಬಿ ಮಿತ್ರನೊಬ್ಬನು ಮುಂದೆ ಬಂದನು. ಇದು ಕೆಲಸವನ್ನು ಸಾಗಿಸಿತು. ಗಾಂಧೀಜಿ ಹೇಳಿದರು. ಸಭಿಕರಲ್ಲಿ ಒಬ್ಬರೂ ಆಕ್ಷೇಪಿಸದೆ ಎಲ್ಲರೂ ಪ್ರಾರ್ಥನೆ ಮಾಡಿರೆಂದು ಹೇಳಿದ ಹೊರತು ಸಾರ್ವಜನಿಕ ಪ್ರಾರ್ಥನೆಯನ್ನು ಮಾಡಕೂಡದೆಂದು ನಿನ್ನೆ ದಿನದ ಅನುಭವದಿಂದ ನಾನು ನಿರ್ಧರಿಸಿರುವೆ. ಯಾರ ಮೇಲೆಯೂ ಯಾವುದನ್ನೂ ಎಂದೂ ನಾನು ಹೇರಿರುವದಿಲ್ಲ. ಅವರಲ್ಲಿಯೂ ಪ್ರಾರ್ಥನೆಯಂಥ ಅತ್ಯುಚ್ಚ ಆಧ್ಯಾತ್ಮಿಕ ವಿಷಯವನ್ನು ಎಂದೂ ಹೇರಲಾರೆ. ಒಳಗಿನಿಂದಲೆ ಆ ಬೇಡಿಕೆ ಬರತಕ್ಕದ್ದು. ನನ್ನನ್ನು ಸಂತೋಷಿಸುವ ಪ್ರಶ್ನೆಯೇ ಇದರಲ್ಲಿ ಇಲ್ಲ. ನನ್ನ ಪ್ರಾರ್ಥನಾ ಸಭೆಗಳು ನಿಶ್ಚಯವಾಗಿ ಲೋಕಪ್ರಿಯವಾಗಿದ್ದು ಲಕ್ಷಾವಧಿ ಜನರು ಅದರಿಂದ ಲಾಭ ಪಡೆದರೆಂದು ತೋರುತ್ತದೆ. ಆದರೆ ಸದ್ಯದಂಥ ಪ್ರಕ್ಷುಬ್ಧ ಸಮಯದಲ್ಲಿ ದುಃಖಿಗಳ ಕೋಪದ ಅರ್ಥವನ್ನು ನಾನು ತಿಳಿಯಬಲ್ಲೆ. ಆದರೆ ತನಗೆ ಆಕ್ಷೇಪಕರವೆಂದು ತೋರುವ ಪ್ರಾರ್ಥನೆಯ ಅಂಶವನ್ನು ಬಿಟ್ಟುಗೊಡಬೇಕೆಂದು ಯಾವನೂ ಅಪೇಕ್ಷಿಸಕೂಡದು. ಅದನ್ನು ಇದ್ದಕ್ಕಿದ್ದಂತೆ ಸಂತೋಷದಿಂದ ಸ್ವೀಕರಿಸಬೇಕು ಇಲ್ಲವೆ ನಿರಾಕರಿಸಬೇಕು ನನ್ನ ಅಭಿಪ್ರಾಯದಂತೆ ಕುರಾಣದಲ್ಲಿಯ ಪಠನವು ಪ್ರಾರ್ಥನೆಯಲ್ಲಿಯ ಮಹತ್ವದ ಭಾಗವಾಗಿದೆ.

ಕ್ರೋಧಾಗ್ನಿಯನ್ನು ನಿಗ್ರಹಿಸಿರಿ

ಇಂದಿನ ಮಹತ್ವದ ಸಮಸ್ಯೆಯತ್ತ ಹೊರಳುತ್ತ ಗಾಂಧೀಜಿ ಇಂತು ಹೇಳಿದರು. ನಿಮ್ಮ ರೊಚ್ಚು ಮತ್ತು ತತ್ಪರಿಣಾಮವಾಗಿ ಅಸಹನೆಯ ಅರ್ಥವನ್ನು ಗ್ರಹಿಸಲು ನಾನು ಸಿದ್ಧನಿರುವೆ. ಆದರೆ ಸ್ವಾತಂತ್ರ್ಯಕ್ಕೆ ನೀವು ಅರ್ಹರಾಗಿದ್ದರೆ ಆ ಕ್ರೋಧಾಗ್ನಿಯನ್ನು ನಿಗ್ರಹಿಸತಕ್ಕದ್ದು. ಮತ್ತು ಸರಕಾರದವರು ಅತ್ಯುತ್ತಮವಾದುದನ್ನೇ ಮಾಡುವರೆಂದು ವಿಶ್ವಾಸವಿಡಬೇಕು. ನನಗೆ ಸರಿಯೆನಿಸುವ ಅಹಿಂಸಾ ಮಾರ್ಗವನ್ನು ಬೋಧಿಸಬೇಕೆಂದು ನನಗೆಷ್ಟೇ ಎನಿಸಿದ್ದರೂ ಆ ಬಗೆಯ ಅಹಿಂಸಾಮಾರ್ಗವನ್ನೇನು ನಾನು ನಿಮಗೆ ಹೇಳಿಲ್ಲ. ಆದರೆ ಇಂದು ನನ್ನ ಪರಿಸ್ಥಿತಿಯೇನಿದೆಂಬುದು ನನಗೆ ಗೊತ್ತಿದೆ. ಎಲ್ಲ ಪ್ರಜಾಪ್ರಭುತ್ವ ರಾಷ್ಟ್ರಗಳು ಅನುಸರಿಸತಕ್ಕ ಮಾರ್ಗವನ್ನೇ ನೀವೂ ಅನುಸರಿಸಬೇಕೆಂದು ನಾನು ಸೂಚಿಸಿರುವೆ. ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರಭುತ್ವಕ್ಕಾಗಿಯೆ ಪ್ರಜಾಪ್ರಭುತ್ವದಿಂದಲೆ ಆಡಳಿತ ಸಾಗುತ್ತದೆ. ಅಲ್ಲಿ ವೈಯಕ್ತಿಕ ಅಭಿಪ್ರಾಯಕ್ಕಿಂತ ಸಾಮಾಜಿಕ ಅಭಿಪ್ರಾಯಕ್ಕೆ ಹೆಚ್ಚು ಮನ್ನಣೆಯುಂಟು. ಈ ಸನಾತನವೆಂದರೆ ಸರಕಾರ. ಆ ಸರಕಾರದ ಆಡಳಿತ ಮೇಲೆ ಹೇಳಿದಂತೆ ಪ್ರಜಾಪ್ರಭುತ್ವಕ್ಕಾಗಿಯೆ ಪ್ರಜಾಪ್ರಭುತ್ವದಿಂದಲೆ ನಡೆಯುತ್ತದೆ. ಪ್ರತಿಯೊಬ್ಬ ವ್ಯಕ್ತಿ ತನ್ನ ಮನಸ್ಸಿನಂತೆ ನಡೆಯಹತ್ತಿದರೆ ಸರಕಾರದ ಅಸ್ತಿತ್ವವೆ ಅಳಿಯುವದು. ಅರಾಜಕತೆಯೂ ನೆಲೆದಾಡಹತ್ತುವದು. ಸಾಮಾಜಿಕ ಕಾಯಿದೆ ಇದ್ದೂ ಸರಕಾರವೆ ಇಲ್ಲದಂತಾಗುವದು. ಅದರಲ್ಲಿ ಸ್ವಾತಂತ್ರ್ಯದ ವಿನಾಶವಿದೆ. ಅದರಿಂದ ನೀವು ನಿಮ್ಮ ಕ್ರೋಧವನ್ನು ನಿಗ್ರಹಿಸ[illegible] ಮತ್ತು ಸರಕಾರವು ನ್ಯಾಯವ[illegible]ಕು. ನನ್ನ ಅಭಿಪ್ರಾಯದಂತೆ ಸರಕಾರವು ತನ್ನ ಕರ್ತವ್ಯ ಮಾಡಲು ಮುಕ್ತವ[illegible] ಪ್ರತಿಯೊಬ್ಬ ಹಿಂದೂ ಮತ್ತು ಶೀಖ [illegible] ಒಳ್ಳೆ ಮರ್ಯಾದೆ ಮತ್ತು ಗೌರವದಿಂದ ತನ್ನ ಮನೆಗೆ ಮರಳುವನು. ಪಾಕಿಸ್ತಾನದಲ್ಲಿ ನಿಮಗೆ ಬಹಳ ಹಾನಿಯಾದುದುಂಟು. ಅನೇಕ ಕುಟುಂಬಗಳು ನಾಶವಾಗಿವೆ, ಪ್ರಾಣಗಳು ಹಾರಿಹೋಗಿವೆ, ಹೆಣ್ಣು ಹುಡುಗಿಯರ ಅಪಹಾರವಾಗಿದೆ. ಒತ್ತಾಯದ ಮತಾಂತರಗಳೂ ನಡೆದಿವೆ ಎಂಬುವನ್ನು ಒಪ್ಪಲು ನಾನು ಸ್ವತಂತ್ರನಿರುವೆನು. ನೀವು ಆತ್ಮಸಂಯಮಿಗಳಾಗಿ ವಿವೇಕವನ್ನು ಕಳೆದುಕೊಳ್ಳಲು ನಿಮ್ಮ ರೊಚ್ಚಿಗೆ ಅವಕಾಶ ಕೊಡದಿದ್ದರೆ ಹೆಣ್ಣುಮಕ್ಕಳು ಮರಳಿ ಬರಬಹುದು. ಒತ್ತಾಯದ ಮತಾಂತರಗಳೆಲ್ಲ ನಿರರ್ಥಕವಾಗುವವು. ಮತ್ತು ಅವರ ಆಸ್ತಿ ಪಾಸ್ತಿ ಮರಳಿ ದೊರಕುವದು. ಆದರೆ ನ್ಯಾಯವಾದ ಮಾರ್ಗದಲ್ಲಿ ಅಡ್ಡಿಯನ್ನುಂಟುಮಾಡಲು ಮತ್ತು ನಿಮ್ಮ ಪಕ್ಷವನ್ನು ನೀವೇ ಕೆಡಿಸಿಕೊಳ್ಳಲು ಪ್ರಯತ್ನಿಸಿದ್ದಾದರೆ ಇದೆಲ್ಲ ಸಾಧ್ಯವಾಗಲಾರದು. ಮುಸಲ್ಮಾನ ಬಂಧು ಭಗಿನಿಯರನ್ನು ಹಿಂದುಸ್ತಾನದಿಂದ ಹೊರಗೆ ಹಾಕಬೇಕೆಂದು ನೀವು ಬಯಸಿದ್ದಾದರೆ ಇದೆಲ್ಲವೂ ಸಾಧ್ಯವಾಗದು. ಅಂಥ ಯಾವುದೊಂದು ಸೂಚನೆ ಅತ್ಯಂತ ಅಮಾನುಷವೆಂದು ನಾನು ಭಾವಿಸುವೆ, ನೀವೇ ಎಲ್ಲವನ್ನೂ ಪಡೆಯಲಾರಿರಿ. ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾಕರಾದ ಹಿಂದು ಮತ್ತು ಶೀಖರನ್ನು ಬಹಳ ಕೆಟ್ಟರೀತಿಯಿಂದ ನಡೆಸಿಕೊಂಡದ್ದು ನಿಜವಾಗಿದ್ದರೂ ಪೂರ್ವ ಪಂಜಾಬದಲ್ಲಿಯ ಅಲ್ಪಸಂಖ್ಯಾಕರಾದ ಮುಸಲ್ಮಾನರನ್ನು ಅಷ್ಟೇ ಕೆಟ್ಟರೀತಿಯಿಂದ ನಡೆಯಿಸಿಕೊಳ್ಳಲಾಯಿತೆಂಬುದು ಅಷ್ಟೇ ನಿಜವಾಗಿರುವದು. ಅಪರಾಧವನ್ನೇನು ಬಂಗಾರದ ತಕ್ಕಡಿಯಲ್ಲಿ ತೂಗಲಾಗದು. ಯಾವದೊಂದು ಪಕ್ಷದ ಅಪರಾಧವನ್ನು ತೂಗಿನೋಡಲು ನನ್ನ ಹತ್ತರ ಆಧಾರವೇನೂ ಇಲ್ಲ. ಎರಡೂ ಪಕ್ಷಗಳು ಸಾಕಷ್ಟು ಅಪರಾಧಮಾಡಿವೆಂಬುದು ನಿಶ್ಚಿತ. ಆಯಾ ಸರಕಾರದವರು ತಮ್ಮ ತಮ್ಮ ಪಕ್ಷಗಳ ಅಪರಾಧವನ್ನು ಬಿಚ್ಚುಮನಸ್ಸಿನಿಂದ ಒಪ್ಪಿಕೊಂಡು ಒಂದು ಬಗೆಯ ಒಡಂಬಡಿಕೆಗೆ ಬರತಕ್ಕದ್ದು ಒಂದು ವೇಳೆ ಒಡಂಬಡಿಕೆಯಾಗದಿದ್ದರೆ ಪಂಚಾಯತಿಗೆ ಒಪ್ಪಿಸತಕ್ಕದ್ದು. ಎಲ್ಲೆಡೆಯಲ್ಲಿಯೂ ಪ್ರಚಾರದಲ್ಲಿ ಇದ ಮಾರ್ಗವಿದು. ಎರಡನೆ ಮತ್ತು ಅಸಂಸ್ಕೃತ ಮಾರ್ಗವೆಂದರೆ ಯುದ್ಧಮಾರ್ಗ. ಆ ವಿಚಾರವು ನನಗೆ ಅತ್ಯಂತ ತ್ವೇಷಕರವಾಗಿದೆ ಆದರೆ ಒಡಂಬಡಿಕೆ ಇಲ್ಲವೆ ಪಂಚಾಯತ ಮಾರ್ಗ ಸಾಧ್ಯವಾಗದಿದ್ದರೆ ಇದರ ಹೊರತು ಬೇರೆ ಮಾರ್ಗ ಉಳಿಯದು. ಆದರೆ ಮಧ್ಯಂತರ ಅವಧಿಯಲ್ಲಿ ವಿವೇಕೋದಯವಾಗಿ ತಾವಾಗಿಯೇ ಪಾಕಿಸ್ತಾನಕ್ಕೆ ಹೊರಟು ಹೋಗದಿದವರು ಸಂಪೂರ್ಣ ಸಂರಕ್ಷಣೆಯ ಭಾವನೆಯಿಂದ ಮರಳಿ ತಮ್ಮ ಮನೆಗಳಿಗೆ ಬರಬೇಕೆಂದು ಕೇಳಿಕೊಳ್ಳಲಾಗುವದೆಂದೂ ನಾನು ಆಶಿಸುತ್ತೇನೆ. ಸೈನ್ಯದ ಸಹಾಯದಿಂದ ಇದು ಸಾಧ್ಯವಾಗಲಾರದು. ಸಂಬಂಧಿಸಿದ ಆಯಾ ಜನರಲ್ಲಿಯೆ ವಿವೇಕೋದಯವಾದರೆ ಇದು ಸಾಧ್ಯವಾಗಬಲ್ಲದು. ನಾನು ನನ್ನ ಕೊನೆಯ ನಿರ್ಧಾರವನ್ನು ಮಾಡಿರುವೆನು. ಭ್ರಾತೃಹತ್ಯೆಯ ಮೂಲಕ ಹಿಂದುಸ್ತಾನದ ನಾಶವನ್ನು ನೋಡುವ ಇಚ್ಛೆ ನನಗಿಲ್ಲ. ನಮ್ಮ ಈ ಪವಿತ್ರ ಮಾತೃಭೂಮಿಗೆ ಅಂಥ ದುರವಸ್ಥೆ ಪ್ರಾಪ್ತವಾಗುವ ಮೊದಲೆ ಪರಮಾತ್ಮನು ನನ್ನ ಕಣ್ಣು ಮುಚ್ಚಬೇಕೆಂದು ನಾನು ಅವನನ್ನು ಪ್ರಾರ್ಥಿಸಿಕೊಳ್ಳುವೆ. ಪ್ರಾರ್ಥನೆಯಲ್ಲಿ ಸೇರಬೇಕೆಂದು ನಾನು ಸಭಿಕರನ್ನೆಲ್ಲ ಬಿನ್ನವಿಸಿಕೊಳ್ಳುತ್ತೇನೆ.

ಕೆಲಸಗಾರರ ಪಾತ್ರ

ಹಿಂದು ಮತ್ತು ಮುಸಲ್ಮಾನ ಕೆಲಸಗಾರರು ಕೂಡಿಕೊಂಡೇ ಕೆಲಸಮಾಡುತ್ತಿರುವದಕ್ಕಾಗಿ ಗಾಂಧೀಜಿಯವರು ಕೂಲಿಕಾರರ ವರ್ಗವನ್ನು ಕೊನೆಯಲ್ಲಿ ಅಭಿನಂದಿಸಿದರು. ಕೆಲಸಗಾರರು ಸಂಪೂರ್ಣ ಸಹಕಾರದಿಂದ ಕೆಲಸ ಸಾಗಿಸಿದ್ದಾದರೆ ಅವರೊಂದು ಒಳ್ಳೆ ಉದಾಹರಣೆಯನ್ನು ಹಾಕಿ ಕೊಟ್ಟಂತಾಗುವದು. ಕೂಲಿಕಾರ ವರ್ಗದಲ್ಲಿ ಜಾತೀಯತೆಯಿರಕೂಡದು. ನಿಮ್ಮಲ್ಲಿ ಶಕ್ತಿಯಿದೆ; ಅದನ್ನ ಜಾಣತನದಿಂದ ಮತ್ತು ವಿಧಾಯಕ ರೀತಿಯಿಂದ ಉಪಯೋಗಿಸಿದ್ದಾದರೆ ನೀವೇ ನಿಜವಾದ ಅರಸರಾಗಿ ಒಡೆಯರು ಅವಶ್ಯಕ ಪ್ರಸಂಗದಲ್ಲಿ ನಿಮ್ಮ ವಿಶ್ವಸ್ತರು ಮತ್ತು ಗೆಳೆಯರಾಗಿ ಪರಿಣಮಿಸುವರೆಂದು ನಾನು ಹೇಳಿಲ್ಲವೆ? ಕೆಲಸಗಾರರು ಭೂಗರ್ಭದಿಂದ ಹೊರದೆಗೆದ ಬಂಗಾರ ಮತ್ತು ಬೆಳ್ಳಿ ಸ್ವರೂಪದಲ್ಲಿರುವ ಬಂಡವಲಿಗಿಂತ ಪರಿಶ್ರಮವೆ ನಿಜವಾದ ಬಂಡವಲು ಎಂಬ ಸಂಗತಿ ನಿಮಗೆ ಗೊತ್ತಾದರೆ ಈ ಸಂತೋಷದ ಪರಿಸ್ಥಿತಿ ಪ್ರಾಪ್ತವಾಗುವದು.

ಬಿರ್ಲಾಭವನ
ಹೊಸದಿಲ್ಲಿ ೧೮—೯—೪೭

ಪ್ರಾರ್ಥನೆ ಅವಿಭಾಜ್ಯವಾಗಿದೆ

ದರಿಯಾಗಂಜದಿಂದ ತಿರುಗಿಬಂದಬಳಿಕ ಗಾಂಧೀಜಿ ಬಿರ್ಲಾಭವನದ ಆವಾರದಲ್ಲಿ ಕೂಡಿದ ಸಣ್ಣದೊಂದು ಪ್ರಾರ್ಥನಾ ಸಭೆಯಲ್ಲಿ ಭಾಷಣ ಮಾಡಿದರು. 'ಕುರಾಣದಲ್ಲಿಯ ಪಠನಕ್ಕೆ ಸಭಿಕರಲ್ಲಿ ಯಾವನೊಬ್ಬನು ಆಕ್ಷೇಪ ತೆಗೆದುಕೊಂಡದ್ದಾದರೆ ಸಾರ್ವಜನಿಕವಾಗಿ ಪ್ರಾರ್ಥನೆಯನ್ನೇ ನಾನು ಮಾಡುವದಿಲ್ಲ. ಯಾರೊಬ್ಬರ ಭಾವನೆಯನ್ನಾದರೂ ನೋಯಿಸುವದು ಪ್ರಾರ್ಥನೆಯ ಉದ್ದೇಶವಾಗಿರುವದಿಲ್ಲ ಅದೇ ಕಾಲಕ್ಕೆ ಒಳ್ಳೆ ದಕ್ಷತೆಯಿಂದ ವಿಚಾರ ಮಾಡಿ ಅರಿಸಿದ್ದ ನಂತರ ಪ್ರಾರ್ಥನೆಯಲ್ಲಿಯ ಯಾವ ಅಂಶವನ್ನೂ ನಾನು ಬಿಟ್ಟುಗೊಡಲಾರೆ. ಪ್ರಾರ್ಥನೆಯನ್ನು ಮಾಡಬೇಕೊ ಮಾಡಬಾರದೊ ಎಂಬದನ್ನು ಕೈಮೇಲೆತ್ತಿ ನನಗೆ ತಿಳಿಸಿರಿ ಯಾರೊಬ್ಬರೂ ವಿರೋಧಕವಾಗಿ ಕೈಯೆತ್ತಲಿಲ್ಲ. ಆದುದರಿಂದ ವಾಡಿಕೆಯಂತೆ ಪ್ರಾರ್ಥನೆ ಜರುಗಿತು. ಆದರೆ ಬದಲಾವಣೆಯೆಂದರೆ ಕೊನೆಯಲ್ಲಿ ಬರತಕ್ಕ ಕುರಾಣ ಪಠನವು ಪ್ರಾರಂಭದಲ್ಲಿಯೆ ನಡೆಯಿತು.

ಗಜೇಂದ್ರ ಮೋಕ್ಷ

ಪ್ರಾರ್ಥನಾ ನಂತರ ಗಾಂಧೀಜಿ ಸಭಿಕರನ್ನುದ್ದೇಶಿಸಿ ಭಾಷಣ ಮಾಡಿದರು. 'ಅನ್ನವು ಶರೀರಕ್ಕೆ ಅವಶ್ಯವಾಗಿರುವಂತೆ ಪ್ರಾರ್ಥನೆಯು ಆತ್ಮಕ್ಕೆ ಒಳ್ಳೆ ಆಹಾರವಾಗಿದೆ. ಅದರ ಮಹತ್ವವನ್ನು ನೀವೆಲ್ಲ ತಿಳಿದುಕೊಂಡುದನ್ನು ನೋಡಿ ನನಗೆ ಸಂತೋಷವಾಗಿದೆ.' ಅನಂತರ ಅವರು ಗಜೇಂದ್ರ ಮೋಕ್ಷದ ಭಜನೆಯನ್ನು ವಿಮರ್ಶಿಸುತ್ತ, ನಮ್ಮ ಧ್ಯೇಯವು ಹಿಂದುಸ್ತಾನವನ್ನು 'ಬರ್ಬರರ' ಕಪಿಮುಷ್ಟಿಯೊಳಗಿಂದ ಮುಕ್ತಮಾಡಬೇಕೆಂಬುದಾಗಿದೆ. ಪರಮಾತ್ಮನ ಅನುಗ್ರಹದಿಂದಲೇ ಇದು ಸಾಧ್ಯವಾಗಬಲ್ಲುದೆಂದು ಮುಂತಾಗಿ ಹೇಳಿದರು.

ದಿಲ್ಲಿಯ ನಂತರ ಪಂಜಾಬ

ದರ್ಯಾಗಂಜದಲ್ಲಿ ಮುಸಲ್ಮಾನ ಮಿತ್ರರನ್ನು ಭೆಟ್ಟಿಯಾದ ಸಂಗತಿಯನ್ನು ಗಾಂಧೀಜಿಯವರು ಹೇಳಿದರು. ಹಿಂದುಸ್ತಾನ ಮತ್ತು ಪಾಕಿಸ್ತಾನದಲ್ಲಿಯ ಪ್ರತಿಯೊಬ್ಬ ಹಿಂದು, ಶೀಖ ಮತ್ತು ಮುಸಲ್ಮಾನನು ಮರಳಿ ತನ್ನ ಮನೆಯಲ್ಲಿ ವಾಸಿಸುವವರೆಗೆ ನಾನು ಶಾಂತಿಯಿಂದ ಬಾಳಲಾರೆನು. ದಿಲ್ಲಿಯಲ್ಲಿ ಇಲ್ಲವೆ ಹಿಂದುಸ್ತಾನದಲ್ಲಿ ಯಾವನೊಬ್ಬ ಮುಸಲ್ಮಾನನು ಅಥವಾ ಪಾಕಿಸ್ತಾನದಲ್ಲಿ ಯಾವನೊಬ್ಬ ಶೀಖನು ಉಳಿಯಲು ಅಸಮರ್ಥನಾದರೆ ಹಿಂದುಸ್ತಾನದಲ್ಲಿಯ ಅತಿದೊಡ್ಡದಾದ ಜುಮ್ಮಾಮಸೀದೆ ಅಥವಾ ನಾನಕಾನ ಸಾಹೇಬ ಹಾಗು ಪಂಜಾ ಸಾಹೇಬಗಳ ಗತಿಯೇನು? ಈ ಪವಿತ್ರ ಸ್ಥಳಗಳನ್ನು ಬೇರೆ ಕೆಲಸಕ್ಕೆ ಉಪಯೋಗಿಸಲಾಗುವದೆ? ಎಂದಿಗೂ ಹಾಗಾಗಲಾರದು. ಸ್ಥಳಾಭಾವದ ಮೂಲಕ ಉಳಿದ ಬಲಿಷ್ಠ ಉದಾಹರಣೆಗಳನ್ನು ಇಲ್ಲಿ ವಿವರಿಸಬಯಸುವದಿಲ್ಲ.

ಪಂಜಾಬದಲ್ಲಿ ಮುಸಲ್ಮಾನರು ಮಾಡಿದರೆಂದು ಹೇಳಲಾಗುತ್ತಿರುವ ಅಪರಾಧದ ಪರಿಮಾರ್ಜನೆಯನ್ನು ಅವರಿಂದ ಮಾಡಿಸಲು ನಾನು ಪಂಜಾಬಕ್ಕೆ ಹೋಗುತ್ತಿರುವೆ. ಆದರೆ ದಿಲ್ಲಿಯಲ್ಲಿಯ ಮುಸಲ್ಮಾನರಿಗೆ ನ್ಯಾಯವನ್ನು ನಾನು ದೊರಕಿಸುವವರೆಗೆ ಪಂಜಾಬದಲ್ಲಿಯ ನನ್ನ ಕಾರ್ಯಕ್ಕೆ ಯಶಸು ಸಿಕ್ಕುವದೆಂದು ನಾನು ಆಶಿಸಲಾರೆ. ಅವರು ಅನೇಕ ತಲೆಮಾರುಗಳಿಂದ ದಿಲ್ಲಿಯಲ್ಲಿರುವರು. ದಿಲ್ಲಿಯಲ್ಲಿಯ ಹಿಂದು ಮತ್ತು ಮುಸಲ್ಮಾನರು ಮತ್ತೊಮ್ಮೆ ಬಾಂಧವರಂತೆ ಇರಹತ್ತಿದ್ದಾದರೆ ನಾನು ಪಂಜಾಬಕ್ಕೆ ಹೊರಡುವೆನು. ಮತ್ತು ಪಾಕಿಸ್ತಾನದಲ್ಲಿ 'ಮಾಡುವೆ ಇಲ್ಲವೆ ಮಡಿಯುವೆ.' ಹಿಂದುಸ್ತಾನದಲ್ಲಿಯವರು ಅತ್ಯಂತ ಪರಿಶುದ್ಧರಾಗುಳಿಯಬೇಕಾದುದೇ ಇದಕ್ಕೆ ಮುಖ್ಯ ಸಹಾಯಕ. ಹಿಂದು ಧರ್ಮ ಮಹಾಸಾಗರದಂತಿದೆ. ಮಹಾಸಾಗರವೆಂದೂ ಕಲುಷಿತವಾಗಲಾರದು. ಹಿಂದೀ ಒಕ್ಕೂಟಕ್ಕೂ ಇದೇ ಮಾತು ಅನ್ವಯಿಸುವದು. ತಮ್ಮ ಕಷ್ಟನಷ್ಟಗಳಿಗಾಗಿ ಹಿಂದು ಮತ್ತು ಶೀಖರು ಅಸಂತೋಷವನ್ನು ತಾಳುವದು ಸ್ವಾಭಾವಿಕ, ಆದರೆ ತಮಗಾಗಿ ನ್ಯಾಯವನ್ನು ದೊರಕಿಸಿಕೊಡುವ ಭಾರವನ್ನು ಅವರು ತಮ್ಮ ಸರಕಾರಕ್ಕೆ ಒಪ್ಪಿಸಿಬಿಡಬೇಕು.

ಸೈನಿಕರ ಮತ್ತು ಪೋಲೀಸರ ಕರ್ತವ್ಯ

ಸೈನಿಕರು ಮತ್ತು ಪೋಲೀಸರು ಪಕ್ಷವನ್ನು ಹಿಡಿಯುತ್ತಿರುವರೆಂದು ಆರೋಪಿಸಲಾಗುತ್ತದೆ. ಇದು ನಿಜವಿದ್ದರೆ ವಿಷಾದಕರವಾದುದು. ಕಾಯದೆ ಮತ್ತು ಸುವ್ಯವಸ್ಥೆಯ ಆಧಾರಸ್ತಂಭರೆ ಪಕ್ಷವಹಿಸಿ ಅಪರಾಧಗಳಲ್ಲಿ ಭಾಗವಹಿಸಿದ್ದಾದರೆ ಕಾಯದೆ ಮತ್ತು ಸುವ್ಯವಸ್ಥೆಯೆಂತು ಸ್ಥಾಪಿತವಾಗಬಲ್ಲದು.? ಸೈನಿಕರು ಮತ್ತು ಪೋಲೀಸರು ಪೂರ್ವಗ್ರಹದೂಷಿತರಾಗಬಾರದು ಮತ್ತು ಲಂಚಗುಳಿಗಳಾಗಬಾರದೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ. ಅವರು ತಮ್ಮ ಜಾತಿ ಧರ್ಮವನ್ನು ನೋಡದೆ ಜನತೆಯ ನಿಷ್ಠ ಸೇವಕರಾಗಿರತಕ್ಕದ್ದು. (೯ನೇ ಪುಟಕ್ಕೆ)

ಗಾಂಧೀಜಿಯ ಪ್ರಾರ್ಥನೋತ್ತರ ಭಾಷಣ

(೭ನೇ ಪುಟದಿಂದ)

ಹೊಸದಿಲ್ಲಿ ೧೯-೯-೪೭

ಅತಿಶಯೋಕ್ತಿ ಬೇಡ

ಗಾಂಧೀಜಿಯು ಸಾಯಂಕಾಲ ೫ ಗಂಟೆಗೆ ಹೊರಗೆ ಹೊರಟು ಪ್ರಚಂಡ ಹಿಂದುಗಳ ಸಭೆಯೊಂದರಲ್ಲಿ ಒಬ್ಬ ವಕ್ತಾರನು ಹೇಳಿದಂತೆ ಮುಸಲ್ಮಾನರಿಂದ ಎಲ್ಲ ಪಕ್ಕಗಳಲ್ಲಿ ಸುತ್ತುವರಿಯಲ್ಪಟ್ಟ ಕಚ್ಚಾಕಾರಾಚಂದದಲ್ಲಿಯ ಹಿಂದೂ ನಿವೇಶನವನ್ನು ಸಂದರ್ಶಿಸಿದರು. ಅವನು ಅತಿಶಯೋಕ್ತಿಪೂರ್ಣವಾದ ಭಾಷೆಯಲ್ಲಿ ಹಿಂದುಗಳ ಕಷ್ಟನಿಷ್ಠುರಗಳನ್ನು ವರ್ಣಿಸಿ ಹಿಂದುಗಳ ವಿರುದ್ಧ ಬಹಳ ಚಟುವಟಿಕೆಗಳನ್ನು ನಡೆಸಿದ ಇಲ್ಲಿ ಹೆಚ್ಚಾಗಿ ಇರುವ ಮುಸ್ಲಿಂ ಲೀಗಿನ ಅನುಯಾಯಿಗಳನ್ನೆಲ್ಲ ಇಲ್ಲಿಂದ ಹೊರಗೆ ಹಾಕಬೇಕೆಂದು ಅವನು ಕೇಳಿಕೊಂಡನು. ಪಾಕಿಸ್ತಾನದಲ್ಲಿ ಮುಸ್ಲೀಮರು ಹೇಗೆ ಮಾಡಹತ್ತಿರುವರೆಂದು ವರದಿಯಾಗಿದೆಯೋ ಅದೇ ರೀತಿಯಲ್ಲಿ ಹಿಂದುಗಳಾದರೂ ಮಾಡತಕ್ಕದ್ದೆಂದು ಅವನು ಪ್ರತಿಪಾದಿಸಿದನು.

ಶೂರ ಮತ್ತು ನಿರ್ಭೀತರರಾಗಿರಿ

ಗಾಂಧೀಜಿ ಇದಕ್ಕೆ ಉತ್ತರರೂಪವಾಗಿ ಹೀಗೆ ಹೇಳಿದರು. ಪಾಕಿಸ್ತಾನವು ಮುಸಲ್ಮಾನೇತರರನ್ನೆಲ್ಲ ಹೊರಗಟ್ಟುತ್ತಿರುವಂತೆ ಹಿಂದುಸ್ತಾನದವರಾದರೂ ಮುಸಲ್ಮಾನರನ್ನೆಲ್ಲ ಪಾಕಿಸ್ತಾನಕ್ಕೆ ಅಟ್ಟಿಬಿಡಬೇಕೆಂಬ ಪ್ರತಿಪಾದನೆಗೆ ನಾನು ಒಪ್ಪಲಾರೆ.

ಎರಡು ಅನ್ಯಾಯಗಳು ಒಂದು ನ್ಯಾಯವನ್ನು ಪಡೆಯಲಾರವು. ಅದ್ದರಿಂದ ಸಭಿಕರು ನನ್ನ ಸಲಹೆಯನ್ನು ಮನ್ನಿಸಿ ಶೂರ ಧೀರರಂತೆ ವರ್ತಿಸಿ ಪ್ರಚಂಡ ಮುಸಲ್ಮಾನ ಜನಸಂಖ್ಯೆಯ ಮಧ್ಯದಲ್ಲಿಯೆ ಇರುವದರಲ್ಲಿ ಅಭಿಮಾನವನ್ನು ತಾಳಬೇಕು. ಅನಂತರ ಗಾಂಧೀಜಿ ಪತೌಡಿ ಭವನದಲ್ಲಿಯ ಅನಾಥಾಲಯಕ್ಕೆ ಭೆಟ್ಟಿಕೊಟ್ಟರು. ಭೀತಿಯಿಂದ ಹೊರಗೆ ಕಳಿಸಿದ ಅನಾಥ ಮಕ್ಕಳನ್ನೆಲ್ಲ ಮರಳಿ ಆಶ್ರಮಕ್ಕೆ ಕರೆದುಕೊಂಡು ಬರಲು ಅಲ್ಲಿನ ಹೊಣೆಗಾರ ಜನರಿಗೆ ಕೇಳಿಕೊಂಡರು. ನೆರೆಯ ಮುಸಲ್ಮಾನ ಮನೆಗಳಲ್ಲಿಂದ ಗುಂಡಿನ ಮಳೆ ಸುರಿಯಿತೆಂದೂ ಅದರಿಂದ ಒಂದು ಮಗು ಸತ್ತಿತೆಂದೂ ಮತ್ತೊಂದಕ್ಕೆ ಗಾಯವಾಯಿತೆಂದೂ ಗಾಂಧೀಜಿಗೆ ಹೇಳಲಾಯಿತು. ಸಪ್ಟೆಂಬರ ೭ ರ ಸುಮಾರಿಗೆ ನಡೆದಸಂಗತಿಯಿದು. ಅವರ ಗೂಡ ಇದ್ದ ಮೌಲಾನಾ ಅಹಮ್ಮದ ಸಯ್ಯದ ಮತ್ತು ಉಳಿದ ಮುಸಲ್ಮಾನ ಮಿತ್ರರು ಒಳಗಿರುವವರಿಗೆ ಯಾವದೇ ಅಪಾಯ ಸಂಭವಿಸದಂತೆ ನೆರೆಯ ಮುಸಲ್ಮಾನರು ನೋಡಿಕೊಳ್ಳುವರೆಂದು ಅಲ್ಲ ಹೇಳಿದರು. ಮುಸಲ್ಮಾನರ ಮಧ್ಯದಲ್ಲಿ ಒಬ್ಬರೊಬ್ಬರಾಗಿ ವಾಸಿಸುತ್ತಿರುವ ಹಿಂದುಗಳಾದ ಶ್ರೀ ಭಾರ್ಗವರ ಮನೆಯ ಹತ್ತರದ ಸ್ಥಳವನ್ನು ಗಾಂಧಿಜಿ ಅನಂತರ ಸಂದರ್ಶಿಸಿದರು. ಆ ಸ್ಥಳ ಮುಸಲ್ಮಾನರಿಂದ ಕಿಕ್ಕಿರಿದಿತ್ತು. ೧೨ವರುಷದವರಿರುವಾಗ ತಾವು ಕಂಡ ಕನಸಿನಂತೆ ಹಿಂದುಸ್ತಾನದಲ್ಲಿಯ ಹಿಂದು ಮತ್ತು ಮುಸಲ್ಮಾನರು ಬಾಂಧವರಂತೆ ಮತ್ತು ಮಿತ್ರರಂತೆ ಕೂಡಿಯೆ ಇರಬಲ್ಲರೆಂಬ ಆಸೆಯನ್ನು ಗಾಂಧೀಜಿ ವ್ಯಕ್ತಮಾಡಿದರು. ಬಿರ್ಲಾಭವನದಲ್ಲಿ ಕೂಡಿದ ಸಣ್ಣದೊಂದು ಪ್ರಾರ್ಥನಾ ಸಭೆಯಲ್ಲಿ ಗಾಂಧೀಜಿ ಈ ಸಂಗತಿಗಳನ್ನೆಲ್ಲ ನಿವೇದಿಸಿದರು. ಆಗ ಪ್ರಾರ್ಥನೆಯಲ್ಲಿ ಭಾಗವಹಿಸಲು ಸಭಿಕರನ್ನು ಕೇಳಿಕೊಳ್ಳುತ್ತ ಗಾಂಧೀಜಿಯವರು 'ಪರಮಾತ್ಮನು ನನ್ನೀಕನಸನ್ನು ನನಸಾಗಿಸುವನು ಇಲ್ಲವೆ ನನ್ನ ಕಣ್ಣು ಮುಚ್ಚಿ ಹಿಂದುಸ್ತಾನದ ಒಂದು ಭಾಗದಲ್ಲಿ ಮುಸಲ್ಮಾನರು ಮತ್ತು ಮತ್ತೊಂದು ಭಾಗದಲ್ಲಿ ಹಿಂದುಗಳು ಇರುವಂಥ ಭಯಾನಕ ಗಂಡಾಂತರವನ್ನು ನೋಡುವದನ್ನು ತಪ್ಪಿಸುವನು' ಎಂದು ಹೇಳಿದರು.

ಬಿರ್ಲಾಭವನ, ಹೊಸದಿಲ್ಲಿ ತಾ ೨೦-೯-೪೭

ಪರಮಾತ್ಮನು ಭಯನಿವಾರಕನು

ಕುರಾಣಪಠನಕ್ಕೆ ಯಾರೂ ಆಕ್ಷೇಪಿಸದಿದ್ದುದರಿಂದ ಎಂದಿನಂತೆ ಇಂದು ಸಾಯಂಕಾಲ ಪ್ರಾರ್ಥನೆ ನಡೆಯಿತು.

ಪಠಿಸಿದ ಮಂತ್ರವೊಂದನ್ನು ಗಾಂಧೀಜಿ ವಿಮರ್ಶಿಸಿದರು. 'ತನ್ನಲ್ಲಿ ಶ್ರದ್ಧೆಯಿದ್ದವರ ಅಂಜಿಕೆಗಳನ್ನೆಲ್ಲ ಪರಮಾತ್ಮನು ನಿವಾರಿಸಿ ಬಿಡುವನೆಂದು' ದ್ರಷ್ಟಾರನು ಆ ಮಂತ್ರದಲ್ಲಿ ಹೇಳಿರುವನು.

ಇಂದು ಹಿಂದುಗಳು ಮತ್ತು ಶೀಖರು ದಿಲ್ಲಿಯಲ್ಲಿಯ ಮುಸಲ್ಮಾನರನ್ನು ಹೆದರಿಸುತ್ತಿರುವರು. ಸ್ವತಃ ಭಯಮುಕ್ತರಾಗ ಬಯಸುವವರು ಎರಡನೆಯವರಲ್ಲಿ ಭಯವನ್ನು ಹುಟ್ಟಿಸಬಾರದು.

ಬನ್ನೂ ಸರಹದ್ದ ಪ್ರಾಂತದಲ್ಲಿಯ ಒಂದು ನಗರವು. ಅಲ್ಲಿ ಮುಸಲ್ಮಾನನೊಬ್ಬನ ಮನೆಯಲ್ಲಿ ನಾನು ಇದ್ದೆ. ಬನ್ನೂದಿಂದ ಕೆಲವು ಜನರು ಬಂದು ಅಲ್ಲಿಂದ ನಮ್ಮನ್ನು ಬೇಗ ಬೇರೆ ಕಡೆಗೆ ಸ್ಥಳಾಂತರಿಸದಿದ್ದರೆ ನಾವೆಲ್ಲ ಕೊಲ್ಲಲ್ಪಡುವೆವು ಮತ್ತು ನಾಶಹೊಂದುವೆವು ಎಂದು ದೂರಿಕೊಂಡರು. ಮುಸಲ್ಮಾನ ಬಾಂಧವನು ಎಂದಿನಂತೆ ಒಳ್ಳೆ ಗಟ್ಟಿಗನಾಗಿದ್ದನು. ಆದರೆ ಅವನೊಬ್ಬನೆ ಅವರನ್ನು ಸಂರಕ್ಷಿಸಲು ಅಸಮರ್ಥನಾಗಿದ್ದನು. ಗಡಿಯಿಂದಲೂ ಉಳಿದ ಮುಸಲ್ಮಾನರು ದಿನವೂ ಬಂದು ಅವರಲ್ಲಿ ಅಂಜಿಕೆಯನ್ನು ತುಂಬುತಿದ್ದರು. ಅವರು ಸಕಾಲದಲ್ಲಿಯೆ ತಮ್ಮನ್ನು ರಕ್ಷಿಸಬೇಕೆಂದು ಕೇಳಿಕೊಂಡರು. ತಮ್ಮ ಕೈಯಲ್ಲಿ ಏನೂ ಅಧಿಕಾರವಿಲ್ಲೆಂದು ಗಾಂಧೀಜಿ ಹೇಳಿದರು. ಪಂಡಿತಜಿಯವರಿಗೆ ಮತ್ತು ಸರದಾರರರಿಗೆ ಈ ಸಂಗತಿಯನ್ನು ಮುಟ್ಟಿಸುವೆನೆಂದು ಅವರು ಹೇಳಿದರು. ತಮ್ಮ ಸ್ವಂತ ಸೈನ್ಯವೆ ತಮ್ಮ ಸಹಾಯಕ್ಕಾಗಿ ಬರಬೇಕೆಂದು ಆ ಮಿತ್ರರು ಕೇಳಿಕೊಂಡರು. ಆದರೆ ಈ ಮೊದಲು ಅನೇಕ ಸಲ ಹೇಳಿದಂತೆ ಗಾಂಧೀಜಿಯವರು ಅವರಿಗೆ ಹೇಳಿದರು. 'ಪರಮಾತ್ಮನ ಹೊರತು ನಿಮ್ಮನ್ನು ಬೇರೆ ಯಾರೂ ರಕ್ಷಿಸಲಾರರು. ಯಾವ ಮನುಷ್ಯನೂ ಮತ್ತೊಬ್ಬ ಮನುಷ್ಯನನ್ನು ರಕ್ಷಿಸಲಾರನು' ಮರುದಿನ ತಾನು ಜೀವಂತ ಉಳಿಯುವೆನೆಂದು, ಅಷ್ಟೇ ಏಕೆ ಒಂದು ನಿಮಿಷ ಕೂಡ ಹೆಚ್ಚಿಗೆ ಇರುವೆನೆಂದು ಯಾರೂ ನಿಶ್ಚಿತವಾಗಿ ಹೇಳಲಾರರು. ಪರಮಾತ್ಮನೊಬ್ಬನೆ ಇದ್ದನು, ಇರುವನು ಎಂದಿಗೂ ಇರುವನು. ಅದುದರಿಂದ ಅವನನ್ನೆ ಮೊರೆ ಹೋಗಿ ಅವನ ಮೇಲೆಯೆ ವಿಶ್ವಾಸವಿಡತಕ್ಕದ್ದು ನಿಮ್ಮೆಲ್ಲರ ಕರ್ತವ್ಯವಾಗಿದೆ. ಆದರೆ ಯಾವ ಸಂದರ್ಭದಲ್ಲಿಯೂ ಯಾರೊಬ್ಬರು ಒಂದು ಕೇಡಿಗೆ ಪ್ರತಿ ಕೇಡನ್ನು ಎಂದಿಗೂ ಮಾಡತಕ್ಕದ್ದಲ್ಲ.

ಅಲ್ಪಸಂಖ್ಯಾಕರ ರಕ್ಷಣೆ

ಗಾಂಧೀಜಿಯವರು ಮುಂದುವರಿಯುತ್ತ 'ಪಾಕಿಸ್ತಾನದಲ್ಲಿಯ ಹಿಂದುಗಳು ಮತ್ತು ಶೀಖರು ಭಯಭೀತರಾಗುವದೆಂದರೆ ಅಲ್ಲಿನ ಸರಕಾರಕ್ಕೆ ಅಪಕೀರ್ತಿಕರವಾಗಿದೆಯಲ್ಲದೆ ಅಲ್ಪಸಂಖ್ಯಾಕರಿಗೆ ಸಂರಕ್ಷಣೆಯನ್ನು ಕೊಡಲಾಗುವದೆಂದು ಕಾಯದೇ ಅಜಂಮರೇ ಕೊಟ್ಟ ಆಶ್ವಾಸನಕ್ಕೆ ವಿರೋಧವಾಗಿರುವದು. ಹಿಂದುಸ್ತಾನದಲ್ಲಿಯ ಬಹುಸಂಖ್ಯರ ಕರ್ತವ್ಯ ಅಲ್ಲಿನ ಅಲ್ಪಸಂಖ್ಯಾಕರ ರಕ್ಷಣೆಯೆ ಆಗಿರುವಂತೆ ಪಾಕಿಸ್ತಾನದಲ್ಲಿಯಬಹುಸಂಖ್ಯಾಕರ ಕರ್ತವ್ಯ ಅಲ್ಲಿನ ಅಲ್ಪಸಂಖ್ಯಾಕರ ರಕ್ಷಣೆಯೇಯಾಗಿದೆ. ಈಸಣ್ಣ ಸಣ್ಣ ಅಲ್ಪಸಂಖ್ಯಾಕರ ಮಾನಮರ್ಯಾದೆ, ವಿತ್ತಜೀವಿತಗಳೆಲ್ಲ ಅವರ ಕೈಯಲ್ಲಿಯೇ ಇರುವುವೆಂಬುದು ನಿರ್ವಿವಾದ.

ಬಂಧುಗಳು ಶತ್ರುಗಳಾಗುವರೆ ?

ಬಾಂಧವರಂತೆ ಬಾಳುವೆಯನ್ನು ಸಾಗಿಸಿದವರು ಮತ್ತು ಜಾಲಿಯನ್‌ವಾಲಾಬಾಗದ ಕೊಲೆಯಲ್ಲಿ ಯಾರ ರಕ್ತವು ಕೂಡಿ ಹರಿದಿದಿಯೊ ಅಂಥವರು ಇಂದು ಶತ್ರುಗಳಾಗತಕ್ಕದ್ದೆಂಬುದು ನನ್ನನ್ನು ಹುಚ್ಚನನ್ನಾಗಿ ಮಾಡಿದೆ. ನನ್ನ ಶರೀರದಲ್ಲಿ ಉಸಿರಿರುವವರೆಗೆ ಇದೆಂದಿಗೂ ಆಗದೆಂದು ನಾನು ಹೇಳತಕ್ಕವನೆ. ನನ್ನೀ ಹೃದಯವೇದನೆಯಲ್ಲಿ ನಾನು ದಿನವೂ, ಗಂಟೆ ಗಂಟೆಗೆ ಶಾಂತಿಯನ್ನು ಪ್ರಸ್ಥಾಪಿಸಲು ಶ್ರೀ ಪರಮಾತ್ಮನನ್ನು ಪ್ರಾರ್ಥಿಸುವೆ. ಶಾಂತಿಯು ಪ್ರಸ್ಥಾಪಿತವಾಗುತಿರಲಿಲ್ಲವಾದರೆ ನನ್ನ ಕಣ್ಣು ಮುಚ್ಚೆಂದು ನಾನು ಅವನನ್ನು ಅರಚಿಕೊಳ್ಳುವೆ.

ನಿರ್ವಾಸಿತರು

ದಿಲ್ಲಿ ಸುಲ್ಲಿಯ ಪೂರ್ವ ಮತ್ತು ಪಶ್ಚಿಮ ಪಂಜಾಬದಲ್ಲಿಯ ಬಡನಿರ್ವಾಸಿತರ ಕಡೆ ಇಂದು ಮಳೆಬೀಳುತಿರುವ ಈ ಸಮಯದಲ್ಲಿ ನನ್ನ ವಿಚಾರ ಹರಿಯುತ್ತದೆ. ಚಪ್ಪರಿಲ್ಲದ ಮನೆಗಳಿಲ್ಲದ ದುಃಖಿಗಳು. ಯಾವ ಪಾಪಗಳಿಗಾಗಿ ಅವರ ಆ ಕಷ್ಟ? ಪಶ್ಚಿಮ ಪಂಜಾಬದಿಂದ ಪೂರ್ವಕ್ಕೆ ೫೭ ಮೈಲು ದಿನವೂ ಹಿಂದು ಮತ್ತು ಶೀಖರ ತಂಡಗಳು ಒಂದೇಸವನೆ ಬರುವವೆಂದು ನಾನು ಕೇಳುತ್ತೇನೆ. ಇದು ಹೇಗೆ ಸಂಭವಿಸುತಿದೆ ಎಂಬುದನ್ನು ವಿಚಾರಿಸುತ್ತ ನನ್ನ ತಲೆ ತಿರುಗಹತ್ತಿದೆ. ಇಂಥ ಘಟನೆ ಜಗತ್ತಿನ ಇತಿಹಾಸದಲ್ಲಿಯೆ ಅಪೂರ್ವವಾಗಿದೆ. ಉಳಿದ ಎಲ್ಲ ಜನರಂತೆ ನಾನು ಇದಕ್ಕಾಗಿ ನಾಚಿಕೆಯಿಂದ ತಲೆ ಕೆಳಗೆ ಹಾಕಬೇಕಾಗಿದೆ. ಯಾರು ಹೆಚ್ಚು ಅಪರಾಧ ಮಾಡಿದರು ಯಾರು ಕಡಿಮೆಮಾಡಿದರು ಎಂದು ಕೇಳುವ ಸಮಯವಿದಲ್ಲ. ಈ ಹುಚ್ಚಾಟವನ್ನು ತಡೆಯುವದೇ ಸದ್ಯದ ಕೆಲಸವಾಗಿದೆ.

ಮುಸ್ಲಿಮರ ನಿಷ್ಠೆ ಅವಶ್ಯ

ಹಿಂದೀ ಒಕ್ಕೂಟದಲ್ಲಿರುವ ಪ್ರತಿಯೊಬ್ಬ ಮುಸಲ್ಮಾನ ಪಾಕಿಸ್ತಾನಕ್ಕೆ ನಿಷ್ಠನಾಗಿರುವನು, ಹಿಂದುಸ್ತಾನಕ್ಕೆ ಅಗಿಲ್ಲೆಂದು ಹೇಳಲಾಗುತ್ತದೆ. ಈ ಆರೋಪವನ್ನು ನಾನು ಅಲ್ಲಗಳೆಯುವೆ. ಒಬ್ಬರ ಹಿಂದೊಬ್ಬರು ಮುಸಲ್ಮಾನರು ನನ್ನೆಡೆಗೆ ಬಂದು ಈ ಆರೋಪವನ್ನು ಅಲ್ಲಗಳೆದರು. ಏನೇ ಆದರೂ ಇಲ್ಲಿನ ಬಹುಸಂಖ್ಯಾಕರಿಗಾಗಿ ಭಯಭೀತರಾಗಕೂಡದು, ಎಷ್ಟೆಂದರೂ ಹಿಂದುಸ್ತಾನದಲ್ಲಿರುವ ೪॥ ಕೋಟಿ ಮುಸಲ್ಮಾನರು ದೇಶದತುಂಬೆಲ್ಲ ಹಸರಿಸಿದ್ದಾರೆ. ಹಳ್ಳಿಗಳಲ್ಲಿಯ ಮುಸಲ್ಮಾನರು ಸೇವಾಗ್ರಾಮದಲ್ಲಿಯಂತೆ ನಿರಪಾಯಿಗಳು ಹಾಗುಬಡವರು. ಪಾಕಿಸ್ತಾನದಸಂಬಂಧಅವರಿಗಿಲ್ಲ. ಅವರನ್ನೇಕೆ ಹೊರಗಟ್ಟುವಿರಿ? ಯಾರಾದರೂ ರಾಷ್ಟ್ರದ್ರೋಹಿಗಳಾಗಿದ್ದರೆ ಕಾಯದೆಯಂತೆ ಅವರ ಮೇಲೆ ಕ್ರಮ ತೆಗೆದುಕೊಳ್ಳತಕ್ಕದ್ದು. ರಾಷ್ಟ್ರದ್ರೋಹಿಗಳನ್ನು ಶ್ರೀ ಅನೋರಿಯವರ ಮಗನ ಸಂದರ್ಭದಲ್ಲಿಯಂತೆ ಯಾವಾಗಲೂ ಗುಂಡಿಕ್ಕಿ ಕೊಲ್ಲುವದುಂಟು. ಆದರೆ ನನ್ನ ಕಾಯದೆ ಬೇರೆ ಇರುವದೆಂಬುದನ್ನು ನಾನು ಒಪ್ಪುವೆ. ಹಿಂದುಸ್ತಾನದಲ್ಲಿಯ ಎಲ್ಲ ಮುಸಲ್ಮಾನರು ಪಾಕಿಸ್ತಾನಕ್ಕೆ ನಿಷ್ಠರಾಗಿ ಉಳಿಯುವಂತೆ ನೋಡಿಕೊಳ್ಳಲು ಕೆಲ ಮುಸಲ್ಮಾನ ಅಧಿಕಾರಿಗಳನ್ನು ಇಲ್ಲಿ ಇಡಲಾಗಿದೆಯೆಂದು ಹೇಳಲಾಗುತ್ತದೆ. ಎಲ್ಲ ಹಿಂದುಗಳು 'ಕಾಫರ'ರೆಂದು ಮುಸಲ್ಮಾನರು ಭಾವಿಸುವರೆಂದೂ ಕೆಲವರ ಅಭಿಪ್ರಾಯ. ಇದು ಸಂಪೂರ್ಣ ಸುಳ್ಳೆಂದು ವಿದ್ವಾಂಸರಾದ ಮುಸಲ್ಮಾನರು ನನಗೆ ಹೇಳಿದ್ದುಂಟು. ಮುಸಲ್ಮಾನರು ಕ್ರಿಶ್ಚನರು ಮತ್ತು ಯಹೂದಿಗಳಂತೆ ಹಿಂದುಗಳಾದರೂ ಸ್ವೀಕೃತವಾದ ಧರ್ಮಗ್ರಂಥಗಳನ್ನು ಅನುಸರಿಸುವರು. ಏನೇ ಇದ್ದರೂ ಹಿಂದುಗಳು ಮತ್ತು ಶೀಖರು ಮುಸಲ್ಮಾನರ ಸಂಬಂಧದಲ್ಲಿ ಭೀತಿಯನ್ನು ಪೂರ್ಣವಾಗಿ ಬಿಟ್ಟುಕೊಟ್ಟು ಅವರನ್ನು ಕರುಣೆಯಿಂದ ನೋಡಿಕೊಂಡು ಮರಳಿ ಬಂದು ತಮ್ಮ ಹಳೆಯ ಮನೆಗಳಲ್ಲಿ ಇರಲು ಅವರನ್ನು ಆಮಂತ್ರಿಸಬೇಕು. ಯಾವದೇ ಬಗೆಯ ಅಪಾಯ ಆಗದೆಂದು ಅವರಿಗೆ ಆಶ್ವಾಸಿಸಬೇಕೆಂದು ನಾನು ಬಿನ್ನವಿಸುವೆ. ಈ ರೀತಿಯಲ್ಲಿ ಪಾಕಿಸ್ತಾನದಲ್ಲಿ ಮುಸಲ್ಮಾನರಿಂದ ಅಷ್ಟೇ ಏಕೆ ಸರಹದ್ದ ದಾಟಿಗಿರುವ ಗುಡ್ಡಗಾಡ ಜನರಿಂದಲೂ ಇದಕ್ಕೆ ಮನ್ನಣೆ ಸಿಕ್ಕುವದೆಂದು ನನಗೆ ಮನವರಿಕೆಯಾಗಿದೆ. ಹಿಂದುಸ್ತಾನಕ್ಕೆ ಶಾಂತಿಯು ಮತ್ತು ಜೀವನದ ಮಾರ್ಗವಿದು. ಹಿಂದುಸ್ತಾನದಿಂದ ಪ್ರತಿಯೊಬ್ಬ ಮುಸಲ್ಮಾನನನ್ನು ಹೊರಗಟ್ಟುವದು ಮತ್ತು ಪಾಕಿಸ್ತಾನದಿಂದ ಪ್ರತಿಯೊಬ್ಬ ಹಿಂದು ಮತ್ತು ಶೀಖನನ್ನು ಹೊರಗೆ ಕಳಿಸುವದೆಂದರೆ ಯುದ್ಧ ಮತ್ತು ದೇಶವಿನಾಶವೆ ಎಂದು ಅರ್ಥವಾಗುವದು. ಇಂಥ ಆತ್ಮಘಾತಕ ಧೋರಣವನ್ನು ಎರಡೂ ಸಾಮಂತ ಸರಕಾರಗಳು ಕೈಕೊಂಡರೆ ಇಸ್ಲಾಮ ಮತ್ತು ಹಿಂದು ಧರ್ಮದ ನಾಶವು ಪಾಕಿಸ್ತಾನದಲ್ಲಿ ಮತ್ತು ಹಿಂದೀ ಒಕ್ಕೂಟದಲ್ಲಿ ಕಟ್ಟಿ ಇಟ್ಟಿದ್ದೆ. ಸದ್ಭಾವದಿಂದ ಸದ್ಭಾವವುಂಟಾಗುವದು. ಪ್ರೇಮದಿಂದ ಪ್ರೇಮವೆ ಉತ್ಪನ್ನವಾಗುವದು. ಪ್ರತೀಕಾರದ ಬಗ್ಗೆ ಹೇಳಬೇಕಾದರೆ, ತಪ್ಪಿತಸ್ಥನ ದಂಡನೆಯನ್ನು ಪರಮಾತ್ಮನಿಗೇ ಬಿಟ್ಟುಕೊಡತಕ್ಕದ್ದು. ನನಗೆ ಬೇರೆ ಯಾವ ಮಾರ್ಗವೂ ತೋರುವದಿಲ್ಲ.

ಒಕ್ಕೂಟದಲ್ಲಿಯ ಮುಸಲ್ಮಾನರಿಗೆ

(ಈ ತಿಂಗಳ ೧೯ ನೆಯ ದಿನಾಂಕ ದರಿಯಾಗಂಜಿನ ಮಸೀದೆಯಲ್ಲಿ ಗಾಂಧೀಜಿ ಒಂದು ಸಣ್ಣ ಮುಸ್ಲಿಮರ ಸಭೆಯಲ್ಲಿ ಭಾಷಣ ಮಾಡಿದರು. ಅದನ್ನು ಇಲ್ಲಿ ಕೊಡಲಾಗಿದೆ.–ಸುಶೀಲಾನಯ್ಯರ)

ಗಾಬರಿಗೊಂಡರೆ ಕೆಲಸವಾಗದು

ನಗರದ ಕೆಲಭಾಗದಲ್ಲಿ ಇನ್ನೂ ಉಳಿದಿರುವ ಮುಸ್ಲಿಮರು ಗಾಬರಿಯಿಂದ ಬಿಟ್ಟೋಡದಿರುವಂತೆ ಮಾಡಲು ಗಾಂಧೀಜಿ ಆ ಸ್ಥಳಗಳಿಗೆ ಭೆಟ್ಟಿಕೊಡಬೇಕೆಂದು ಕೆಲವು ಮುಸ್ಲಿಂ ಗೆಳೆಯರು ಗಾಂಧೀಜಿಯನ್ನು ಕೇಳಿಕೊಂಡರು. ಕೂಡಲೆ ಅದಕ್ಕೆ ಒಪ್ಪಿ ಗಾಂಧೀಜಿ ಈದಿನ ಸಂಜೆ ದರಿಯಾಗಂಜಿನ ಪ್ರದೇಶಕ್ಕೆ ತಿರುಗಾಡಲು ಹೊರಟರು. ಲೂಟಿಗೊಳಗಾದ ಮನೆ ಮಠ ಅಂಗಡಿ ಬೀದಿಗಳನ್ನು ಕಂಡು ಗಾಂಧೀಜಿಗೆ ಬಹಳ ವ್ಯಥೆಯಾಯಿತು. ಅಸಫ್ ಅಲಿ ಸಾಹೇಬರ ಮನೆಯಲ್ಲಿ ಸುಮಾರು ನೂರು ಜನ ಮುಸಲ್ಮಾನರು ಸೇರಿದ್ದರು. ಒಕ್ಕೂಟದ ನಿಷ್ಠ ಪ್ರಜೆಗಳಾಗಿ ತಾವು ಬಾಳಬೇಕೆಂದಿರುವುದಾಗಿ ಅವರು ಹೇಳಿದರು; ಆದರೆ ವಿಶೇಷತಃ ಪೋಲೀಸರ ಪಕ್ಷಪಾತದಿಂದ ತಮಗೆ ರಕ್ಷಣೆಯ ಆಶ್ವಾಸನಬೇಕೆಂದು ಅವರು ಕೇಳಿದರು. ತಮ್ಮ ವ್ಯಥೆಯ ಕಥೆಯನ್ನು ಹೇಳುವಾಗ ಅವರಲ್ಲಿ ಕೆಲವರಿಗೆ ಕಣ್ಣೀರು ತುಂಬಿ ಬಂದಿತು. ಪಾಕಿಸ್ತಾನದಲ್ಲಿಯ ಮುಸಲ್ಮಾನರ ಕೃತ್ಯವನ್ನು ಅವರು ನ್ಯಾಯ ಸಮ್ಮತವೆನ್ನಲೊಪ್ಪಲಿಲ್ಲ. ಆದರೆ ಅನ್ಯರ ಪಾಪಕ್ಕೆ ನಿಷ್ಪಾಪರಾದ ಜನರು ತೆರಕಾರರಾಗುವಂತೆ ಮಾಡಬಾರದೆಂದು ಅವರು ಬಿನ್ನವಿಸಿಕೊಂಡರು.

ದೇವರ ಮೇಲೆ ಭಾರಹಾಕಿರಿ

ಅವರನ್ನುದ್ದೇಶಿಸಿ ಮಾತನಾಡುತ್ತ ಗಾಂಧೀಜಿಯೆಂದರು—"ಏನೇ ಆಗಲಿ, ಮನೆ ಬಿಡುವುದಿಲ್ಲ" ಎಂದು ದೃಢವಾಗಿ ನೀವು ಸಂಕಲ್ಪಿಸಿ ಘೋಷಿಸಬೇಕು. ನಿಮ್ಮ ಸುರಕ್ಷಿತತೆ ಹಾಗೂ ಸಂರಕ್ಷಣೆಗೆ ದೇವರ ಮೇಲೆ ಭಾರಹಾಕಿರಿ. ನಾನು ಯಥಾ ಶಕ್ತಿ ಕರ್ತವ್ಯವನ್ನು ನಿರ್ವಹಿಸುತ್ತೇನೆ. ನವಖಾಲಿ, ಬಿಹಾರ, ಕಲಕತ್ತ, ಮತ್ತು ಈಗ ದಿಲ್ಲಿಯಲ್ಲಿ ನಾನು 'ಮಾಡುವೆನು ಇಲ್ಲವೆ ಮಡಿಯುವೆನು' ಎಂದು ಪ್ರತಿಜ್ಞೆ ಮಾಡಿದ್ದೇನೆ. ನಿಜವಾದ ಶಾಂತಿಯುಂಟಾಗುವವರೆಗೆ ನಿರ್ವಾಸಿತರು ತಮ್ಮ ಮನೆಗಳಿಗೆ ಹಿಂದಿರುಗಬೇಕೆಂದು ನಾನು ಹೇಳಲಾರೆ, ಹಿಂದು, ಮುಸ್ಲಿಂ ಮತ್ತು ಶೀಖರು ಸೈನ್ಯದ ಇಲ್ಲವೆ ಪೋಲೀಸರ ಸಹಾಯವಿಲ್ಲದೆ ಸೋದರ ಭಾವದಿಂದ ಬದುಕಲೊಪ್ಪುವವರೆಗೆ ಓಡಿಹೋದವರು ಬರಬೇಕೆಂದು ನಾನು ಬಯಸೆನು"

ಸರಕಾರದ ಸಹಕಾರ

ಮತ್ತೆ ಗಾಂಧೀಜಿ ಮುಂಬರಿದರು: "ನಾನು ಹಿಂದು ಹಾಗೂ ಅನ್ಯರಿಗೆ ಗೆಳೆಯನೂ ಆಳೂ ಆಗಿರುವಂತೆ ಮುಸ್ಲಿಮರಿಗೂ ಆಗಿದ್ದೇನೆ. ರಾಷ್ಟ್ರನಿಷ್ಠ ಪ್ರಜೆಯಾಗಿ ಬಾಳುವೆನೆಂಬ ಒಕ್ಕೂಟದ ಪ್ರತಿಯೊಬ್ಬ ಮುಸಲ್ಮಾನನೂ ಮನೆಗೆ ಹಿಂದಿರುಗಿ ಸುರಕ್ಷಿತವಾಗಿ ಮತ್ತು ಶಾಂತವಾಗಿ ಬದುಕುವಂತಾಗುವ ವರೆಗೆ, ಅದರಂತೆಯೇ ಹಿಂದು ಶೀಖರೂ ಸ್ವಗೃಹಗಳಿಗೆ ಹಿಂದಿರುಗುವಲ್ಲಿಯವರೆಗೆ ನಾನು ವಿರಮಿಸಲಾರೆ. ನಾನು ಜೀವಾವಧಿ ದ. ಆಫ್ರಿಕೆದಲ್ಲೂ ಭಾರತದಲ್ಲೂ ಮುಸಲ್ಮಾನರನ್ನು ಸೇವಿಸಿದ್ದೇನೆ. ಖಿಲಾಫತ್ ದಿನಗಳ ಐಕ್ಯವನ್ನು ನಾನೆಂದೂ ಮರೆಯಲಾರೆ. ಅದೇನೋ ಕೊನೆ ವರೆಗೆ ಉಳಿಯಲಿಲ್ಲ. ಆದರೆ ಅದು ಹಿಂದು ಮುಸಲ್ಮಾನರಲ್ಲಿ ಸ್ಥಾಯಿಯಾದ ಸ್ನೇಹ ಶಕ್ಯವಿದೆಯೆಂಬುದನ್ನು ತೋರಿಸಿಕೊಟ್ಟಿತು. ಅದಕ್ಕಾಗಿಯೇ ನಾನು ಬದುಕಿದ್ದೇನೆ, ಮತ್ತು ಶ್ರಮಿಸುತ್ತಿದ್ದೇನೆ. ಪಾಕಿಸ್ತಾನದಿಂದ ಹೊರಗಟ್ಟಲಾದ ಹಿಂದು ಶೀಖರು ಪುನಃ ಅಲ್ಲಿಗೆ ಹೋಗಿ ಸುರಕ್ಷಿತವಾಗಿಯೂ ಗೌರವದಿಂದಲೂ ಬಾಳುವಂತೆ ನೋಡಿಕೊಳ್ಳುವುದರ ಸಲುವಾಗಿ ನಾನು ಪಂಜಾಬಿಗೆ ಹೋಗತಕ್ಕವನಿದ್ದೇನೆ. ಆದರೆ ಮಾರ್ಗ ಮಧ್ಯದಲ್ಲಿ ದಿಲ್ಲಿಯಲ್ಲೇ ಉಳಿವ ಪ್ರಸಂಗ ಸಂಭವಿಸಿತು. ಮತ್ತು ರಾಜಧಾನಿಯಲ್ಲಿ ಶಾಂತಿಯುಂಟಾದ ಹೊರತು ನಾನು ಇಲ್ಲಿಂದ ಕದಲಲಾರೆ. ನಾನೊಬ್ಬನೇ ಹಾಗೆ ಹೇಳುವವನಾಗಿ ಉಳಿದರೂ ಮುಸ್ಲಿಮರು ಮನೆ ಬಿಟ್ಟು ಹೊರಡಬೇಕೆಂದು ನಾನೆಂದೂ ಬೋಧಿಸಲಾರೆ. ಅವರು ಶಾಸನ ವಿಧೇಯರೂ, ಪ್ರಾಮಾಣಿಕರೂ, ರಾಷ್ಟ್ರಭಕ್ತರೂ ಆದ ಪ್ರಜೆಗಳಾಗಿ ಉಳಿದರೆ ಅವರನ್ನು ಯಾರೂ ಮುಟ್ಟರು. ನಾನು ಸರಕಾರವಲ್ಲದಿದ್ದರೂ ಸರಕಾರದಲ್ಲಿರುವವರಲ್ಲಿ ನನ್ನ ವರ್ಚಸ್ಸಿದೆ. ಅವರೊಡನೆ ಈ ಸಂಬಂಧವಾಗಿ ನಾನು ಬಹಳವಾಗಿ ಮಾತುಕತೆ ನಡೆಸಿದ್ದೇನೆ. ಹಿಂದುಸ್ತಾನದಲ್ಲಿ ಮುಸಲ್ಮಾನರಿಗೆ ಸ್ಥಾನವಿಲ್ಲವೆಂದು ಅವರು ನಂಬಿಲ್ಲ; ಮತ್ತು ಹಿಂದುಸ್ತಾನದಲ್ಲಿ ಮುಸ್ಲಿಮರು ಹಿಂದುಗಳ ದಾಸರಾಗಿ ಬಾಳಬೇಕೆಂದು ಅವರು ಹೇಳುವುದಿಲ್ಲ. ಮುಸ್ಲಿಮರು ಪಾಕಿಸ್ತಾನಕ್ಕೆ ಹೋಗುವುದಕ್ಕೆ ಸರದಾರ ಪಟೇಲರು ಬೆಂಬಲವಿತ್ತರೆಂದು ಕೆಲವರೆಂದರು. ಇದನ್ನು ಕೇಳಿದೊಡನೆಯೇ ಸರದಾರರು ಕಿಡಿ ಕಿಡಿಯಾದರು. ಆದರೆ ಮುಸಲ್ಮಾನರಲ್ಲಿ ಬಹಳ ಜನರು ಹಿಂದುಸ್ತಾನಕ್ಕೆ ನಿಷ್ಠರಾಗಿಲ್ಲವೆಂದು ಸಂಶಯ ಪಡಲು ಬಹಳ ಕಾರಣಗಳಿವೆ. ಅಂಥವರು ಪಾಕಿಸ್ತಾನಕ್ಕೆ ಹೋಗುವುದು ಉತ್ತಮ. ಆದರೆ ಸರದಾರರು ತಮ್ಮ ಮೇಲೆ ಬಂದೆರಗಿದ ಸಂದೇಹವನ್ನು ತಮ್ಮ ಕೃತಿಯಲ್ಲಿ ಕಾಣಗೊಡಲಿಲ್ಲ. ಹಿಂದೀ ಒಕ್ಕೂಟದಲ್ಲಿರ ಬಯಸುವ ಮುಸಲ್ಮಾನರಿಗೆ ಎಲ್ಲಕ್ಕಿಂತ ಮೊದಲು ರಾಷ್ಟ್ರನಿಷ್ಠೆಯಿರುವುದವಶ್ಯ; ಅವರು ಇಡೀ ಜಗತ್ತೇ ಎದುರಿಗೆ ಬಂದರೂ ತಮ್ಮ ರಾಷ್ಟ್ರಕ್ಕಾಗಿ ಹೋರಾಡಲು ತಯಾರಾಗಿರಬೇಕು. ಪಾಕಿಸ್ತಾನಕ್ಕೆ ಹೋಗಬಯಸುವವರು ಸುಖವಾಗಿ ಹೋಗಬಹುದು; ಅವರಿಗೆ ಅಲ್ಲಿ ಯಾವುದೂ ಇಲ್ಲ. ಹಿಂದು ಅಥವಾ ಶೀಖರ ಹೆದರಿಕೆ

–೧೧ನೇ ಪುಟಕ್ಕೆ

ಅನ್ಯೋನ್ಯಾಶ್ರಯ

ರಾವಲಪಿಂಡಿಯ ಹತ್ತಿರದ ವಾಹ ಶಿಬಿರಕ್ಕೆ ಗಾಂಧೀಜಿ ಭೆಟ್ಟಿಯಿತ್ತರು. ಅಂದು ಆಗಸ್ಟ ೫ ನೆಯ ದಿನಾಂಕ. ಅವರು ಕಾಶ್ಮೀರದಿಂದ ಆಗ ಹಿಂದಿರುಗಿ ಬರುತ್ತಿದ್ದರು. ಪಾಕಿಸ್ತಾನವು ರೂಪಿತವಾಗುವ ದಿನವಾದ ಆಗಸ್ಟ ೧೫ ರೊಳಗೆ ತಮ್ಮನ್ನು ಹಿಂದೀ ಒಕ್ಕೂಟದೊಳಗೊಯ್ಯಬೇಕೆಂದು ಶಿಬಿರದ ನಿರಾಶ್ರಿತರು ಹಟಹಿಡಿದಿದ್ದರು. ಪಾಕಿಸ್ತಾನದಲ್ಲಿ ಸುರಕ್ಷಿತವಾಗಿ ಮರ್ಯಾದೆಯಿಂದ ಬಾಳಲು ಸಾಧ್ಯವಿಲ್ಲವೆಂದು ಅವರಿಗೆ ಖಂಡಿತವಾಗಿ ತಿಳಿದಿತ್ತು. ಗಾಬರಿಗೊಳ್ಳದೆ ಶಾಂತರಾಗಿರಬೇಕೆಂದು ಗಾಂಧೀಜಿ ಅವರಿಗೆ ಬಿನ್ನವಿಸಿದರು. ಪಾಕಿಸ್ತಾನ ಒಂದುಸಲ ಆಗಿ ಹೋಯಿತೆಂದರೆ ಅರಾಜಕತೆ ಪುನಃ ತಲೆದೋರಲಾರದೆಂದು ಗಾಂಧೀಜಿ ಅಭಿಪ್ರಾಯಪಟ್ಟರು. ರಾವಲಪಿಂಡಿ, ಲಾಹೋರ ಮತ್ತು ಉಳಿದೆಡೆಗಳಲ್ಲಾದುದು ನಿಜವಾಗಿಯೂ ಭಯಂಕರವಾದುದಾಗಿತ್ತು; ಆದರೆ ಆ ಕಾಲದಲ್ಲಿ ಪಂಜಾಬಿನಲ್ಲಿ ಜನಪ್ರಿಯ ಸರಕಾರವಿದ್ದಿಲ್ಲ. ತಮಗೆ ಆಗಸ್ಟ ೧೫ ರ ವರೆಗೆ ಅವರೊಡನಿರಬೇಕೆಂಬ ಇಚ್ಛೆಯುಂಟು, ಆದರೆ ಆ ತಾರೀಕಿನೊಳಗೆ ಬಂಗಾಲವನ್ನು ತಲುಪುವದಾಗಿ ತಾವು ಮಾತು ಕೊಟ್ಟಿರುವದರಿಂದ ಹಾಗೆ ಮಾಡಲು ಸಾಧ್ಯವಿಲ್ಲವೆಂದು ಅವರಿಗೆ ಗಾಂಧೀಜಿ ಹೇಳಬೇಕಾಯಿತು. ಅವರು ತಮ್ಮ ಬದಲು ನಾನಿರಬೇಕೆಂದು ಹೇಳಿದರು. ಆಗಸ್ಟ ೧೫ ರ ಬಳಿಕ ಯಾವಾಗಬೇಕೆಂದರೂ ಶಿಬಿರವನ್ನು ಬಿಟ್ಟು ಅವರನ್ನು ಸೇರಬಹುದೆಂದು ವಿಧಿಸಿದರು. ಪಾಕಿಸ್ತಾನದಿಂದ ಓಡಿಹೋಗುವದು ಹಿಂದುಗಳಿಗೂ ಶೀಖರಿಗೂ ಹಿತವಲ್ಲವೆಂದು ಸಂಪೂರ್ಣವಾಗಿ ನಂಬಿ ನಾನು ಅಲ್ಲಿ ನಿಂತೆ. ತಲ ತಲಾಂತರದಿಂದ ಅವರು ಅಲ್ಲಿ ನೆಲೆಸಿದ್ದುದರಿಂದ ಅಲ್ಲಿ ಅವರಿಗೆ ಇರುವ ಹಕ್ಕಿದೆ. ದಕ್ಷಿಣ ಆಫ್ರಿಕದಲ್ಲಿ ತಮ್ಮ ಹಕ್ಕುಗಳಿಗಾಗಿ ಹಿಂದೀಯರು ಹೋರಾಡಬಲ್ಲವರಾದರೆ ಅವರು ಪಾಕಿಸ್ತಾನದಲ್ಲಿಯ ತಮ್ಮ ಮನೆ ಮಠಗಳನ್ನು ಬಿಟ್ಟೋಡಬೇಕೆ?

ನಿರಾಶ್ರಿತರೆದರು ಈ ನನ್ನ ಅಭಿಪ್ರಾಯವನ್ನಿಟ್ಟೆ ಕೆಲವರು ಅದನ್ನು ಸರಿಯೆಂದೊಪ್ಪಿದರು, ಉಳಿದವರು ಸಹಿಸದಾದರು. ತಾವು ಯುದ್ಧ ಕೈದಿಗಳಾಗಿ, ಕರಾರಿನ ಪಣಗಳಾಗಿ ಉಳಿಯಲಾರೆವೆಂದು ಅವರು ನುಡಿದರು. ಹಿಂದೀ ಒಕ್ಕೂಟದಲ್ಲಿ ಭಿಕ್ಷಾಟನೆ ಮಾಡುವುದಾದರೂ ಲೇಸು, ಪಾಕಿಸ್ತಾನದಲ್ಲಿ ದೊಡ್ಡ ಜಮೀನುದಾರನಾಗಿರುವುದು ಬೇಡ ಎಂದು ಅವರು ಅಭಿಪ್ರಾಯ ಪಟ್ಟರು; ಪಾಕಿಸ್ತಾನದಲ್ಲಿ ತಮ್ಮ ಸ್ತ್ರೀಯರ ಮಾನಮರ್‍ಯಾದೆ ಉಳಿಯಲಾರದೆಂದರು. ಅಂಜಿ ಓಡುವದಕ್ಕಿಂತ ಆತ್ಮರಕ್ಷಣೆಗಾಗಿ ಧೀರತೆಯಿಂದ ಕಾದಿ ಮಡಿವುದು ಸರಿಯಾದುದೆಂದು ನಾನು ಅವರಿಗೆ ಹೇಳಿದೆ.

ಜನರು ದಿಕ್ಕೆಟ್ಟು ಓಡಿ ಹೋಗಿದ್ದ ಕೆಲವು ಹಳ್ಳಿಗಳಿಗೆ ನಾನು ಹೋದೆ. ಒಂದು ಹಳ್ಳಿಯಲ್ಲಿ ಅಲ್ಪಸಂಖ್ಯಾಕರಿಗೆ ಒಬ್ಬ ಮುಸಲ್ಮಾನ ಜಮೀನುದಾರನು ರಕ್ಷಣೆ ಕೊಟ್ಟು ವಿದ್ವೇಷದ ಮೂಲವನ್ನೇ ಕಡಿದುಹಾಕಿದ್ದನು. ಅಲ್ಲಿ ಮೂರೇ ಮೂರು ಮರಣಗಳಾಗಿದ್ದವು. ಮತ್ತು ಕೆಲವೇ ಮನೆಗಳು ಸುಡಲ್ಪಟ್ಟಿದ್ದವು. ತಿರುಗಿ ಬಂದರೆ ಹಿಂದುಗಳನ್ನು ಸ್ವಾಗತಿಸುವದಾಗಿ ಅಲ್ಲಿಯವರು ನನಗೆ ಹೇಳಿದರು. ಆದರೆ ಮತ್ತೆ ಕೆಲವು ಹಳ್ಳಿಗಳಲ್ಲಿ ಹಿಂದುಗಳ ಪುನರಾಗಮನ ಬೇಡವೆಂದು ಜನರೆಂದರು. ಅಂತಹ ಪರಿಸ್ಥಿತಿಯಲ್ಲಿ ಜನರಿಗೆ ಏನು ಹೇಳಬೇಕೆಂಬುದೇ ನನಗೆ ತಿಳಿಯದಂತಾಯಿತು. ಡೆಪ್ಯುಟಿ ಕಮೀಶನರನು ಬಂದು ನಿರಾಶ್ರಿತರಿಗೆ ಸಂರಕ್ಷಣೆ ಕೊಡುವುದಾಗಿಯೂ ಅವರ ಪುನರ್ನಿವೇಶನ ಸಾಧ್ಯವೆಂದೂ ನನಗೆ ಹೇಳಿದನು.

ಆದರೆ ಪರಿಸ್ಥಿತಿಯನ್ನು ಹಿಡಿತದಲ್ಲಿಟ್ಟುಕೊಳ್ಳಲು ಡೆಪ್ಯುಟಿ ಕಮಿಶನರನು ಮಾಡಿದ ಪ್ರಯತ್ನವನ್ನು ಮೀರಿ ಗಲಭೆ ಪುನಃ ಪ್ರಾರಂಭವಾಯಿತು. ರಾವಲಪಿಂಡಿಯಲ್ಲಾದುದರ ಸೇಡು ತೀರಿಸಿಕೊಳ್ಳಲು ಪೂರ್ವ ಪಂಜಾಬಿನವರು ಎದ್ದಿದ್ದಾರೆಂಬ ಸುದ್ದಿ [illegible] ಪಶ್ಚಿಮ ಪಂಜಾಬೇ ಪೂರ್ವ ಪಂಜಾಬಿನಲ್ಲಾದುದಕ್ಕೆ ಪ್ರತೀಕಾರ ಮಾಡಲು ಸಿಡಿದೆದ್ದಿತು. ಕಳೆದ ಒಂದು ವರ್ಷದಿಂದ ಈ ಅನ್ಯೋನ್ಯಾಶ್ರಯವು ಹಾಗಿಯೇ ಸಾಗಿದೆ; ಪ್ರತೀಕಾರ ಪುನಃಪ್ರತೀಕಾರಗಳು ನಡೆದೇ ಇವೆ. ಕಳೆದ ವರ್ಷದ ಆಗಸ್ಟ ೧೬ ರಲ್ಲಿ ಕಲಕತ್ತದಲ್ಲಿ ದಂಗೆಯಾರಂಭವಾಯಿತು. ನವಖಾಲಿಯಲ್ಲಿ ಕಲಕತ್ತದಲ್ಲಾದುದರ ಸೇಡು ತೀರಿಸಿಕೊಳ್ಳಲಾಯಿತೆಂದು ನಮಗೆ ಸುದ್ದಿ ಬಂದಿತು. ಬಿಹಾರದಲ್ಲಿ ನವಖಾಲಿಯ ದುಷ್ಕೃತ್ಯದ ಮುಯ್ಯುತೀರಿಸುವುದಾಯಿತು. ಅದರ ಪರಿಣಾಮವಾಗಿ ರಾವಲಪಿಂಡಿಯಲ್ಲಿ ಮತ್ತು ಗಡಿ ಪ್ರಾಂತದಲ್ಲಿ ಕೊಲೆ ಮತ್ತು ಕ್ರೂರ ಕೃತ್ಯಗಳು ನಡೆದವು. ಈ ಪ್ರಕಾರವಾಗಿ ಪ್ರತೀಕಾರವೃತ್ತಿ ವಿಸ್ತಾರವಾಗುತ್ತ ಹೋಯಿತು. ಇದನ್ನು ನಿಲ್ಲಿಸದೆ ಹೋದರೆ ಒಮ್ಮೆ ಇದು ಇಡೀ ಭರತಖಂಡವನ್ನೇ ವ್ಯಾಪಿಸೀತು.

ನಾನು ವಾಹ ಶಿಬಿರವನ್ನು ಬಿಡುವಷ್ಟರಲ್ಲಿ ಜೀವಿಸುವುದು ಅಲ್ಲಿ ಅತ್ಯಂತ ಸಂದಿಗ್ಧವಾಗಿ ಹೋಗಿತ್ತು. ಆಗ ಅವರನ್ನು ಅಲ್ಲಿ ಬಿಡುವದು ಅಸಾಧ್ಯವಾಗಿತ್ತು. ಹೆಚ್ಚು ಹೆಚ್ಚು ನಿರಾಶ್ರಿತರು ಶಿಬಿರದೊಳಗೆ ಹೊಳೆಯಾಗಿ ಹರಿದು ಬರತೊಡಗಿದರು, ದಾರಿಯಲ್ಲೇ ಅವರು ದಾಳಿಗೆ ತುತ್ತಾದರು; ಹಲ ಹೆಂಗಸರು ಮತ್ತು ಮಕ್ಕಳು ಅತ್ಯಂತ ದಾರುಣ ಸ್ಥಿತಿಯಲ್ಲಿ ಶಿಬಿರವನ್ನು ಬಂದು ಸೇರಿದರು. ನನ್ನ ಶ್ರದ್ಧೆ ಕದಡಿ ಹೋಯಿತು. ಪಾಕಿಸ್ತಾನವನ್ನು ಬಿಡುವ ಆಲೋಚನೆ ಮಾಡಬೇಡಿರೆಂದು ನಿರಾಶ್ರಿತರಿಗೆ ನಾನು ಅಷ್ಟರ ಮೇಲೆ ಹೇಳಲಾರದವಳಾದೆ. ಪೋಲೀಸು ಮತ್ತು ಮಿಲಿಟರಿಯವರು ಪಕ್ಷಪಾತಿಗಳಾಗಿ ವರ್ತಿಸಿದ ಕತೆಗಳಿಗೆ ಕೊನೆಯಿಲ್ಲವಾಯಿತು. ಅದರಲ್ಲಿ ಬಹ್ವಂಶ ಸತ್ಯವಿದೆಯೆಂದು ಒಬ್ಬ ತರುಣ ರಾಷ್ಟ್ರೀಯ ಮುಸಲ್ಮಾನ ಅಧಿಕಾರಿಯು ನನಗೆ ಹೇಳಿದನು. ನಾನು ಸೋಲೊಪ್ಪಿಕೊಳ್ಳಬೇಕಾಯಿತು ಮತ್ತು ಹಿಂದೀ ಒಕ್ಕೂಟದಲ್ಲಿಯ ಜವಾಬುದಾರ ಅಧಿಕಾರಿಗಳಿಗೆ ನಿರಾಶ್ರಿತರನ್ನು ಕರೆದುಕೊಂಡು ಹೋಗಬೇಕೆಂದು ಬರೆವ ಪ್ರಸಂಗವೊದಗಿ ಬಂದಿತು.

ಆಗಸ್ಟಿನ ಕೊನೆಯಲ್ಲಿ ಮುಸ್ಲಿಂ ನಿರಾಶ್ರಿತರನ್ನು ತುಂಬಿಕೊಂಡು ರಾವಲಪಿಂಡಿಗೆ ಹೊರಟ ಒಂದು ರೈಲು ೧೨೦೦ ಮುಸ್ಲಿಮೇತರ ನಿರಾಶ್ರಿತರನ್ನು ವಾಹ ಶಿಬಿರದಿಂದ ಒಯ್ದಿತು. ವಿಮಾನಗಳು ಪ್ರತಿದಿನವೂ ನೂರಾರು ಜನರನ್ನು ಒಯ್ಯಲಾರಂಭಿಸಿದವು.

ಈ ನಡುವೆ ಗಾಂಧೀಜಿ ತನ್ನ ಮೋಡಿ ಮಾಟದಿಂದ ಕಲಕತ್ತದಲ್ಲಿ ಶಾಂತಿಯನ್ನು ತಕ್ಕಮಟ್ಟಿಗೆ ಸ್ಥಾಪಿಸಿದ್ದರು. ವಾಹ ಶಿಬಿರದಲ್ಲಿ ರೇಡಿಯೋ ಒಂದೇ ನಮ್ಮನ್ನು ಹೊರಜಗದೊಡನೆ ಸಂಬಂಧಿಸಿದ ವಸ್ತುವಾಗಿತ್ತು. ಅದು ಪೂರ್ವ ಪಂಜಾಬಿನ ಅವಘಡಗಳ ಸುದ್ದಿಯನ್ನು ಮಾತ್ರ ಪ್ರಕಟಿಸುತ್ತಿತ್ತು. ಪಶ್ಚಿಮ ಪಂಜಾಬಿನಲ್ಲಾಗುತ್ತಿದ್ದ ಕೃತ್ಯಗಳ ಬಗ್ಗೆ ಒಂದು ಚಕಾರ ಶಬ್ದವನ್ನೂ ಹೊರಗೆಡಹುತ್ತಿದ್ದಿಲ್ಲ. ಆದರಿಂದ ಮುಸ್ಲಿಮೇತರ ನಿರಾಶ್ರಿತರು ನಿರ್ವಿಣ್ಣರಾದರು. ಗಾಂಧೀಜಿಯ ಉಪವಾಸದ ಸುದ್ದಿಯು ಎಲ್ಲರಿಗೂ ವ್ಯಥೆಯನ್ನುಂಟುಮಾಡಿತು ಮತ್ತು ಆಗಲೇ ಶಿಬಿರವನ್ನು ಖಾಲಿ ಮಾಡುವುದು ಪ್ರಾರಂಭವಾಗಿದ್ದರಿಂದ ನಿರಾಶ್ರಿತರು ನನಗೆ ಹೊರಡಲಪ್ಪಣೆ ಕೊಡುವಂತೆ ಮಾಡಿತು.

ದಿಲ್ಲಿಗೆ ನಿರಾಶ್ರಿತರನ್ನೊಯ್ಯುತ್ತಿದ್ದ ಒಂದು ವಿಮಾನದ ಮೂಲಕ ನಾನು ಪಶ್ಚಿಮ ಪಂಜಾಬಿನಿಂದ ನಿರ್ಗಮಿಸಿದೆ. ಅಲ್ಲಿಂದ ಕಲಕತ್ತಕ್ಕೆ ಹೋದೆ. ಅಲ್ಲಿಗೆ ಹೋಗುವಷ್ಟರಲ್ಲಿ ಗಾಂಧೀಜಿಯ ಉಪವಾಸವು ಕೊನೆಗಂಡಿತ್ತು, ಅಷ್ಟು ಹೊತ್ತಿಗೆ ನಾನು ಗಾಂಧೀಜಿಯನ್ನು ಕಾಣದೆ ಒಂದು ತಿಂಗಳಾಗಿತ್ತು. ಅವರು ದುರ್ಬಲರಾಗಿದ್ದರೂ ಪ್ರಸನ್ನರಾಗಿದ್ದರು. ಪಂಜಾಬಿನಲ್ಲಿಯ ಕಟುತರ ಮನೋಭಾವ ಹಾಗೂ ನಿರಾಶೆಯ ವಾತಾವರಣಕ್ಕೆ ವಿರುದ್ಧವಾಗಿ ಅಲ್ಲಿ ಒಂದು ವಿಧದ ಭರವಸೆ ಹಾಗೂ ಸದ್ಬುದ್ಧಿ ಜಾತಿಜಾತಿಗಳಲ್ಲಿಉಂಟಾಗಿದ್ದಿತು. ವರ್ಷಗಟ್ಟಲೆ ನಡೆದ ಗಲಭೆಗಳಿಂದ ಬೇಸತ್ತು ಅಲ್ಲಿಯ ಹಿಂದು ಮುಸ್ಲಿಮರು ಶಾಂತಿಗಾಗಿ ಚಾತಕದಂತೆ ಬಾಯ್ಬಿಡುತ್ತಿದ್ದರು. ಅದು ಕೇವಲ ತಾತ್ಕಾಲಿಕವಾದ ಶಾಂತಿಯೆಂದು ಭಾವಿಸಿದ ನಾಸ್ತಿಕರು ಅಲ್ಲಿ ಎಷ್ಟೋ ಇದ್ದರು. ಕೇವಲ ಹಿಂದುಗಳು ತಮ್ಮ ಶಸ್ತ್ರಾಸ್ತ್ರಗಳನ್ನು ಗಾಂಧೀಜಿಗೊಪ್ಪಿಸಿದರೆಂದು ಅವರು ಹೇಳಿದರು; ಮುಸಲ್ಮಾನರಲ್ಲಿ ಒಬ್ಬನು ಕೂಡ ಕೈದುಗಳನ್ನು ತಂದೊಪ್ಪಿಸಲಿಲ್ಲವೆಂದರು. ಅವರು ಪ್ರಾಮಾಣಿಕರಾಗಿಲ್ಲವೆಂಬುದನ್ನು ಅದು ತೋರಿಸಿತು. ಈ ವಾದಗಳನ್ನು ಗಾಂಧೀಜಿ ನಿರಾಕರಿಸಿಬಿಟ್ಟರು. "ನಂಬಿಗೆಯಿಂದ ನಂಬಿಗೆ ಹುಟ್ಟುತ್ತದೆ" ಎಂಬುದೇ ಗಾಂಧೀಜಿಯವರು ಆಧರಿಸಿದ ಗಾಢಾತತ್ವ. ಮಾನವಸ್ವಭಾವವು ಸಾರತಃ ಒಳಿತು. ಅದು ಶಾಂತಿಯನ್ನು ಬಯಸುತ್ತದೆ. ಮುಸ್ಲಿಮರೂ ಶಸ್ತ್ರಗಳನ್ನು ತಂದೊಪ್ಪಿಸುವರು; ಇದರ ಮೇಲೆ ಕಾಯದೆಯನ್ನು ಭಂಗಿಸುವವರನ್ನು ಶಿಕ್ಷಿಸಲು ಸರಕಾರವಿದೆ. ಕಡೆಯ ಪಕ್ಷ ಒಂದು ಕಡೆಯವರಾದರೂ ನ್ಯಾಯಮಾರ್ಗ ಹಿಡಿಯಲಿ ಎಂದು ಅಭಿಪ್ರಾಯಪಟ್ಟರು.

ಬಿಹಾರದಲ್ಲಿ ಪುನಃ ಉನ್ಮತ್ತ ಪ್ರತಿಹಿಂಸೆ ಪ್ರಾರಂಭವಾದರೆ ತಾವು ಆಮರಣ ಉಪವಾಸ ಕೈಕೊಳ್ಳುವುದಾಗಿ ಗಾಂಧೀಜಿ ನುಡಿದಿದ್ದರು. ನೌಖಾಲಿಗೆ ಹೋಗುವದನ್ನು ತಡ ಮಾಡಿ ಮುಸ್ಲಿಂ ಮಿತ್ರರ ಪ್ರಾರ್ಥನೆಯ ಪ್ರಕಾರ ಕಲಕತ್ತದಲ್ಲೇ ಉಳಿದಾಗ ನೌಖಾಲಿಗೂ ಅವರು ಅದೇ ಮಾತನ್ನು ಅನ್ವಯಿಸಿ ಹೇಳಿದರು. ಆಗ ಕಲಕತ್ತದ ಬಗ್ಗೆ ಅವರು ತಮ್ಮ ಪ್ರತಿಜ್ಞೆಯನ್ನು ಪುನರುದ್ಘೋಷಿಸಿದರು: ಕಲಕತ್ತದ ಶಾಂತಿ ಕೇವಲ ಕ್ಷಣಿಕವಾದರೆ, ಪುನಃ ಜಾತೀಯೋನ್ಮಾದದ ದಳ್ಳುರಿ ಪ್ರಜ್ವಲಿಸಿದರೆ ತಾವು ಎಲ್ಲೇ ಇದ್ದರೂ ಮರಣಾಂತ ಉಪವಾಸವನ್ನು ಕೈಕೊಳ್ಳುವುದಾಗಿ ಗಾಂಧೀಜಿ ಸಾರಿದರು. ಇದೆಲ್ಲ ಅವರ ಮಿತ್ರರನ್ನು ಗಾಬರಿಗೊಳಿಸಿತು. ಇದೆಲ್ಲವನ್ನೂ ದಾಟಿ ಅವರು ಬದುಕಬಲ್ಲರೇ? ಎಂದು ಗೆಳೆಯರು ಚಿಂತೆಗೊಳಗಾದರು. ಆದರೆ ಅವರು ಯಾವಾಗಲೂ ಶಾಂತಿಗಾಗಿಯೇ ಬದುಕಿದ್ದರು. ಮತ್ತು ತಮ್ಮನ್ನು ಸಂಪೂರ್ಣವಾಗಿ ದೇವರ ವಶಕ್ಕೊಪ್ಪಿಸಿ ಕೊಂಡಿದ್ದರು. ಇಂದು ಎಲ್ಲೆಲ್ಲೂ ಕಾಣಬರುತ್ತಿರುವದ್ವೇಷದ ವಾತಾವರಣದಲ್ಲಿ ತಾವು ಬಾಳಲು ಬಯಸುವುದಿಲ್ಲವೆಂದು ಅವರು ನಿಷ್ಠೆಯಿಂದ ಸಾರಿದ್ದರು. ನಾನು ತಂದ ಪೂರ್ವ ಮತ್ತು ಪಶ್ಚಿಮ ಪಂಜಾಬುಗಳ ಸುದ್ದಿಯನ್ನು ಕೇಳಿ ಗಾಂಧೀಜಿ ಜನರ ವಿನಿಮಯವನ್ನು ನಿಲ್ಲಿಸಲು ಮಾರ್ಗವೇ ಇಲ್ಲವೆಂಬುದಕ್ಕೆ ಒಪ್ಪುವರೆಂದು ನಾನು ತಿಳಿದಿದೆ. ಆದರೆ ನನಗೆ ಭ್ರಮನಿರಸನವಾಯಿತು. ಅದು ಸಂಪೂರ್ಣವಾಗಿ ದುರ್ಮಾರ್ಗವೆಂಬ ನಂಬಿಗೆ ಅವರಲ್ಲಿ ಯಥಾಪೂರ್ವ ಅಚಲಿತವಾಗಿಯೇ ಉಳಿದಿತ್ತು. ಭಾರತ ವಿಭಜನೆಯೊಂದು ತಪ್ಪುಹೆಜ್ಜೆ. ಅದನ್ನು ಮತ್ತೊಂದು ತಪ್ಪಿನಿಂದ ತಿದ್ದಲಾಸಾಧ್ಯ. ಅಲ್ಪಸಂಖ್ಯಾಕರು ಇದ್ದಲ್ಲೇ ಇದ್ದು ಅನಿವಾರ್ಯವಾದಲ್ಲಿ ಸಾವನ್ನಾದರೂ ಎದುರಿಸಲೇ ಬೇಕು. ಈ ನಡುವೆ ಅಲ್ಪಸಂಖ್ಯಾಕರ ಸುರಕ್ಷಿತತೆಯನ್ನು ನಿಶ್ಚಿತಗೊಳಿಸುವುದು ಉಭಯ ಸಾಮಂತ ಸರಕಾರಗಳ ಕರ್ತವ್ಯ. ಜನರ ಮೇಲೆ ತಮ್ಮ ಅಧಿಕಾರ ನಡೆಯದೆಂಬುದು ನಿರರ್ಥಕ. ಅಧಿಕಾರ ನಡೆವಂತೆ ಮಾಡುವ ಯತ್ನದಲ್ಲಿ ಅವಶ್ಯವಿದ್ದರೆ ಅವು ಸಾಯಬೇಕು. ಸೆಪ್ಟಂಬರ ೭ ರಲ್ಲಿ ಕಲಕತ್ತದಿಂದ ಗಾಂಧೀಜಿ ಪಂಜಾಬಿಗೆಂದು ಹೊರಟರು; ತಮ್ಮ ಕೈಯಲ್ಲಾದರೆ ಅಲ್ಲಿಯ ಅರಾಜಕತೆಯನ್ನು ನಿಲ್ಲಿಸಲು ಸಹಾಯವೊದಗಿಸಲು ನಿಶ್ಚಯಿಸಿರುವುದಾಗಿ ಹೇಳಿದರು.

ಪಂಜಾಬಿಗೆ ಹೋಗುವ ಮಾರ್ಗದಲ್ಲಿ ಗಾಂಧೀಜಿ ದಿಲ್ಲಿಯಲ್ಲಿಳಿದರು; ದಿಲ್ಲಿಯು ಜಾತೀಯೋನ್ಮಾದದ ಜ್ವಲಜ್ಜ್ವಾಲೆಯಿಂದ ವ್ಯಾಪಿಸಿದ್ದನ್ನು ಕಂಡರು. ತಮ್ಮ ರೂಢಿಯನುಸಾರವಾಗಿ ನಗರದಲ್ಲಿ ಶಾಂತಿ ಸ್ಥಾಪನೆಯಾಗುವ ವರೆಗೆ ತಾವು ಅಲ್ಲೇ ಉಳಿಯುವುದಾಗಿ ಅವರು ನಿರ್ಧರಿಸಿದರು. ದಿಲ್ಲಿಯಲ್ಲಿ ಪ್ರತಿ ದಿನವೂ ಎಂಬಂತೆ ಅವರು ನಿರಾಶ್ರಿತರ ಶಿಬಿರಗಳನ್ನು ನೋಡಿಕೊಂಡು ಬರುತ್ತಿದ್ದಾರೆ. ಗಾಂಧೀಜಿ ಮುಸಲ್ಮಾನ ಪಕ್ಷಪಾತಿಗಳೆಂದು ಭಾವಿಸಿ ಹಿಂದುಗಳು ಅವರ ಮೇಲೆ ಸಿಟ್ಟಿಗೆದ್ದಿದ್ದಾರೆ. ಬಹಳ ಜನ ಮುಸಲ್ಮಾನರು—ಗಾಂಧೀಜಿ ಎಷ್ಟಾದರೂ ಹಿಂದುವಲ್ಲವೇ? ಎಂದ ಮೇಲೆ, ಅವರು ಹಿಂದು ಪಕ್ಷಪಾತಿಗಳಾಗಿರಲೇಬೇಕು--ಎಂದು ತಿಳಿದಿದ್ದಾರೆ. ಅವರು ಮಾತಾಡದೆ ಎರಡೂ ಜಾತಿಯವರ ಕ್ರುದ್ಧ ದೃಷ್ಟಿ ಹಾಗೂ ಸಿಡಿನುಡಿಗಳನ್ನು ಸಹಿಸಿಕೊಂಡು ಶಾಂತರಾಗಿ ಅವರಿಗೆ ಅವರವರ ಕರ್ತವ್ಯವನ್ನು ಬೋಧಿಸುತ್ತಿದ್ದಾರೆ. ಜನರೆಂದೂ ಸ್ವಚ್ಛಂದವರ್ತಿಗಳಾಗಕೂಡದು. ತಪ್ಪನ್ನು ತಿದ್ದಲು ಅವರು ತಮ್ಮ ಸರಕಾರಗಳಿಗೆ ಸಂದರ್ಭ ಕಲ್ಪಿಸಿಕೊಡಬೇಕು. ಹಿಂಸೆ ಪ್ರತೀಕಾರಗಳೇ ಇಂದಿನ ಮಾನ್ಯ ತತ್ವಗಳೆಂದಾದರೆ ಕ್ರಮಬದ್ಧವಾದ ಸಂಗ್ರಾಮವೇ ಜರುಗಲಿ, ಅಂತೂ ಎರಡೂ ಪಕ್ಷಗಳಲ್ಲೂ ಈ ಅನಾಗರಿಕ ಕೃತ್ಯಗಳು ನಿಲ್ಲುವಂತಾಗಬೇಕು. ಗಾಂಧೀಜಿಯ ಮತದಂತೆ ಜೀವನದ ಒಂದೇ ಒಂದು ನಿಜವಾದ ಸೂತ್ರವೆಂದರೆ ಕೇಡಿಗೆ ಪ್ರತಿಯಾಗಿ ಒಳ್ಳೆಯದನ್ನು ಮಾಡುವುದು. ಈ ಎರಡು ಪಕ್ಷಗಳು ಅವರ ಮಾತನ್ನು ನಡೆಸುವುವೇ?

ಇಂದಿನ ಅರಾಜಕತೆಯ ಪರಿಣಾಮವೆಂದರೆ ಮೊದಲಿನಕಿಂತಲೂ ದುಸ್ಸಹವಾದ ದಾಸ್ಯದ ಪುನರಾಗಮನವೇ ಆಗಿದೆ ಎಂಬುದನ್ನು ಭರತಖಂಡದ ಪ್ರಜೆಗಳು ಅರಿಯಬೇಕು. "ಆದಿನವನ್ನು ನೋಡಲು ನಾನು ಬದುಕಿರಲಪೇಕ್ಷಿಸುವದಿಲ್ಲ" ಎನ್ನುತ್ತಾರೆ ಗಾಂಧೀಜಿ. ಅವರ ಆ ಮನೋವೇದನೆಯಲ್ಲಿ ಬಹಳ ಜನ ಭಾಗಿಗಳಾಗಿದ್ದಾರೆ; ನಾವು ಸ್ವಾತಂತ್ರ್ಯವನ್ನು ಗೆಲ್ಲಲು ಅದ್ಭುತವಾದ ತ್ಯಾಗಮಾಡಿದ್ದೇವೆ. ಆ ಕಷ್ಟಾರ್ಜಿತವಾದಸ್ವಾತಂತ್ರ್ಯಕ್ಕಾಗಿ ನೀಡಿದ ಬಯಕೆಯನ್ನು ತ್ಯಜಿಸುವುದು ಬಹಳ ಹೆಚ್ಚಿನದಾದೀತೇ?

ಹೊಸದಿಲ್ಲಿ —ಸುಶೀಲಾ ನಯ್ಯರ

೧೫—೯—೪೭

ಒಕ್ಕೂಟದಲ್ಲಿಯ ಮುಸಲ್ಮಾನರಿಗೆ

(೯ ನೇ ಪುಟದಿಂದ)

ಗಾಗಿ ಒಬ್ಬ ಮುಸಲ್ಮಾನನೂ ಹಿಂದುಸ್ತಾನವನ್ನು ಬಿಟ್ಟು ಹೋಗುವದನ್ನು ನಾನು ಬಯಸುವದಿಲ್ಲ. ತಾವು ಒಕ್ಕೂಟದ ನಿಷ್ಠ ಪ್ರಜೆಗಳೆಂದು ದಿಲ್ಲಿಯ ಮುಸಲ್ಮಾನರು ನನಗೆ ಬರೆದು ಕೊಟ್ಟಿದ್ದಾರೆ. ಇನ್ನೊಬ್ಬರು ನನ್ನಮಾತಿನಲ್ಲಿ ವಿಶ್ವಾಸವಿಡಬೇಕೆಂಬ ನನ್ನ ಅಪೇಕ್ಷೆಯಂತೆ ನಾನು ಅವರ ಆ ಘೋಷಣೆಯಲ್ಲಿ ನಂಬಿಗೆಯಿಡುತ್ತೇನೆ. ಹಾಗಿರುವಾಗ ಅವರ ರಕ್ಷಣೆಯ ಹೊರೆ ಹೊರುವುದು ಸರಕಾರದ ಕರ್ತವ್ಯ. ಅದನ್ನು ಸಾಧಿಸಲಾಗದಿದ್ದರೆ ನಾನು ಬದುಕಲು ಬಯಸುವದಿಲ್ಲ. ಎಲ್ಲೇ ಇರಲಿ, ತಪ್ಪನ್ನು ತಿದ್ದಿಯೆ ತೀರಬೇಕು. ಅಪಹೃತ ಸ್ತ್ರೀಯರನ್ನು ತಿರುಗಿತಂದುಕೊಡಬೇಕು. ಬಲಾತ್ಕಾರ ಮತಾಂತರವು ನಿರರ್ಥಕವೆಂದು ತಿಳಿಯಲ್ಪಡಬೇಕು. ಪಾಕಿಸ್ತಾನ ಮತ್ತು ಒಕ್ಕೂಟಗಳಲ್ಲಿ ಯಾವ ಧರ್ಮಕ್ಕೆ ಸೇರಿದವಳೇ ಆಗಲಿ, ಒಬ್ಬಳು ಚಿಕ್ಕಹುಡುಗಿಯೂ ಅರಕ್ಷಿತಳಾಗಿರದಂತಹ ಸನ್ನಿವೇಶವನ್ನು ಉಂಟುಮಾಡಬೇಕು. ಖಲಿಕುಜ್ಜಮಾನರ ಹಾಗೂ ಮುಜಫರನಗರದ ಮುಸಲ್ಮಾನರ ಹೇಳಿಕೆಯನ್ನು ಓದಿ ಆನಂದಿಸಿದೆ. ಪಾಕಿಸ್ತಾನಕ್ಕೆ ಹೋಗುವ ಮುನ್ನ ನಾನು ದಿಲ್ಲಿಯಲ್ಲಿಯ ದಾವಾನಲವನ್ನು ಶಾಂತಗೊಳಿಸಬೇಕಾಗಿದೆ. ಹಿಂದುಸ್ತಾನ ಪಾಕಿಸ್ತಾನಗಳು ಎಂದೆದೂ ಹಗೆಗಳಾಗಿಯೇ ಉಳಿದು ಪರಸ್ಪರರ ಮೇಲೇರಿ ಹೋಗುತ್ತಿದ್ದರೆ ಅದು ಎರಡೂ ಸಾಮಂತ ರಾಜ್ಯಗಳ ನಾಶಕ್ಕೆ ಕಾರಣವಾಗುವುದಲ್ಲದೆ ಕಷ್ಟಪಟ್ಟು ಸಂಪಾದಿಸಿದ ಸ್ವಾತಂತ್ರ್ಯವು ಕ್ಷಣಾರ್ಧದಲ್ಲಿ ಕಳೆದುಹೋಗುವುದು. ಅಂಥ ದಿನವನ್ನು ನೋಡಲು ನಾನು ಬದುಕಿರಬಾರದೆಂದು ನನ್ನ ಅಪೇಕ್ಷೆ."

ಅನಂತರ ಮೌಲಾನಾ ಅಹ್ಮದ್ ಸಯ್ಯದರು ಅನಧಿಕೃತ ಶಸ್ತ್ರಗಳನ್ನು ಒಪ್ಪಿಸಲಾಗುವಂತೆ ನೋಡಿಕೊಳ್ಳಲು ಮುಸ್ಲಿಮರಿಗೆ ಬಿನ್ನವಿಸಿಕೊಂಡರು. ಅಲ್ಲಿಂದ ಹೊರಡುವದರೊಳಗೆ ಗಾಂಧೀಜಿಯನ್ನು ಕೆಲವು ಘೋಷಾಸ್ತ್ರೀಯರಿರುವಲ್ಲಿಗೆ ಕರೆದೊಯ್ಯಲಾಯಿತು. ಅವರೆಲ್ಲರೂ ಅವರ ಮೇಲೆಯೇ ಭರವಸೆಯನ್ನಿಟ್ಟಿರುವುದಾಗಿ ಹೇಳಿದರು. ಅದಕ್ಕೆ ಉತ್ತರವಾಗಿ ದೇವರಮೇಲಲ್ಲದೆ ಅನ್ಯರಮೇಲೆ ಅವಲಂಬಿಸಬಾರದೆಂದೂ ತಾವು ತಮ್ಮ ಶಕ್ತಿಮೀರಿ ಮಾಡತಕ್ಕದ್ದನ್ನು ಮಾಡಲು ಪ್ರಯತ್ನಿಸುವದಾಗಿಯೂ ಅವರಿಗೆ ಗಾಂಧೀಜಿ ಹೇಳಿದರು.

ರಾಷ್ಟ್ರೀಯ ಸೇವಕ ಸಂಘದ ಸದಸ್ಯರಿಗೆ

(೭ನೇ ಪುಟದಿಂದ)

ಳೆಂದೂ ತಾವೇನೂ ಸರಕಾರವಲ್ಲೆಂದೂ ಅವರು ಹೇಳಿದರು. ಮನೆಬಿಟ್ಟು ಹೋಗಬೇಡಿರೆಂದು ಹಿಂದೂ ಶೀಖರಿಗೆ ಬಿನ್ನವಿಸಿಕೊಂಡು ಅವರ ಸಂಪೂರ್ಣ ಸುರಕ್ಷಿತತೆಯನ್ನು ಪಾಕಿಸ್ತಾನವೇಕೆ ನಡೆಸಿಕೊಡಲಿಲ್ಲ? ಹಿಂದೀ ಒಕ್ಕೂಟದಲ್ಲಿ ಅವರೇಕೆ ಪ್ರತಿಯೊಬ್ಬ ಮುಸ್ಲಿಮನ ಸುರಕ್ಷಿತತೆಗೆ ಹೊಣೆಯಾಗಲಿಲ್ಲ?

ಇಂದು ಎರಡೂ ಪಕ್ಷಗಳು ಭ್ರಮಿಷ್ಟರಾದಂತೆ ತೋರುತ್ತದೆ. ಅದರ ಪರಿಣಾಮವು ವಿನಾಶ ಹಾಗೂ ದುಃಖವಲ್ಲದೆ ಬೇರೆಯಾಗಲಾರದು.

ಮಾತು ಮತ್ತು ಕೃತಿ

ಸಂಘವು ಸುಸಂಘಟಿತವೂ ಸುನಿಯತವೂ ಆದ ಒಂದು ಜನಮಂಡಲ. ಅದರ ಶಕ್ತಿಯನ್ನು ಹಿಂದುಸ್ತಾನದ ಹಿತದ ಪರವಾಗಿ ಇಲ್ಲವೆ ವಿರುದ್ಧವಾಗಿ ಬಳಸಬಹುದು.

ಸಂಘದ ವಿರುದ್ಧ ಮಂಡಿಸಿದ ಆಪಾದನೆಗಳಲ್ಲಿ ಸತ್ಯಾಂಶವಿದೆಯೋ ಇಲ್ಲವೋ ತನಗೆ ತಿಳಿಯದೆಂದು ಗಾಂಧೀಜಿ ಹೇಳಿದರು. ಆಪಾದನೆಗಳಿಗೆ ಬುಡವಿಲ್ಲವೆಂಬುದನ್ನು ತನ್ನ ಅವ್ಯಾಹತ ಹಾಗೂ ಏಕರೂಪದ ನಡತೆಯಿಂದ ಸಂಘವು ತೋರಿಸಿಕೊಡಬೇಕು.

ಯಾರು ಶಿಕ್ಷಿಸಬಲ್ಲರು

ಉಪಸಂಹಾರ ಕಾಲದಲ್ಲಿ ಗಾಂಧೀಜಿ ಪ್ರಶ್ನೆಗಳಿದ್ದರೆ ಉತ್ತರಿಸುವುದಾಗಿ ಹೇಳಿದರು. ದುರ್ಜನನನ್ನು ಕೊಲ್ಲಲು ಹಿಂದು ಧರ್ಮದ ಅಪ್ಪಣೆಯಿದೆಯೇ? ಎಂದು ಒಬ್ಬ ಕೇಳಿದ. ಅಪ್ಪಣೆಯಿದೆ ಮತ್ತು ಇಲ್ಲ— ಎಂದು ಹೇಳಿ ಹಿಂದು ಧರ್ಮವು ಒಬ್ಬ ದುರ್ಜನನಿಗೆ ಇನ್ನೊಬ್ಬನನ್ನು ಕೊಲ್ಲಲು ಅಪ್ಪಣೆ ಕೊಡದೆಂದು ಗಾಂಧೀಜಿ ಉತ್ತರಿಸಿದರು. ಶಿಕ್ಷಿಸುವುದು ಸರಕಾರದ ಕೆಲಸ, ಜನತೆಯದಲ್ಲ ಎಂದು— ಅವರು ಸಾರಿದರು.

ಮುಂಬಯಿ

ಮುಂಬಯಿ ಪ್ರಾಂತದ ಗವರ್ನರ ಸರ್ ಜಾನ ಕಾಲ್ವಿಲ್ ೨೨ ನೇ ತಾರೀಕು ರಾತ್ರಿ ಲಂಡನಿನಿಂದ ಮುಂಬಯಿಗೆ ಬಂದರು.

ಡ್ರಾವರ ಆನ್ ಶಾಖೆಗಳ ೩೦೦೦ ಕೆಲಸಗಾರರು ಸಂಪು ಹೂಡಿದ್ದರಿಂದ ಮುಂಬಯಿಯ ಅನೇಕ ಗಿರಣಿಗಳಿಗೆ ಇದರ ಧಕ್ಕೆತಗಲಿದೆ. ನಗರದ ೬೮ ಗಿರಣಿಗಳಲ್ಲಿ ೯ ಗಿರಣಿಗಳು ಮಾತ್ರ ೨೩ ಕ್ಕೆ ಪೂರ್ಣವಾಗಿ ನಡೆಯುತಿದ್ದುವು. ೪೫ ಗಿರಣಿಗಳಲ್ಲಿ ಅರ್ಧಮರ್ಧ ಕೆಲಸ ನಡೆಯುತಿದ್ದು ೧೧ ಗಿರಣಿಗಳು ಪೂರ್ಣ ಮುಚ್ಚಿರುತ್ತವೆ.

೮೫೯೦೦ ಟನ್ ಗೋದಿಹಿಟ್ಟು ಅಕ್ಕಿ ಮೊದಲಾದ್ದನ್ನು ಹೇರಿಕೊಂಡು ೧೪ ಹಡಗಗಳು ಕಳೆದ ದಿನಗಳಲ್ಲಿ ಮುಂಬಯಿಗೆ ಬಂದಿವೆ. ಇವುಗಳಲ್ಲಿ ಹೆಚ್ಚಿನ ಭಾಗ ಮುಂಬಯಿಯುದಿರುವದು.

ಮುಂಬಯಿ ಸಿ ಆಯ ಡಿಯ ಲಂಚ ನಿರ್ಮೂಲನ ಶಾಖೆಯವರು ತಾ. ೨೦ ರಾತ್ರಿ ಸಿವರಿಯಲ್ಲಿ ಒಂದು ವಖಾರಕ್ಕೆ ಮುತ್ತಿಗೆ ಹಾಕಿ ೮ ಲಕ್ಷ ರೂಪಾಯಿ ಬೆಲೆಯ ೫೦೦ ಗಂಟು ನೂಲನ್ನು ಜಪ್ತ ಮಾಡಿದರು. ೧೧ ಜನರು ಬಂಧಿಸಲ್ಪಟ್ಟಿರುವರು. ಸೆರೆಹಿಡಿಯಲ್ಪಟ್ಟವರ ಈ ಗಂಟುಗಳಲ್ಲದಿದ್ದರೂ ಅವರು ವಖಾರದ ಕೀಲಿ ಮುರಿದು ಹೆಚ್ಚಿನ ಧಾರಣೆಯಿಂದ ನೂಲಿನ ಮಾರಾಟ ನಡೆಸಿದ್ದಾರೆಂದು ಆರೋಪವಿದೆ.

ಪಾಕಿಸ್ತಾನದಲ್ಲಿ ನೋಕರಿ ಮಾಡಲು ಆರಿಸಿಕೊಂಡ ಜಿ ಆಯ ಪಿ ರೇಲ್ವೆಯ ಸುಮಾರು ೬೦ ಮುಸಲ್ಮಾನರು ಸೊಲ್ಲಾಪುರ ಭುಸಾವಳ ನಾಗಪುರ ಝಾಂಶಿ ಮೊದಲಾದ ಭಾಗಗಳಿಂದ ಕರಾಚಿಗೆ ಹೋಗಲು ಮುಂಬಯಿಗೆ ಬಂದಿದ್ದಾರೆ.

ಹಿಂದುಸ್ತಾನದ ರಿಝರ್ವ ಬ್ಯಾಂಕಿನವರು ಹೊಸ ಮಾದರಿಯ ಐದು ರೂಪಾಯಿಗಳ ನೋಟುಗಳನ್ನು ಹೊರಡಿಸಲಿದ್ದಾರೆ. ಅದಕ್ಕೆ ಕೇಂದ್ರ ಸರಕಾರದವರ ಅಜ್ಞೆ ದೊರೆತಿದೆ.

ಮುಂಬಯಿ ಸರಕಾರದ ೧೪ ನೇ ತಾರೀಕಿನ ಗ್ಯಾಝೆಟನಲ್ಲಿ ಮುಂಬಯಿ ಭಿಕ್ಷುಕರ ಕಾನೂನು ೧೯೪೫ ಇದನ್ನು ರದ್ದುಗೊಳಿಸಿ ಹೊಸ ಕಾನೂನು ಮಾಡುವ ಮಸೂದೆಯನ್ನು ಪ್ರಸಿದ್ಧಿಸಲಾಗಿದೆ.

ಆಯ. ಆಯ. ಚುಂದ್ರಿಗಾರರ ರಾಜೀನಾಮೆಯಿಂದ ತೆರವಾದ ಹಿಂದುಸ್ತಾನ ಘಟನಾ ಸಮಿತಿಯ ಸದಸ್ಯತ್ವಕ್ಕೆ ಮುಸ್ಲಿಂ ಲೀಗಿನ ಎ. ಎ ಖಾನ ಇವರೊಬ್ಬರೇ ಅರ್ಜಿಕೊಟ್ಟದ್ದರಿಂದ ಅವರು ಅವಿರೋಧ ಆರಿಸಿ ಬಂದಿರುವರು.

ಮುಂಬಯಿ ಸರಕಾರೀ ನೋಕರರ ಮಹಾಮಂಡಳದ ಕಾರ್ಯಸಮಿತಿಯು ಕೂಡಿ ಸಂಬಳದ ಪ್ರಮಾಣವನ್ನು ಪುನರ್ವಿಮರ್ಶಿಸಬೇಕು, ತಾತ್ಪೂರ್ತಿಕ ನೋಕರರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಬೇಕು, ಅಗಸ್ಟ ೪ ಕ್ಕೆ ಹೊರಡಿಸಿದ ಪ್ರಕಟನೆಯಲ್ಲಿಯ ಅಭಿವಚನಗಳನ್ನು ಪಾಲಿಸಬೇಕು ಎಂದು ಸರಕಾರವನ್ನು ಕೇಳಿಕೊಳ್ಳಬೇಕೆಂದು ನಿರ್ಣಯಿಸಿತು.

ಪುಣೆ ಮುನಸಿಪಾಲಟಿಯ ಅಧ್ಯಕ್ಷರಾದ ಶ್ರೀ ಎನ್. ಎನ್. ಸನಸ ಇವರು ೨೪ ಕ್ಕಿಂತ ಹೆಚ್ಚು ಜನರಿಗೆ ಊಟಕ್ಕೆ ಹಾಕಿದರೆಂದು ಪೋಲೀಸರು ಹಾಕಿದ ಖಟ್ಲೆಯ ವಿಚಾರಣೆ ಮುಗಿದು ಪುರಾವೆಗಳು ಸಾಕಷ್ಟು ಸಬಲವಿರದ್ದರಿಂದ ಆರೋಪಿಗಳಿಗೆ ಸಂಶಯದ ಲಾಭಕೊಟ್ಟು ಬಿಡುಗಡೆ ಮಾಡಿದರು.

ಮುಂಬಯಿ ಪ್ರಾಂತದಲ್ಲಿಯ ಲೋಕಲ್ ಬೋರ್ಡಮುನಸಿಪಾಲಟಿಗಳೇಮೊದಲಾದಸ್ಥಾನಿಕ ಸಂಸ್ಥೆಗಳೆಲ್ಲ ಚುನಾವಣೆಯನ್ನು ಸಂಯುಕ್ತ ಮತದಾರ ಸಂಘಗಳ ಮುಖಾಂತರ ನಡೆಸಬೇಕೆಂದು ಮುಂಬಯಿ ಸರಕಾರ ನಿರ್ಧರಿಸಿದೆ.

ಮಧ್ಯಪ್ರಾಂತ

ವರ್ಧಾದ ಹತ್ತರ ಹಿಂಗಣಘಾಟ ಎಂಬಲ್ಲಿ ಪೋಲೀಸರು ಕೆಲ ಮನೆಗಳನ್ನು ಝಡತಿ ಮಾಡಲಾಗಿ ೨೫ ಕಾಡತೂಸುಗಳು ೧ ಪಿಸ್ತೂಲು ೪೫ ಚೂರಿಗಳು ಮತ್ತು ಒಂದು ಕತ್ತಿಯು ಸಿಕ್ಕವು.

ಜಬ್ಬಲಪುರದ ಪೋಲೀಸ ಅಧಿಕಾರಿಗಳ ಉಚ್ಚ ವರ್ಗದ ಇಬ್ಬರು ಬ್ರಿಟಿಶ ಸೇನಾಧಿಕಾರಿಗಳ ಮನೆಯನ್ನು ಅಕಸ್ಮಾತ್ತಾಗಿ ಝಡತಿ ಮಾಡಲು ಲೈಸನ್ಸಿಲ್ಲದ ಅನೇಕ ಬಂದೂಕುಗಳೂ ಅಪಾರ ಮದ್ದು ಗುಂಡುಗಳೂ ದೊರೆತವು. ಆ ಇಬ್ಬರು ಸೇನಾಧಿಕಾರಿಗಳನ್ನು ಬಂಧಿಸಲಾಗಿದೆ. ಅವರು ಪಾಕಿಸ್ತಾನಕ್ಕೆ ಇಷ್ಟರಲ್ಲಿಯೆ ತೆರಳಲಿದ್ದರು.

ಭಾರತವು ಸ್ವಾತಂತ್ರ್ಯವನ್ನು ಪಡೆದ ನಿಮಿತ್ತ ಮಧ್ಯಪ್ರಾಂತ ಸರಕಾರದವರು ಹೈಸ್ಕೂಲು ಮತ್ತು ವಿಶ್ವವಿದ್ಯಾಲಯಗಳ ಪರೀಕ್ಷೆಗಳಲ್ಲಿ ಈ ಮೊದಲು ತೇರ್ಗಡೆ ಹೊಂದದಿದ್ದ ಎಲ್ಲ ವಿದ್ಯಾರ್ಥಿಗಳಿಗಾಗಿ ಮತ್ತೆ ಪರೀಕ್ಷೆಗಳನ್ನು ಏರಡಿಸಲು ನಿರ್ಧರಿಸಿರುವರೆಂದೂ ಈ ಪರೀಕ್ಷೆಗಳು ಇದೇ ನವಂಬರದಲ್ಲಿ ನಡೆಯುವವೆಂದೂ ತಿಳಿಯುತ್ತದೆ.

ಹಿಂದುಸ್ಥಾನ

ಹೊಸದಿಲ್ಲಿ

ಪ್ರತಿಯೊಬ್ಬನಿಗೆ ಯುದ್ಧಪೂರ್ವದಲ್ಲಿ ೧೭॥ ಗಜ ಬಟ್ಟೆ ಸಿಕ್ಕುತಿದ್ದುದನ್ನು ಲಕ್ಷಿಸಿದರೆ ಈಗ ಭಾರತ ಪಾಕಿಸ್ತಾನಗಳಲ್ಲಿ ಒಟ್ಟು ೨೩ ಲಕ್ಷ ಗಜದಷ್ಟು ಬಟ್ಟೆಯ ಕೊರತೆಯಿದೆಯೆಂದು ಅಂದಾಜ ಮಾಡಲಾಗಿದೆ.

ಜುನಾಗಡವು ಪಾಕಿಸ್ತಾನದಲ್ಲಿ ಸೇರುವದು ಹಿಂದುಸ್ತಾನ ಸರಕಾರದ ದೃಷ್ಟಿಯಿಂದ ವಿಘಾತಕವಾಗಿದೆ. ಜುನಾಗಡದ ಸೇನೆಯು ಹಿಂದೀ ಒಕ್ಕೂಟ ಸರಕಾರಕ್ಕೆ ಸೇರಿದ ಬಾಬರಿ ವಾಡ ಹದ್ದಿನಲ್ಲಿ ಸೇರಿ ಅನ್ಯಾಯ್ಯ ಆಕ್ರಮಣವನ್ನು ಮಾಡಿದ್ದುಂಟು. ಅದರ ಬಗ್ಗೆ ಹಿಂದೀ ಸರಕಾರ ಸ್ವಸ್ಥ ಕುಳಿತರೆ ಇಂಥವುಗಳಿಗೆ ಕೊನೆಯೆ ಆಗಲಾರದು ಎಂದು ಮುಂತಾಗಿ ನವಾ ನಗರದ ಜಾಮ ಸಾಹೇಬರು ಹಿಂದೀ ಒಕ್ಕೂಟ ಸರಕಾರಕ್ಕೆ ನಿವೇದಿಸಿದ್ದಾರೆ.

ಪಶ್ಚಿಮ ಪಂಜಾಬದಿಂದ ಪೂರ್ವ ಪಂಜಾಬಕ್ಕೆ ಹೊರಟ ನಿರ್ವಾಸಿತರು ದಾರಿಯಲ್ಲಿಯೆ ಸಿಕ್ಕು ಬಿದ್ದಿರುವರಷ್ಟೆ. ಅವರಿಗಾಗಿ ಹಿಂದೀ ಒಕ್ಕೂಟ ಸರಕಾರದವರು ೧೨ ಸಾವಿರ ಚಪಾತಿಗಳನ್ನು ವಿಮಾನದೊಳಗಿಂದ ಕೆಳಗೆ ಕೊಟ್ಟರು. ಹಿಂದುಸ್ತಾನದ ಸೇನಾಪತಿಗಳಾದ ಸರ್ ರಾಬ ಲಾಕಹಾರ್ಡರು ಪೂರ್ವ ಪಂಜಾಬ ಪರಿಸ್ಥಿತಿಯನ್ನು ನಿರೀಕ್ಷಿಸುತಿರುವರು.

ಪತಿಯಾಳಾ ಸರಕಾರವು ಎರಡು ಲಕ್ಷ ನಿರ್ವಾಸಿತರಿಗೆ ಸಹಾಯ ಮಾಡಲು ನಿರ್ಧರಿಸಿದೆ.

ಜುನಾಗಡದ ಜಹಾಗೀರದಾರರಾದ ಮುಂಗೋಲದ ಶೇಖ ಸಾಹೇಬರು ಹಿಂದೀ ಒಕ್ಕೂಟವನ್ನು ಸೇರಿದ್ದಾರೆ.

ಹಿಂದುಸ್ತಾನ ಮತ್ತು ಪಾಕಿಸ್ತಾನಗಳಲ್ಲಿ ಗಲಭೆ ಪ್ರದೇಶಗಳಲ್ಲಿ ಶಾಂತಿಯನ್ನು ಬೀರಲು ಒಂದೊಂದು ನೂರು ಸ್ವಯಂಸೇವಕರು ಬೇಕಾಗಿದ್ದಾರೆಂದು ಮೌಲಾನಾ ಅಬುಲ್‌ಕಲಂಅಝಾದರು ಹೇಳಿದ್ದಾರೆ.

ಘಟನಾ ಸಮಿತಿಯು ಮುಂದಿನ ಅಧಿವೇಶನವನ್ನು ನವಂಬರ ೧೭ಕ್ಕೆ ಕರೆಯಲಾಗಿದೆ. ಈ ಅಧಿವೇಶನದಲ್ಲಿ ಘಟನಾ ಸಮಿತಿಯು ಕಾಯಿದೆ ಮಂಡಳವಾಗಿ ಕಾರ್ಯ ನಡೆಸುವದು.

ಹಿಂದುಸ್ತಾನ ಸರಕಾರವು ಬ್ರಿಟಿಶ ಸರಕಾರದ ಒಪ್ಪಿಗೆಯಿಂದ ಪಾಂಡಿಚೇರಿಯಲ್ಲಿನ ರಾಯಭಾರಿ ಕಚೇರಿಯನ್ನು ತಮ್ಮ ವಶಮಾಡಿಕೊಂಡು ತಮ್ಮ ಕಚೇರಿಯನ್ನು ಸ್ಥಾಪಿಸಿದ್ದಾರೆ. [illegible]

ಮದ್ರಾಸ

[illegible] ಮದ್ರಾಸ ಪ್ರಾಂತಕ್ಕೆ ಅಕ್ಟೋಬರ ತಿಂಗಳಿಗಾಗಿ ೯೦೦೦ ಟನ್ ಅಕ್ಕಿ ೧೦ ಸಾವಿರ ಟನ್ ಗೋದಿ ಹಾಗೂ ತಜ್ಜನ್ಯ ಪದಾರ್ಥ ೪೦೦೦ ಟನ ಕೊಟ್ಟಿದ್ದಾರೆ.

ಮದ್ರಾಸ ಆಹಾರ ಪರಿಸ್ಥಿತಿ ಕೆಟ್ಟಿದ್ದರಿಂದ [illegible] ಸರಕಾರಕ್ಕೆ ಸಹಾಯ ಬೇಡಬೇಕೆಂದು ಆಹಾರ ಮಂತ್ರಿ [illegible] ಮದ್ರಾಸ [illegible] ಆಹಾರ [illegible] ಉತ್ತರ ಕೊಡುತ್ತ ಹೇಳಿದರು. [illegible] ಸಹಾಯ [illegible] ನೂರು ದಿನಗಳೊಳಗೆ [illegible] ಟನ್ ಸಂಗ್ರಹಿಸಬೇಕಾಗಿದೆಂದು ಅವರು ಹೇಳಿದರು.

[illegible] ಪ್ರದೇಶಗಳಲ್ಲಿ [illegible] ಮತ್ತು [illegible] ತೆರೆಯಲು ಮದ್ರಾಸ ಸರಕಾರ ನಿರ್ಧರಿಸಿದೆ. ಪ್ರಾರಂಭದಲ್ಲಿ ಸರಕಾರವು ೧೯೦೦ [illegible] ತೆರೆಯಲಿದ್ದು ಅದಕ್ಕೆ [illegible] ರೂಪಾಯಿಗಳ ವೆಚ್ಚ ತಗಲುವದೆಂದು ತಿಳಿಯುತ್ತದೆ.

ಮದ್ರಾಸ ಸರಕಾರವು ಎರಡು ಕೋಟಿ ರೂಪಾಯಿ ವೆಚ್ಚ ಮಾಡಿ ಅಮೇರಿಕೆಯಿಂದ ವಿದ್ಯುತ್ ಯಂತ್ರಗಳನ್ನು ತರಿಸಲಿದೆಯೆಂದೂ ಅವು ಬಂದ ನಂತರ ಆಧುನಿಕ ಸಾಧನಗಳನ್ನು ಪಯೋಗಿಸಿ ಆಹಾರೋತ್ಪಾದನೆಯನ್ನು ಹೆಚ್ಚಿಸಲು ಅನುಕೂಲವಾಗುವಂತೆ ಎಲ್ಲ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರಯಿಸಲಾಗುವದೆಂದೂ ಶಾಸನ ಸಭೆಯಲ್ಲಿ ಘೋಷಿಸಲಾಯಿತು.

ಅವರ ಸ್ಥಳದಲ್ಲಿ ಗೋವೆಯಲ್ಲಿ [illegible] ನೇಮಿಸಲಾಗುವದು.

ಹಿಂದುಸ್ತಾನ ಸರಕಾರವು [illegible] ಯುದ್ಧೋತ್ತರ ಪುನರ್ಯೋಜನೆಗೆ [illegible] ಲಕ್ಷ ರೂಪಾಯಿ ಕೊಡಲು ಮಂಜೂರ ಮಾಡಿದ್ದಾರೆ.

ಅಸಾಮ ಶಾಸನ ಸಭೆಯ ಅಧ್ಯಕ್ಷರಾದ ಶ್ರೀ [illegible] ಇವರನ್ನು [illegible] ದಲ್ಲಿ ಹಿಂದುಸ್ತಾನ ಸರಕಾರದ [illegible] ನೇಮಿಸಲಾಗಿದೆ.

ಪಾಕಿಸ್ತಾನದ ಮುಖ್ಯ ಮಂತ್ರಿಗಳಾದ [illegible]

ಶ್ರೀ ರಾಘವೇಂದ್ರ ಸ್ವಾಮಿಗಳಿಗೆ ಬೆಳ್ಳಿಯ ರಥ



ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ರಥೋತ್ಸವಕ್ಕಾಗಿ ಕೊಟ್ಟಯೂರಿನ ಶ್ರೀಮಂತ ರಾಮನಾಥ ಚೆಟ್ಟಿಯವರು [illegible] ರೂಪಾಯಿ ವೆಚ್ಚ [illegible] ಈ ಬೆಳ್ಳಿಯ ರಥವನ್ನು ಸಮರ್ಪಿಸಿರುವರು. ಈ ವರುಷದ ಉತ್ಸವದಲ್ಲಿ ಈ ರಥೋತ್ಸವ ಜರುಗಿತು.

ಪಾಕಿಸ್ತಾನ

ಸಿಂಧ

ಹಿಂದುಸ್ತಾನ ಸರಕಾರವು ಪಾಕಿಸ್ತಾನದ ಸರಕಾರವನ್ನು ಆರೋಪಿಸುತಿರುವದು ಬಿಷಾದಕರವಾದುದು. ಪಾಕಿಸ್ತಾನ ಸರಕಾರದವರು ಈ ಆರೋಪಗಳನ್ನು ಅಲ್ಲಗಳೆಯುತಿದ್ದರೂ ಈ ವಿವಾದದಲ್ಲಿ ಬೀಳುವ ಮನಸ್ಸು ಅವರಿಗಿಲ್ಲ. ನಿಷ್ಪಕ್ಷಪಾತ ವಿಚಾರಣಾ ಮಂಡಳದೆದುರಿಗೆ ತನ್ನ ಪಕ್ಷವನ್ನು ಮಂಡಿಸಲು ಆ ಸರಕಾರ ಸಿದ್ಧವಿದೆ ಎಂದು ಮುಂತಾಗಿ [illegible] ಅಭಿಪ್ರಾಯ ಪಟ್ಟಿರುವರು.

ಸಂಯುಕ್ತಪ್ರಾಂತದ ಔದ್ಯೋಗಿಕ ಕೇಂದ್ರಗಳಿಂದ ಮತ್ತು ಮುಂಬಯಿಯಂಥ ಔದ್ಯೋಗಿಕ ನಗರದಿಂದ ಮುಸಲ್ಮಾನ ನಿರಾಶ್ರಿತರು ದೊಡ್ಡ [illegible]

[illegible]

ಪೂರ್ವ ಬಂಗಾಲ

[illegible]

ಕೇಂದ್ರ ಶಾಸನ ಮಂಡಳ
ಮಹಾಜನರಲ್ಲಿ ಅರಿಕೆ

[illegible] ಒಕ್ಕೂಟಕ್ಕೆ ಸಂಬಂಧವಿದ ವಿಷಯಗಳನ್ನು [illegible] ಪ್ರಶ್ನೆ ಮುಂತಾದವುಗಳನ್ನು ಕೇಳಿ ಅವಶ್ಯಕ ಸಂಗತಿಗಳನ್ನು ತಿಳಕೊಳ್ಳುವದಿದ್ದರೆ ಅದೇ ರೀತಿ ಯಾವದೊಂದು ವಿಷಯದ ಸಂಬಂಧದಿಂದ ಹಟ್ಟಳೆ ಕಾನೂನು ಆಗಬೇಕೆಂದು ಯಾರಾದರೂ ಇಷ್ಟಪಟ್ಟದ್ದರೆ ಅವರು ಇಂದಿನಿಂದ ಅಕ್ಟೋಬರ ೧೦ನೇ ತಾರೀಖಿನ ಒಳಗಾಗಿ ಪತ್ರದ್ವಾರಾ ನನ್ನ ಕಡೆಗೆ ಆಯಾ ವಿಷಯಗಳನ್ನು ತಿಳಿಸಬೇಕು.

—ಶ್ರೀ [illegible]
ಸದಸ್ಯ, ಕೇಂದ್ರ [illegible]
[illegible]

ಓಜಾರ್ಕ್ಸ್ ಉದ್ಯಾನವನದಲ್ಲಿ

ಲೇ:—ಶ್ರೀ ನಾಡಿಗ ಕೃಷ್ಣಮೂರ್ತಿ

—ವಿಶೇಷ ಲೇಖನ —

ಅಮೇರಿಕದ ಸಂಯುಕ್ತ ಸಂಸ್ಥಾನಗಳಲ್ಲಿ ಮಿಸ್ಸೂರಿ ಸಂಸ್ಥಾನ ಪ್ರಕೃತಿ ಸೌಂದರ್ಯದ ನೆಲೆಂದು ಹೆಸರುವಾಸಿಯಾಗಿದೆ. ಮಿಸ್ಸೂರಿ ಮತ್ತು ಮಿಸ್ಸಿಸ್ಸಿಪ್ಪಿ ನದಿಗಳಿಂದಾವೃತವಾಗಿ ಅನೇಕ ಸುಂದರ ಉದ್ಯಾನವನಗಳನ್ನು ಪಡೆದು, ಅನೇಕ ರಮಣೀಯವಾದ ಸರೋವರಗಳಿಂದ ಶೋಭಿಸುತ್ತಿದೆ. ಇಂತಹ ಸರೋವರಗಳಲ್ಲಿ ಓಜಾರ್ಕ್ಸ್ ಸರೋವರವೂ ಒಂದು. ಮಿಸ್ಸೂರಿ ವಿಶ್ವವಿದ್ಯಾನಿಲಯದಲ್ಲಿನ ಅಂತರ್ ರಾಷ್ಟ್ರೀಯ ವಿದ್ಯಾರ್ಥಿಸಂಘದ ಸದಸ್ಯರಾದ ನಾವೆಲ್ಲ ಈ ಸರೋವರಕ್ಕೆ ಮೊನ್ನೆ ಜುಲೈ ೧೪ ಕ್ಕೆ ನೋಡಲು ಹೋಗಿದ್ದೆವು.

ಬಾಗ್‌ನೆಲ್ ಎಂಬ ಪಟ್ಟಣದ ಹತ್ತಿರ ಹರಿಯುವ ಒಸಾಗೋ ನದಿಗೆ ಒಂದು ದೊಡ್ಡ ಅಣೆಕಟ್ಟನ್ನು ಕಟ್ಟಿದ್ದಾರೆ. ಇದರ ಸುತ್ತಲೂ ಇರುವುದೇ ಓಜಾರ್ಕ್ಸ್ ಸರೋವರ. ಈ ಸರೋವರ [illegible] ಮೈಲು ಉದ್ದವಿದೆ. ೯೫ ಚದುರಮೈಲು ವಿಸ್ತಾರವಾಗಿದೆ. ಇದರ ದಂಡೆ ೧೩೦೦ ಮೈಲು ಚಾಚಿಕೊಂಡಿದೆ. ಇದರ ಸುತ್ತಲೂ, ಮಿಲ್ಲರ್, ಮಾರ್ಗನ್ [illegible] ಬೆನ್, ಮತ್ತು ಬೆಂಟನ್ ಜಿಲ್ಲೆಗಳಿವೆ. [illegible] ಕಟ್ಟು ಸುಪ್ರಸಿದ್ಧವಾದ ಸೆಂಟ್‌ಲೂಯಿಸ್ [illegible] ಕ್ಕೆ ೧೩೪ ಮೈಲಿಯೂ ಈ ಸಂಸ್ಥಾನದ [illegible]

[illegible]

ಅಮೇರಿಕದ [illegible]

[illegible]

ಸಾಮಾನ್ಯವಾಗಿ ಎಲ್ಲ ವಿದ್ಯಾರ್ಥಿಗಳ ಕೈಯಲ್ಲೂ [illegible]

[illegible]

ಅಂತರ್ ರಾಷ್ಟ್ರೀಯ [illegible] ಸಂಘದ [illegible] ಇಲ್ಲಿಯ ಕಾಲೇಜಿನಲ್ಲಿ ಎಂ. ಎಸ್. ಸಿ. ಪರೀಕ್ಷೆಗೆ [illegible]

ಬೆಳಗ್ಗೆ ೯ ಕ್ಕೆ ಬಂದಿತು. ದಾರಿಯಲ್ಲಿ ಬರುವಾಗ ಬಸ್ಸಿನಲ್ಲಿ ಅಂಜೂರದ ಹಣ್ಣು ತಿಂದೆವು. ದಕ್ಷಿಣ ಅಮೇರಿಕೆಯ ಹುಡುಗಿಯರು ಗಾನ ಮಾಡಿದರು. ಅಲ್ಲಲ್ಲಿ ಅನೇಕರು ಭಾವಚಿತ್ರ ತೆಗೆದುಕೊಂಡರು.

'ಮ್ಯಾಕ್ಸಿ ಕೇವ್' ಅರಣ್ಯಮಧ್ಯದಲ್ಲಿದೆ. ಅಮೇರಿಕದ ಹಿಂದಿನ ನಿವಾಸಿಗಳು ಈ ಸುರಂಗದಲ್ಲಿ ವಾಸವಾಗಿದ್ದರು. ನಾಲ್ಕು ಮೈಲು ಸುರಂಗದಲ್ಲಿ ನಡೆದರೂ ಏನೂ ಸಿಕ್ಕುವುದಿಲ್ಲ. ಕಗ್ಗತ್ತಲೆ. ಧೈರ್ಯವಂತರೆಂದು ಅಂದು ಕೊಂಡ ನಾವು ೩೦ ಜನ ಸುರಂಗ ಭೇದಿಸಲು ನಿರ್ಧರಿಸಿ ಅನೇಕ ಟಾರ್ಚ್ ದೀಪಗಳನ್ನು, ದಾಹ ಅಡಗಿಸಿಕೊಳ್ಳಲು ಕೋಕಕೋಲಗಳನ್ನು ತೆಗೆದುಕೊಂಡು ಹೊರಟೆವು. ಸುಮಾರು ೨ ಫರಲಾಂಗ ಹೋಗಿರಬಹುದು. ಮುಂದೆ ದಾರಿಯೇ ಕಾಣಲೊಲ್ಲದು. ಎಲ್ಲಿ ನೋಡಿದರೂ ಕಪ್ಪು ಕತ್ತಲೆ. ಕವಲುದಾರಿ ಬಂದಾಗ ಯಾವ ದಾರಿಯಲ್ಲಿ ಹೋಗಬೇಕೆಂಬುದೇ ತಿಳಿಯಲಿಲ್ಲ. ಅಂತೂ ಕೊನೆಯ ಧೈರ್ಯಮಾಡಿ, ದೇವರಮೇಲೆ ಭಾರಹಾಕಿ ಮುಂಬರಿದೆವು. ಸುರಂಗದಲ್ಲಿ ಒಂದು ಮೈಲಿನವರೆಗೂ ಹೋಗಿದ್ದಿರಬಹುದು. ಅಲ್ಲಿ ಒಂದು ದೊಡ್ಡ ಗುಂಡಿ ಬಂದಿತು. ಅಲ್ಲಿಂದ [illegible]

[illegible]

ಒಂದೆವು.

[illegible] Saturday Evening Post [illegible]

[illegible]

ಏಕಾಂಗಿಯ ಜೀವನ ಹೇಗೆ ನಡೆಸುತ್ತೀ? [illegible] Mountain [illegible] My Tavern [illegible]

[illegible] "My Choice" ... My Tavern Hut [illegible] Uncle Cummy [illegible]

[illegible] Uncle Cummy [illegible]

[illegible] Uncle

Cummy.

ಎರಡು ಘಂಟೆಗೆ ದಣಿದು ಬಂದಿದ್ದ ನಾವೆಲ್ಲ ಊಟ ಮುಗಿಸಿದೆವು. ಅಡಿಗೆ ಮಾಡಿದ ಆಹಾರವೆಂದರೆ ಮಾಂಸದ ಸಾರೊಂದೇ. ಉಳಿದ ಆಹಾರ ಅಂಗಡಿಯಿಂದಲೇ ತೆಗೆದುಕೊಂಡು ಬಂದಿದ್ದರು. ನಮಗಾಗಿ (ಮೂವರು) ಬೇರೆ ಕಡೆ ಆಹಾರ ಇಟ್ಟಿದ್ದರು. ಬ್ರೆಡ್, ಹಣ್ಣುಗಳು, ಟಟಾಟಿಯ ಉಪ್ಪೇರಿ,ಹಾಲು, ತರಕಾರಿ, ಮುಂತಾದವುಗಳು. ಉಳಿದವರು ಮಾಂಸದ ಸಾರು, ಮಾಂಸ, ತತ್ತಿ ಮುಂತಾದವುಗಳನ್ನು ಸೇವನೆ ಮಾಡಿದರು. ನಮ್ಮ ಹೊಟ್ಟೆ ತುಂಬಿತಾದರೂ, ನಮಗೆ ಊಟ ಮಾಡಿದ ತೃಪ್ತಿ ಬರಲಿಲ್ಲ.. Uncle Cumny ಗೆ ಸಲಾಮು ಹೊಡೆದು ಮೂರು ಘಂಟೆಯ ವೇಳೆಗೆ ಬಸ್ಸು ಹತ್ತಿ ಓಜಾರ್ಕ್ಸ್ ಸರೋವರಕ್ಕೆ ಹೋದೆವು.

ಓಜಾರ್ಕ್ಸ್! ಮೈಸೂರಿನ ಕೃಷ್ಣರಾಜಸಾಗರ! ಎಲ್ಲಿ ನೋಡಿದರೂ ಥಳ ಥಳ ಹೊಳೆಯುವ ನಾನಾ ತರಹದ ವಿದ್ಯುಚ್ಛಕ್ತಿಯ ದೀಪಗಳು ಮಕ್ಕಳಿಗೆ ಆಟವಾಡಲು ವಿಹಾರ ಕೇಂದ್ರಗಳು, ಆಹಾರ ಮಂದಿರಗಳು ವಿರಾಜಮಾನವಾಗಿದ್ದುವು! ಅಂದು ಭಾನುವಾರವಾದ್ದರಿಂದ ಸಾವಿರಾರು ಮಂದಿ ನಾನಾ ಕಡೆಗಳಿಂದ ಬಂದಿದ್ದರು. ಕಾರುಗಳ ಜಾತ್ರೆಯೇ ಸೇರಿದಂತಿತ್ತು—ನಮ್ಮಲ್ಲಿಯ ದನಗಳ ಪರಿಷೆಯ ಹಾಗೆ.

ಓಜಾರ್ಕ್ಸ್‌ದ ಈಜಾಡುವ ಸರೋವರಕ್ಕೆ ಹೋದೆವು. ನಮ್ಮಲ್ಲಿ ಅನೇಕರು ಈಜಾಡಲು ಸರೋವರದಲ್ಲಿಳಿದರು. ನಮ್ಮ ಕೂಡ ಬಂದ ತರುಣಿಯರೂ ಕೂಡ ಈಜಾಡಲು ಕೆಳಗಿಳಿದರು. ಹೆಂಗಸರು, ಗಂಡಸರು, ಮಕ್ಕಳು ಎಂಬ ಭೇದ ಭಾವನೆಯಿಲ್ಲದೆ ಈಜಾಡುತ್ತಿದ್ದ ಆ ಸರೋವರದ ದೃಶ್ಯ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಸ್ತ್ರೀಯರೂ ಬರೀ ಒಂದು ನಿಕ್ಕರನ್ನು ತಗಲಿಸಿಕೊಂಡು ಗಂಡಸಿನ ಕೂಡ ನೀರೊಳಗಿಳಿಯುವ ಸಂದರ್ಭ,ನಮ್ಮ ಭಾರತದಲ್ಲಿ ಸಾಧ್ಯವೇ ? ಕಾಡು ಜನ ಎಂದಾರು! ಅಮೇರಿಕದಲ್ಲಿಯ ಸಾಧಾರಣ ಈ ತೆರನಾದ ನಡತೆ ನೀತಿಯುಂಟಂತೆ. ದೇವರೇ ಕಾಪಾಡಬೇಕು!

ಈಜುವ ಪ್ರದರ್ಶನವಾದ ನಂತರ ನಮಗಾಗಿ ಕಾದಿಟ್ಟ ಬಂಗಲೆಗೆ ಹೋಗಿ ಬೇರೆಯ ಉಡುಪು ಧರಿಸಿಕೊಂಡು ಉಳಿದಿದ್ದ ತಿಂಡಿಯನ್ನು ತೀರಿಸಿ ಕೊಲಂಬಿಯಾ ಮಾರ್ಗವಾಗಿ ಹೊರಟೆವು. ಕಾಲೇಜಿನ ಹುಡುಗಿಯರು ನಮ್ಮ ಜೊತೆಗೆ ಇದ್ದುದರಿಂದ ಅವರನ್ನು ರಾತ್ರಿ ೧೧ ಘಂಟೆಯ ಒಳಗೆ ಕೊಲಂಬಿಯಾದಲ್ಲಿ ಬಿಡಬೇಕಾಗಿತ್ತು. ಅದು ವಿಶ್ವವಿದ್ಯಾನಿಲಯದ ನಿಯಮ. ೮॥ ಘಂಟೆಗೆ ಹೊರಟ ನಮ್ಮ ಬಸ್ಸು ೧೧ಘಂಟೆಗೆ ನಮ್ಮ ಊರು ತಲುಪಿತು.

ನಮ್ಮ ಕಡೆಯ ಅಂತಹ "ಟ್ರಿಪ್ಪು" ಗಳನ್ನು ಇಲ್ಲಿಯ "ಟ್ರಿಪ್ಪು" ಗಳಿಗೆ ಹೋಲಿಸಿದಾಗ ನನಗೆ [illegible] ನಮಗೆ [illegible] ನಮ್ಮ ಟ್ರಿಪ್ಪುಗಳಲ್ಲಿ ಆತ್ಮತೃಪ್ತಿ, ಮನಶ್ಶಾಂತಿ [illegible] ಅವರಿಗೆ ಆಗಲಾರದು. [illegible] ಸಂತೋಷ ಕ್ಷಣಿಕ; ನಮ್ಮದು ಸ್ಥಿರ.

ಚಂದಾದಾರರಲ್ಲಿ ವಿನಂತಿ

—o—

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ತಿರಸ್ಕರಿಸಿ ಹಿಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚ ಸಹಿತ ಚಂದಾ ಹಣ ಮುಂಗಡ

೧ ವರ್ಷಕ್ಕೆ	೩—೪—೦
೬ ತಿಂಗಳಿಗೆ	೨—೪—೦
೩ ,,	೧—೧೨—೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ವ್ಯವಸ್ಥಾಪಕ.

ಹೈದರಾಬಾದಿನ ಹೋರಾಟ

ಲೇ:—ಶ್ರೀ ವೀರಭದ್ರಪ್ಪ, ದೇವರಕಲ್ಲ

ಸೂರ್ಯೋದಯದಿಂದ ಇಡೀಪ್ರಪಂಚವು ಬೆಳಗುವಲ್ಲಿ ಗ್ರಹಣದ ದೆಸೆಯಿಂದ ಪ್ರಪಂಚದ ಕೆಲಭಾಗವು ಕತ್ತಲೆಯಿಂದ ಮುಚ್ಚುವಂತೆ ಸ್ವಾತಂತ್ರ್ಯವೆಂಬ ಸೂರ್ಯನಿಂದ ಇಡೀ ಹಿಂದುಸ್ಥಾನವು ಸುಖ ಸಾಮ್ರಾಜ್ಯದಲ್ಲಿ ಕಾಲಿಡುತ್ತಿರಲು ಹಿಂದೂಸ್ಥಾನಾಂತರ್ಗತವಾದ ಕೆಲ ದೇಶೀ ಸಂಸ್ಥಾನಗಳ ಅಗ್ರಾಹ್ಯ ಮತ್ತು ಅಪ್ರಸ್ತುತವಾದ ಸ್ವಾತಂತ್ರ್ಯ ಘೋಷಣೆಯಿಂದ ಸಂಸ್ಥಾನೀ ಪ್ರಜೆಗಳಾದ ನಮಗೆ ಗ್ರಹಣ ಹಿಡಿದು ಕತ್ತಲೆಯು ಮುಸುಕಿದಂತಾಗಿದೆ.

ಇಡೀ ಹಿಂದುಸ್ಥಾನವು ಪಾರತಂತ್ರ್ಯವೆಂಬ ಸೆರೆಮನೆಯಲ್ಲಿ ಸಿಕ್ಕು ಮರಣೋನ್ಮುಖವಾಗಿರಲು ಅದರ ವಿಮೋಚನೆಗಾಗಿ ಹೋರಾಡಿ ಅನೇಕ ಕಷ್ಟನಷ್ಟಗಳಿಗೆ ಗುರಿಯಾದವರು ಹಿಂದುಸ್ಥಾನದ ಪ್ರಜಾವರ್ಗದವರಲ್ಲದೆ ರಾಜವರ್ಗವಲ್ಲ. ಅದಕ್ಕೆ ಪ್ರತಿಯಾಗಿ ಈ ಸಂಸ್ಥಾನಾಧೀಶ್ವರರು ಬ್ರಿಟಿಶರಿಗೆ ಹಿಂದುಸ್ಥಾನವನ್ನು ಬಿಟ್ಟುಹೋಗದಿರಲು ಸಾಕಷ್ಟು ಬೆಂಬಲಿಗರಾಗಿ ತಮ್ಮ ತಮ್ಮ ಪ್ರಜೆಗಳನ್ನು ಪಶುಗಳಂತೆ ಭಾವಿಸಿ ಯಾವ ತರದ ನಾಗರಿಕ ಹಕ್ಕುಗಳನ್ನೂ ಕೊಡದೆ ಅತಿ ಹೇಯವಾದ ದಬ್ಬಾಳಿಕೆ ನಡೆಸಿದ್ದೂ ಉಂಟು. ಹೀಗಿರಲು ಹುಚ್ಚುಮುಂಡೆಯ ಲಗ್ನದಲ್ಲಿ ಉಮ್ಮನಗಡಿಬಿಡಿಯಂತೆ ತಾವೂ ಸ್ವತಂತ್ರರಾಗುವೆವೆಂದು ಸಾರಿರುವದು ಕೇವಲ ಲಜ್ಜಾಸ್ಪದವಾದಮಾತಾಗಿದೆ.

ಹೈದ್ರಾಬಾದ ಸಂಸ್ಥಾನದ ಕರ್ನಾಟಕ ಮಹಾರಾಷ್ಟ್ರ ಮತ್ತು ಆಂಧ್ರ ಪ್ರದೇಶಗಳನ್ನೊಳಗೊಂಡು ಸುಮಾರು ೮೨,೬೯೮ ಚದುರಮೈಲುಗಳ ವಿಸ್ತಾರವಿದ್ದು ೧,೬೩,೩೮,೫೩೪ ಜನಸಂಖ್ಯೆಯುಳ್ಳದ್ದಾಗಿದೆ. ಇದಕ್ಕಿರುವ ೨೨,೫೦೦ ಹಳ್ಳಿಗಳಲ್ಲಿ ನೂರಕ್ಕೆ ೮೮ ರಷ್ಟು ಹಿಂದುಗಳೂ ೧೨ ರಷ್ಟು ಮುಸಲ್ಮಾನರೂ ವಾಸಿಸುತ್ತಿದ್ದು ೧೪ ಕೋಟಿ ರೂಪಾಯಿಗಳ ವಾರ್ಷಿಕ ಆದಾಯವುಳ್ಳದ್ದಾಗಿದೆ. ಇಲ್ಲಿಯ ಅರಸನು ಮುಸಲ್ಮಾನನಾಗಿದ್ದು ಜವಾನನಿಂದ ಸಿಪಾಯಿ ಮೊದಲ್ಗೊಂಡು ಪ್ರಧಾನನವರೆಗೆ ಎಲ್ಲ ಅಧಿಕಾರಿಗಳೂ ಅಲ್ಪಸಂಖ್ಯಾಕರಾದ ಮುಸಲ್ಮಾನರೇಆಗಿದ್ದಾರೆ. ನಾಗರಿಕ ಸ್ವಾತಂತ್ರ್ಯ, ಸಂಖ್ಯಾನುಸಾರ ಅಧಿಕಾರ, ಪ್ರಜಾಪ್ರಭುತ್ವ, ಹಿಂದೀ ಒಕ್ಕೂಟದಲ್ಲಿ ಸೇರುವಿಕೆ ಮುಂತಾದ ಬಹುಸಂಖ್ಯಾಕರಾದ ಹಿಂದುಗಳ ನ್ಯಾಯವಾದ ಬೇಡಿಕೆಗಳನ್ನು ಜಾತ್ಯಂಧನಾದ ಅರಸನೂ ಅವನ ಅನುಯಾಯಿಗಳೂಮನ್ನಿಸಿಲ್ಲ. ಬಹುಸಂಖ್ಯಾಕರಾದ ಹಿಂದುಗಳ ಬೇಡಿಕೆಗಳನ್ನು ಪೂರೈಸಿದುದಾದರೆ ತಮ್ಮ "ಮೊಗಲಾಯಿ ರಾಜ್ಯ"ಕ್ಕೆ ಆಸ್ಪದವಿಲ್ಲದಂತಾಗುವದೆಂದು ಗ್ರಹಿಸಿ ತಾನು ಸಾರಿರುವ ಸ್ವಾತಂತ್ರ್ಯಕ್ಕೆ ವಿರೋಧವಾಗಿ ನಿಂತಿರುವ ಹೈದರಾಬಾದ ಸಂಸ್ಥಾನ ಕಾಂಗ್ರೆಸ್ಸಿನ ಅಧ್ಯಕ್ಷರನ್ನು ಮೊದಲುಗೊಂಡು ಸಂಸ್ಥಾನದ ಮೂಲೆ ಮೂಲೆಯಲ್ಲಿರುವ ಎಲ್ಲ ಕಾರ್ಯಕರ್ತರನ್ನೂ ಹೈದ್ರಾಬಾದ ಸಂರಕ್ಷಣೆಯ ಕಾಯದೆಯನ್ವಯ ಬಂಧಿಸಲು ಈ ಗ್ರಾಗಲೆ ಸುಗ್ರೀವಾಜ್ಞೆ ಹೊರಟು ಅನೇಕ ಕಾರ್ಯಕರ್ತರು ಸೆರೆಮನೆಯ ಸುಖವನ್ನನುಭವಿಸುತ್ತಿದ್ದಾರೆ. ಆ ಮೇರೆಗೆ ಇತ್ತೀಚೆಗೆ ಹೈದ್ರಾಬಾದ ಸಂಸ್ಥಾನ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ಸಿನ ಪ್ರಧಾನ ಕಾರ್ಯಕರ್ತರಾದ ಯಾದಗಿರಿಯ ಪಂಡಿತ ವಿರುಪಾಕ್ಷಪ್ಪ ಬಿ. ಎ. ಎಲ್. ಎಲ್. ಬಿ., ಶ್ರೀಮಾನ್ ನಾರಾಯಣಪ್ಪ ಶ್ರೇಷ್ಠಿ ಕೊಂಕಲ ಮತ್ತು ಶ್ರೀಯುತ ವೀರಣ್ಣನವರು ಚನ್ನಳ್ಳಿ ಈ ಮೂವರನ್ನು ಹೈದ್ರಾಬಾದ ಸಂರಕ್ಷಣೆಯ ಕಾಯದೆಯನ್ವಯ ೨೭-೮-೪೭ ಆಗಸ್ಟ ಮತ್ತು ಸಪ್ಟೆಂಬರ ೨ಕ್ಕೆ ಅನುಕ್ರಮವಾಗಿ ಬಂಧಿಸಿ ಕಲಬುರ್ಗಿಯ ಸೆಂಟ್ರಲ್ ಜೇಲಿಗೆ ಒಯ್ಯಲಾಯಿತು.

ಶ್ರೀ ವಿರುಪಾಕ್ಷಪ್ಪನವರು ಯಾದಗಿರಿಯ ಉತ್ಸಾಹಿ ತರುಣ ವಕೀಲರು, ಶ್ರೀಗಳಾದ ನಾರಾಯಣಪ್ಪನವರು ಮತ್ತು ವೀರಣ್ಣನವರು ಯಾದಗಿರಿಯ ವ್ಯಾಪಾರಿ ಪ್ರಮುಖರು. ಇವರು [illegible] ಅಹಿಂಸಾ ಭಕ್ತರು ಮತ್ತು ನಿಯಮದ [illegible] ಸಂಸ್ಥಾನಿ [illegible]. ಹೀಗೆಯೇ ಸಂಸ್ಥಾನದ ಸರ್ವ ಪ್ರಮುಖರೂನಮ್ಮ ಹೋರಾಟಕ್ಕೆ ಮುಂದೆ ಬಂದು ಬೆಂಬಲವಿತ್ತರೆ ಅದು ಯಶಸ್ವಿಯಾಗುವದರಲ್ಲಿ ಯಾವ ಸಂದೇಹವೂ ಇಲ್ಲ. ಹೈದ್ರಾಬಾದದ ಬಹುಸಂಖ್ಯಾಕರು ಅಲ್ಪಸಂಖ್ಯಾಕರ ಉಗ್ರ ಶಾಸನದಿಂದ ಮುಕ್ತರಾಗಿ ಪ್ರಜಾಸತ್ತೆಯನ್ನು ಸಂಸ್ಥಾನದಲ್ಲಿ ಪ್ರತಿಷ್ಠಾಪಿಸಲು ಮುನ್ನುಗ್ಗಿದ ಈ ಸಮರಕ್ಕೆ ಜಗತ್ತಿನ,ಭಾರತದ ಹಾಗೂ ನೆರೆಹೊರೆಯ ಪ್ರಾಂತಗಳ ಸರ್ವರ ಸಹಾಯ, ಸಹಕಾರ, ಸಹಾನುಭೂತಿಗಳು ಸಿಗದಿರಲಾರವೆಂದು ನನ್ನ ದೃಢವಾದ ನಂಬಿಗೆ.

ನಾಲ್ಕು ಮಾತು — ರಂಗನಾಥ ದಿವಾಕರ

ಇನ್ನಾದರೂ ವಿಚಾರ ಮಾಡಬೇಕು

ಹಿಂದು ಮುಸಲ್ಮಾನರು ಅತ್ಯಂತ ಭಿನ್ನರು, ಇವರು ಒಂದೇ ರಾಜ್ಯದಲ್ಲಿ ಇರುವದು ಸಾಧ್ಯವಿಲ್ಲ, ಇವರು ಪ್ರತ್ಯೇಕ ರಾಷ್ಟ್ರದವರು, ಇವರಿಗೆ ಸ್ವತಂತ್ರ ಪ್ರತ್ಯೇಕ ರಾಜ್ಯಗಳೇ ಬೇಕು, ಎಂದು ಮುಂತಾಗಿ ಪ್ರಚಾರ ಮಾಡಿ, ಹಟ ಹಿಡಿದು, ಜಾತೀಯ ದ್ವೇಷವನ್ನು ಪರಮಾವಧಿಗೆ ಬೆಳೆಸಿ ಬ್ರಿಟಿಶರ ಅಸ್ತಿತ್ವದ ದುರ್ಲಾಭ ಪಡೆದು ಮುಸಲ್ಮಾನ ಬಾಂಧವರು ಪಾಕಿಸ್ತಾನ ಪಡೆದುದಾಯಿತು. ಆದರೆ ಆ ಪ್ರಚಾರಕಾಲದಲ್ಲಿ ಬಿತ್ತಿದ ವಿಷಕಾರಿ ದ್ವೇಷಬೀಜಗಳು ದೇಶದಾದ್ಯಂತ ಭಯಂಕರವಾದ ಕ್ಷೋಭನನ್ನುಂಟು ಮಾಡಲು ಕಾರಣವಾಗಿ ಅವು ಆತ್ಯಂತಿಕ ದುರಂತದಲ್ಲಿ ಪರಿಣಮಿಸಿದವು. ಇನ್ನೂ ಆ ದ್ವೇಷಜ್ವಾಲೆ ನಂದಿಹೋಗಿಲ್ಲ. ಪಂಜಾಬದಲ್ಲಿ ನಡೆದ ಅನಾಹುತವು ಪೂರ್ಣ ಮುಗಿಯಿತೆನ್ನಬು ಬರುವಂತಿಲ್ಲ. ದೇಶದಲ್ಲೆಲ್ಲ ಆ ಜ್ವಾಲೆ ಹರಡುವ ಭಯವು ಇನ್ನೂ ಇದೆ. ಇಂಥ ಸಂದರ್ಭದಲ್ಲಿ ಮುಸಲ್ಮಾನ ಬಾಂಧವರು ವಿಶೇಷತಃ ಇಂಡಿಯಾದಲ್ಲಿರತಕ್ಕ ಬಾಂಧವರು ಪುನರ್ವಿಚಾರ ಮಾಡುವದು ಅತ್ಯವಶ್ಯಕವು.

× + ×

ಹಿಂದು ಮುಸಲ್ಮಾನ ಧರ್ಮಗಳ ಸ್ವರೂಪದಲ್ಲಿ ಭಿನ್ನತೆ ಇರುವದು, ಹಲವೊಂದು ಆಚಾರ ವಿಚಾರ ನಡತೆ ನಡಾವಳಿಗಳಲ್ಲಿ ಭೇದವಿರುವದು ಎಂಬುದನ್ನು ಯಾರೂ ಅಲ್ಲಗಳೆಯುವದಿಲ್ಲ. ಆದರೆ ಹಾಗೆ ಇದ್ದ ಕ್ಷಣಕ್ಕೆ ಪ್ರತ್ಯೇಕ ಒಂದು ಸ್ವತಂತ್ರ ರಾಜ್ಯವೇ ಸ್ಥಾಪನವಾಗಬೇಕೆಂದು ಮುಸ್ಲಿಂ ಲೀಗಿನವರು ಹಟ ಹಿಡಿದುದು ಅತ್ಯಂತ ತಪ್ಪು ಹಾಗೂ ದೇಶಘಾತಕವು ಎಂಬುದು ಈಗಪರಿಣಾಮಗಳಿಂದ ಸ್ಪಷ್ಟವಾಗುತ್ತಿದೆ. ಧರ್ಮಕ್ಕೊಂದು, ಜಾತಿಗೊಂದು ಪ್ರತ್ಯೇಕ ರಾಜ್ಯವೆಂದರೆ ಹಿಂದುಸ್ತಾನದಲ್ಲಿ ೧೦—೨೦ ಸ್ವತಂತ್ರ ರಾಜ್ಯಗಳಾಗಬೇಕಾದೀತು. ಅವೆಲ್ಲ ಪೂರ್ಣ ಸ್ವತಂತ್ರವಿರಬೇಕೆಂದು ಹಟ ಹಿಡಿದರೆ ಹಿಂದುಸ್ತಾನವು ಚೂರುಚೂರಾಗಿ ಹೋಗುವದು. ಇದರ ಪರಿವೆ ಇಲ್ಲದೆ ಕೇವಲ ಒಂದು ದುರಾಗ್ರಹ ಹಿಡಿದು ಹಿಂದುಸ್ತಾನವು ತುಂಡರಿಸಲ್ಪಟ್ಟಿತು. ಮುಸಲ್ಮಾನ ಬಾಂಧವರು ಎಲ್ಲಿಯಾದರೂ ಒಂದೇ ಕಡೆಗೆ ಇರುತ್ತಿದ್ದರೆ, ಅವರು ಪ್ರತ್ಯೇಕವಾಗಿ ಹೋಗಿದ್ದರೆ ಮಾತು ಬೇರೆ. ಈಗ ಸಾವಿರಾರು ವರುಷಗಳಿಂದ ತಳಕು ಹಾಕಿಕೊಂಡು ನೆರೆಹೊರೆಯವರಾಗಿ ಊರೂರಲ್ಲಿ ಓಣಿಓಣಿಗಳಲ್ಲಿ ಪರಸ್ಪರರ ಮಗ್ಗುಲಲ್ಲಿ ವಾಸಮಾಡಿ ನಾವು ಪ್ರತ್ಯೇಕ ರಾಷ್ಟ್ರದವರು ಎಂದು ಪ್ರಚಾರ ಮಾಡಿ ದ್ವೇಷಾಗ್ನಿಯನ್ನು ಹಬ್ಬಿಸಿದರೆ ಅದರ ಪರಿಣಾಮಗಳು ಭಯಂಕರವಾಗದೆ ಇರಲರಿಯವು. ಆ ಪ್ರಕಾರ ಈಗ ಆಗಿವೆ, ಆಗುತ್ತಿವೆ, ಮುಂದೆಯೂ ಆಗಬಹುದೆಂಬ ಭಯವು ನಮ್ಮನ್ನು ಇನ್ನೂ ಬಿಟ್ಟಿಲ್ಲ.

× × ×

ಈ ವಿಷಯದಲ್ಲಿ ದಕ್ಷಿಣ ಹಿಂದುಸ್ತಾನದಲ್ಲಿ ಹಾಗೂ ಯುಕ್ತ ಪ್ರಾಂತ, ಬಿಹಾರ, ಮಧ್ಯಪ್ರಾಂತ ಮುಂತಾದ, ಮುಸಲ್ಮಾನರು ಅಲ್ಪ ಸಂಖ್ಯಾಕರಿರುವ ಪ್ರಾಂತಗಳಲ್ಲಿ ಇರುವ ಮುಸಲ್ಮಾನ ಬಾಂಧವರಂತೂ ಪಾಕಿಸ್ತಾನದ ಪ್ರಸ್ಥಾಪನೆಗೆ ಯಾವ ವಿಚಾರಮಾಡಿ ಬೆಂಬಲ ಕೊಟ್ಟರೊ ಇದು ತಿಳಿಯದ ವಿಷಯ. ಕೇವಲ ಒಂದು ಭಾವನಾ ಪ್ರಧಾನವಾದ ಧರ್ಮಾಂಧತೆಯ ಹೊರತು ಯಾವ ಕಾರಣವೂ ಕಂಡು ಬರುವದಿಲ್ಲ. ವಿವೇಕ ಶೂನ್ಯತೆಯ ಪರಾಕಾಷ್ಠೆಯೆ ಅದರಲ್ಲಿ ಕಂಡು ಬರುವದು. ಅತ್ತ ಪಾಕಿಸ್ತಾನವು ದೊರೆತರೆ ಇತ್ತ ಇವರಿಗೆ ಯಾವ ಲಾಭ? ಇತ್ತಲಿನ ಎಲ್ಲ ಮುಸಲ್ಮಾನರನ್ನು ಅತ್ತ ಒಯ್ಯುವ ಯೋಜನೆ ಇದ್ದರೊಂದು ಮಾತು ಬೇರೆ. ಹಾಗೆ ಯೋಜನೆ ಇದ್ದುದಾದರೆ ಆ ಯೋಜನೆಯೊಂದಿಗೆ ಪಾಕಿಸ್ತಾನದ ಪ್ರಸ್ಥಾಪನೆಯಾಗಬೇಕಿತ್ತು. ಅದೇನೂ ಇಲ್ಲದೆ ಸರೀಕದವಳು ಸರಿಗೆಹಾಕಿಕೊಂಡಳೆಂದು ತಾನು ಉರ್ಲು ಹಾಕಿಕೊಂಡಂತೆ ಇವರು ತಮ್ಮ ಸ್ಥಿತಿಯನ್ನು ಮಾಡಿಕೊಂಡಿರುವರು. ಆ ಮೂರ್ಖತನ ಸಾಲದ್ದಕ್ಕೆ ಈಗ ಮತ್ತೆ ಪ್ರತ್ಯೇಕ ಮತದಾನ ಪದ್ಧತಿಯನ್ನು ಬೇಡುವ ಮಹಾ ಮೂರ್ಖತನವನ್ನು ಮಾಡುತಿರುವರು! ಹೀಗೆಲ್ಲ ಮಾಡದೆ ಅವರು ಸ್ವಲ್ಪ ಯೋಚಿಸಬೇಕು. ವಿಚಾರ ವಿವೇಕಗಳಿಗೆ ಸ್ವಲ್ಪ ಎಡೆಗೊಡಬೇಕು. ವ್ಯವಹಾರ ಅರಿತವರಂತೆ ಸ್ವಲ್ಪ ವರ್ತಿಸಬೇಕು. ಇಲ್ಲದಿದ್ದರೆ ಅವರು ತಮಗೂ ಸುಖವಿಲ್ಲ ಅನ್ಯರಿಗೂ ಸುಖವಿಲ್ಲ ಎಂಬಂತೆ ಕೊನೆಯವರೆಗೂ ಮುಳುವಾಗಿ ಉಳಿಯುವರು ಹಾಗೂ ಸಮಾಜದ ಮೇಲೆ ಗಂಡಾಂತರವನ್ನು ತರುವರು.

× × ×

ಈ ಸಂದರ್ಭದಲ್ಲಿ ಹಲವು ಪ್ರಸಿದ್ಧ ದಿಲ್ಲಿಯ ಮುಸಲ್ಮಾನ ನಾಗರಿಕರು ಹೊರಡಿಸಿದ ಪ್ರಕಟನೆಯು ಅರ್ಥಪೂರ್ಣವಿರುವದು. ಅವರು ಈಗ ಮುಸಲ್ಮಾನಬಾಂಧವರ ಹತ್ತಿರಿರುವ ಆಕ್ಷಿಪ್ತ ಶಸ್ತ್ರಾಸ್ತ್ರಗಳನ್ನು ಗಾಂಧೀಜಿಯವರಿಗೆ ತಂದೊಪ್ಪಿಸುವುದಲ್ಲದೆ ಮುಸಲ್ಮಾನ ಬಾಂಧವರಲ್ಲಿ ಹಿಂದೂ ಮುಸಲ್ಮಾನ ಭಾಂಧವ್ಯದ ಪ್ರಚಾರವನ್ನು ನಡೆಸಿರುವರು. ಹಾಫೀಜ ಸಯ್ಯದ ಅಜೀಜ ಹಸನ ಬಕಾಯ, ಸೆಕ್ರೆಟರಿ ಮುಸ್ಲಿಂ ರಿಲೀಫ ಕಮೀಟಿ, ಅಫಟಾಬ ಅಹಮ್ಮದ (ಸೊಶಾಲಿಸ್ಟ) ಜಿಯಾವುಲ್ ಹಕ್ (ಜಮಾಯಿತ್ ಉಲ್ ಉಲೆಮಾ) ಇತ್ಯಾದಿ ಬಾಂಧವರು ಹೊರಡಿಸಿದ ಪ್ರಕಟನೆಯಲ್ಲಿಯ ಮುಖ್ಯಾಂಶಗಳು ಈ ಕೆಳಗಿನಂತಿವೇ—

ದಿಲ್ಲಿಯಲ್ಲಿ ಶಾಂತಿಯನ್ನು ಪ್ರಸ್ಥಾಪಿಸಿಯೆ ತೀರುವೆವು. ಪಾಕಿಸ್ತಾನಕ್ಕೆ ಓಡಿ ಹೋಗಿ ಬದುಕುವದಕ್ಕಿಂತ ಹಿಂದುಸ್ತಾನದಲ್ಲಿಯೆ ಮರಣ ಬಂದರೆ ಲೇಸು. ಮುಸ್ಲಿಂ ಲೀಗಿನ ಮುಖಂಡರು ಮಾಡಿದ ಭಾಷಣಗಳು ವಿಷಕಾರಿ ಹಾಗೂ ಗರ್ಹಣೀಯವಾದವುಗಳಿದ್ದವು. ಅವುಗಳಿಂದಲೆ ಈ ಬೇಗೆ ಹಬ್ಬಿತು. ಪಶ್ಚಿಮ ಪಂಜಾಬದಲ್ಲಿ ನಡೆದ ಅತ್ಯಾಚಾರಗಳು ಮುಸ್ಲಿಮರಿಗೆ ಲಜ್ಜಾಸ್ಪದವಾದವುಗಳು.

ಪಾಕಿಸ್ತಾನಕ್ಕಿಂತ ಹೆಚ್ಚು ಸಂಖ್ಯೆಯಲ್ಲಿರುವ ಹಿಂದುಸ್ತಾನದಲ್ಲಿಯ ಮುಸಲ್ಮಾನರಿಗಾಗಿ ಪಾಕಿಸ್ತಾನ ಸರಕಾರದವರು ಏನು ಮಾಡಿರುವರು, ಏನು ಮಾಡಬಲ್ಲರು? ಅಣೆ ಮಾಡಿ ಪಾಕಿಸ್ತಾನವನ್ನು ಬೆಂಬಲಿಸಿದ ಇತ್ತಲಿನ ಮುಸಲ್ಮಾನರಿಗೆ ಮುಸ್ಲಿಮ ಲೀಗಿನವರು ಏನು ಆಧಾರ ಕೊಟ್ಟಿರುವರು, ಕೊಡಬಲ್ಲರು?

ನಾವು, ಹಿಂದುಸ್ತಾನದಲ್ಲಿಯ ಮುಸಲ್ಮಾನರು ಮೋಸಹೋದೆವು. ನಮ್ಮನ್ನು ಮೋಸಮಾಡಿದರು. ಆದುದರಿಂದ ನಾವು ಹಿಂದುಸ್ತಾನದ ವಿಭಜನೆಗೆ ಬೆಂಬಲಕೊಟ್ಟೆವು. ನಮ್ಮದು ತಪ್ಪಾಯಿತು. ಇನ್ನು ನಾವು ಹಿಂದುಸ್ತಾನಕ್ಕೆ ಎಂದೂ ದ್ರೋಹ ಬಗೆಯುವದಿಲ್ಲ. ಇತ್ಯಾದಿ.

ಹಿಂದುಸ್ಥಾನದಲ್ಲಿಯ ಮುಸಲ್ಮಾನ ಬಾಂಧವರು ಇಲ್ಲಿಯೇ ನಾಗರಿಕರಾಗಿರಬೇಕೆಂದಿದ್ದರೆ ಅವರೆಲ್ಲರೂ ಇದೇ ಮನೋವೃತ್ತಿಯಿಂದ ನಡೆದುಕೊಳ್ಳಬೇಕಾದೀತು. ಇಲ್ಲದಿದ್ದರೆ ಕ್ಷಣಕ್ಷಣಕ್ಕೆ ತಿಕ್ಕಾಟ ವಾಗದೆ ಇರದು.

ರಾಜಕಾರಣ ಹಾಗೂ ಮನಃಶಾಂತಿ

ನಾನು ತರುಣ ಮಿತ್ರರೊಬ್ಬರಮನೆಗೆಹೋಗಿದ್ದೆ. ಅಲ್ಲಿ ಮೇಜಿನಮೇಲೆ ಓರ್ವ ತೇಜಸ್ವಿ ಪ್ರೌಢೆಯ ಭಾವಚಿತ್ರವಿತ್ತು. ಇದಾರದು ಎಂದು ಕೇಳಿದೆ. ಅದು ತಾಯಿಯವರದು (ಅರವಿಂದಾಶ್ರಮದಲ್ಲಿಯ ಮದರ್) ಎಂದು ಹೇಳಿದರು. ಇದೇಕೆ ಎಂದೆನು. ಮನಸ್ಸಿಗೆ ಶಾಂತಿಕೊಡಲು ಎಂದರು. ರಾಜಕಾರಣದಲ್ಲಿ ಬಿದ್ದವರಿಗೆ ಮನಃಶಾಂತಿಯಲ್ಲಿಯದು. ಮನಸ್ತಾಪವೇ ಬಹಳ, ಮನಃಸಂತಾಪವೇ ಹೆಚ್ಚು ಎಂದು ಹೇಳಿದೆನು. ಸಮುದ್ರದಲ್ಲಿ ಈಸುಬಿದ್ದು ತೆರೆಗಳಿಗೆ ಬೇಸತ್ತರೆ ಆದೀತೇ? ತೆರೆಗಳು ಬೇಡಾದವರು ಕೂಪದಲ್ಲಿಯೋ ಕೆರೆಯಲ್ಲಿಯೊ ಈಸಬೇಕು. ಸ್ವಾತಂತ್ರ್ಯದಹೋರಾಟನಡೆದಾಗ ಸ್ವಾತಂತ್ರ್ಯ ದೊರೆತೊಡನೆ ಶಾಂತಿ ಪ್ರಾಪ್ತವಾಗುವದೆಂದು ಆಶಿಸಿದ್ದೆವು. ಆದರೆ ಸ್ವಾತಂತ್ರ್ಯವು ಬಂದರೂ ಶಾಂತಿ ಸಮೀಪಿಸಲಿಲ್ಲ. ಪೀಡಾ ಹೋಗಲಿ, ಪಾಕಿಸ್ತಾನ ಕೊಟ್ಟುಬಿಟ್ಟರೆ ಬಗೆಹರಿಯುವದೆಂದು ಕಾಂಗ್ರೆಸ್ಸಿನ ಮುಖಂಡರು ಭಾವಿಸಿದ್ದರು. ಆದರೆ ಅದೊಂದು ಉತ್ಪಾತವೆ ಆಗಿ ಪರಿಣಮಿಸಿತು. ರಾಜಕಾರಣದ ಸ್ವಭಾವವೆ ಹಾಗೆ. ರಾಜಕಾರಣದಲ್ಲಿ ಯಾವುದೂ ಸ್ಥಿರವಲ್ಲ, ಯಾವುದೂ ನಿಶ್ಚಿತವಲ್ಲ, ಯಾವುದೂ ಸಮಾಧಾನಕರವಲ್ಲ. ಯಾಕಂದರೆ ಹಿತಸಂಬಂಧಗಳ ಕಾಕಲಾಟ, ಅಧಿಕಾರ ಲಾಲಸೆಯ ಪೀಕಲಾಟ ಇವೇ ರಾಜಕಾರಣದ ಮುಖ್ಯ ಲಕ್ಷಣಗಳು. ಸೇವೆ, ತ್ಯಾಗ ಇವುಗಳ ತಳಹದಿಯ ಮೇಲೆ ರಾಜಕಾರಣವನ್ನು ರಚಿಸಬೇಕೆಂದು ಹೆಣಗುವವರು, ಮಹಾತ್ಮಾಜಿಯಂಥವರು ತೀರ ವಿರಳ. ಅವರಿಗಾದರೂ ಯಶಸ್ಸು ಎಷ್ಟರ ಮಟ್ಟಿಗೆ ಸಿಕ್ಕಿದೆ ಎಂದು ಕೇಳಿದರೆ ಅವರು ಏನು ಹೇಳಬಲ್ಲರು? ವೈಯಕ್ತಿಕ ಯಶಸ್ಸು ಅವರಿಗೆ ದೊರೆತಿರುವದೇನೋ ನಿಜ. ಯಾವದೇ ಅಧಿಕಾರಾದಿಗಳು ಕಣ್ಣಮುಂದೆ ಇಲ್ಲದಾಗ ಹಿಂದೀ ರಾಜಕಾರಣವು ಪವಿತ್ರವಿದ್ದುದು ನಿಜ. ಆದರೆ ಹಿತಸಂಬಂಧಗಳ ತಿಕ್ಕಾಟ, ಅಧಿಕಾರ ಇವುಗಳ ಪ್ರವೇಶವಾದೊಡನೆ ಅದು ಸಾಕಷ್ಟು ಕಲುಷಿತವಾಯಿತು. ಆದರೆ ಅದಕ್ಕಂಜಿ ನಡೆಯುವಂತಿಲ್ಲ. ಆದಷ್ಟು ಪವಿತ್ರರಿದ್ದು ಕಾರ್ಯಪ್ರವೃತ್ತರಾಗಲಿಕ್ಕೆ ಬೇಕು.

× × ×

ವಿದ್ಯಾರ್ಥಿಗಳು

ಓರ್ವ ವಿದ್ಯಾರ್ಥಿ ಒಂದು ಅತ್ಯಂತ ಸುಂದರವಾದ ಶಬ್ದಚಿತ್ರವನ್ನು ರೇಖಿಸಿ ವಿದ್ಯಾರ್ಥಿಗಳ ಸದ್ಯದ ಪರಿಸ್ಥಿತಿಯನ್ನು ಬಣ್ಣಿಸಿರುವನು. 'ಎಲ್ಲ ಪಕ್ಷದವರೂ ನಮ್ಮನ್ನು ತಮ್ಮ ಕಡೆಗೆ ಎಳಕೊಳ್ಳಲು ಯತ್ನಿಸುತ್ತಿರುವರು. ಸ್ಟೇಶನ್ನಿನ ಮೇಲಿನ ಟಾಂಗಾದವರು ಪ್ರಯಾಣಿಕರನ್ನು ಮುತ್ತಿ ತಮ್ಮ ಟಾಂಗಾದಲ್ಲಿ ಕೂಡಿಸಲು ಉತ್ಸುಕರಿರುವಂತೆ ನಾನಾ ಪಕ್ಷಪಂಗಡದವರು ನಮ್ಮನ್ನು ಮುತ್ತುವರು' ಎಂದು ಆ ವಿದ್ಯಾರ್ಥಿಯು ಬಣ್ಣಿಸಿರುವನು! ಇದು ಯಥಾರ್ಥವಾದ ವರ್ಣನೆಯಿರುವದು. ಕಾಂಗ್ರೆಸ್ಸು, ಗಾಂಧೀವಾದ, ಸಮಾಜವಾದ, ಸಮತಾವಾದ, ರಾಯಪಕ್ಷ, ಇತ್ಯಾದಿ ಹಲವೊಂದು ಪಕ್ಷಗಳು—ಯಾವದು ಒಳ್ಳೆಯದು ಯಾವುದು ಕೆಡಕು ಇದು ಪಾಪ, ಎಳೆಯ ವಿದ್ಯಾರ್ಥಿಗಳಿಗೆ ತಿಳಿಯುವ ಬಗೆ ಹೇಗೆ ಎಂಬದನ್ನು ಯಾರೂ ವಿಚಾರಿಸುವದಿಲ್ಲ. ನಿಜವಾಗಿ ನೋಡಿದರೆ ವಿದ್ಯಾರ್ಥಿಗಳು ಯಾವದೇ ಪಕ್ಷಕ್ಕೆ ಅಂಟಿಕೊಳ್ಳಲು ಯತ್ನಿಸುವದಾಗಲಿ, ಅವರನ್ನು ಯಾವದೊಂದು ಪಕ್ಷದಲ್ಲಿ ಸೇರಿಸಿಕೊಳ್ಳಲಿಚ್ಛಿಸುವದಾಗಲಿ, ಒಂದು ದೃಷ್ಟಿಯಿಂದ ತಪ್ಪೇ ಸೈ. ಅವರು ವಿದ್ಯಾರ್ಥಿಗಳು. ಹೇಳಿಕೇಳಿ ವಿದ್ಯಾರ್ಥಿಗಳು. ಅವರು ಎಲ್ಲ ಪಕ್ಷಗಳನ್ನೂ ಪರಿಶೀಲಿಸಬೇಕು, ಎಲ್ಲ ಆಚಾರ ವಿಚಾರಗಳನ್ನೂ ಅಭ್ಯಸಿಸಬೇಕು. ವಿವೇಕ ಬಲಿದು ಬುದ್ಧಿ ವಿಶಾಲವಾಗಿ ಕಾರ್ಯಶಕ್ತಿ ಬೆಳೆಯಿತೆಂದರೆ ಯಾವದೊಂದು ಪಕ್ಷವನ್ನು ಸೇರಲು ಅಡ್ಡಿ ಇಲ್ಲ. ಅಲ್ಲಿಯವರೆಗೆ ಸ್ವಯಂ ಸೇವಕರಾಗಿ ದುಡಿಯುತ್ತಿರುವದೇ ಲೇಸು.

× + ×

ಗೋವೆ

ಗೋವೆಯು ಒಬ್ಬ ಕಾರ್ಯಕರ್ತರು ತಮ್ಮಲ್ಲಿಯ ಪರಿಸ್ಥಿತಿಯನ್ನು ಬಣ್ಣಿಸಿ ಅಲ್ಲಿಯ ಅಸಹಾಯಸ್ಥಿತಿಯ ಬಗ್ಗೆ ಬಹಳ ವಿಷಾದವನ್ನು ವ್ಯಕ್ತಗೊಳಿಸಿರುವರು. ಅದೇ ಪತ್ರದಲ್ಲಿ ಗೋವೆ ಮಹಾರಾಷ್ಟ್ರದ್ದು, ಗೋವೆ ಕರ್ನಾಟಕದ್ದು ಎಂಬ ಹೊಡೆದಾಟ ನೋಡಿ ಅವರು ಆಶ್ಚರ್ಯವನ್ನು ವ್ಯಕ್ತಗೊಳಿಸಿರುವರು. 'ನಾವು ಸದ್ಯಕ್ಕೆ ಕರ್ನಾಟಕದವರೂ ಅಲ್ಲ, ಮಹಾರಾಷ್ಟ್ರದವರೂ ಅಲ್ಲ, ನಾವು ಗುಲಾಮ ಜಾತಿಯವರಾಗಿದ್ದೇವೆ. ನಮ್ಮನ್ನು ಮೊದಲು 'ಜಾತಿಯಲ್ಲಿ', ಸ್ವತಂತ್ರರ ಜಾತಿಯಲ್ಲಿ ಸೇರಿಸಿರಿ. ಬಳಿಕ ಕರ್ನಾಟಕ ಮಹಾರಾಷ್ಟ್ರ ಎನ್ನಿರಿ. ಇಲ್ಲದಿದ್ದರೆ ಕೇವಲ ಸ್ವಾರ್ಥ ಬುದ್ಧಿಯಿಂದ ನೀವು ಇಲ್ಲಿ ಬರುತ್ತಿರುವಿರೆಂದು ನಮ್ಮ ಭಾವನೆಯಾಗುವದು. ದಯವಿಟ್ಟು ನಮಗೆ ಎಲ್ಲರೂ ನಿಷ್ಪಕ್ಷಪಾತ ಬುದ್ಧಿಯಿಂದ, ನಿಸ್ಸ್ಪೃಹ ವೃತ್ತಿಯಿಂದ ಸಹಾಯ ನೀಡಿರಿ' ಎಂಬ ಆಶಯವನ್ನು ವ್ಯಕ್ತಮಾಡಿರುವರು. ಇದು ಅವರ ಯೋಗ್ಯವಾದ ಭಾವನೆಯನ್ನು ವ್ಯಕ್ತಮಾಡುವದು. ಅವರು ಕಷ್ಟದಲ್ಲಿದ್ದವರು, ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವರು, ಆದುದರಿಂದ ಸಹಾಯ ಪಾತ್ರರು ಇದು ಮುಖ್ಯ ವಿಷಯ. ಅವರು ಸಹಾಯವನ್ನು ಕೋರಿದರೂ ಸೈ, ಕೋರದಿದ್ದರೂ ಸೈ. ನಾವು ಅದನ್ನು ಕೊಡಮಾಡುವದು ಅತ್ಯವಶ್ಯ. ಅದು ನಮ್ಮ ಕರ್ತವ್ಯ. ಆ ಕಾಲಕ್ಕೆ ಆ ಸಹಾಯದ ಮೊಬಲಗು ಎಂದು ಅವರು ತಮ್ಮ ಪ್ರಾಂತಕ್ಕೆ ಸೇರಬೇಕೆಂದು ಯಾರಾದರೂ ಅಂದರೆ ಅದು ಮಹಾ ತಪ್ಪು. ಎಲ್ಲರೂ ಸಹಾಯ ಮಾಡಿ ಮೊದಲು ಅವರನ್ನು ಉದ್ಧರಿಸುವ. ಬಳಿಕ ಬೇರೆ ಮಾತು.

ಮುಂಬಯಿ ಶಾಸನ ಸಭೆಯ ಅಧಿವೇಶನದ ಕಾರ್ಯಕಲಾಪಗಳು

ಸ್ವತಂತ್ರ ಭಾರತದಲ್ಲಿ ಮುಂಬಯಿ ಶಾಸನ ಸಭೆಯ ಅಧಿವೇಶನವು ಪ್ರಥಮ ಬಾರಿಗೆ ಇದೇ ತಿಂಗಳ ೧೧ ನೇ ತಾರೀಖಿಗೆ ಪ್ರಾರಂಭವಾಯಿತು. ಪ್ರಾರಂಭಕ್ಕೆ ಸದಸ್ಯರು ಭಾರತದ ಘಟನೆಗೆ ಏಕನಿಷ್ಠರಾಗಿ ಉಳಿಯುವ ಪ್ರತಿಜ್ಞೆಯನ್ನು ಸ್ವೀಕರಿಸಿದರು. ಈ ಪ್ರತಿಜ್ಞೆಯನ್ನು ಮಂತ್ರಿಗಳು ಇಂಗ್ಲೀಷಿನಲ್ಲಿ ಇತರರು ತಮ್ಮ ತಮ್ಮ ಮಾತೃಭಾಷೆಯಲ್ಲಿ ಓದಿದರು. ಎಸ್. ಎಲ್. ಕರಂದೀಕರರ ಸರತಿ ಬಂದಾಗ ಅವರು ಪ್ರತಿಜ್ಞೆಯನ್ನು ಸ್ವೀಕರಿಸಲೊಪ್ಪದ್ದರಿಂದ ಸಭೆಯಲ್ಲಿ ಅನಿರೀಕ್ಷಿತ ಆಶ್ಚರ್ಯತರಂಗಗಳೆದ್ದವು. ಸಭೆಯ ನಿಯಮಾನುಸಾರವಾಗಿ ಅವರಿಗೆ ಇದು ವರೆಗೆ ಅಧಿವೇಶನದ ಯಾವ ಕಾರ್ಯಕಲಾಪಗಳಲ್ಲಿಯೂ ಭಾಗವಹಿಸಲು ಅನುಮತಿ ದೊರೆತಿಲ್ಲ. ಮುಖ್ಯ ಮಂತ್ರಿಗಳಾದ ಶ್ರೀ ಖೇರರ ಪ್ರಾಸ್ತಾವಿಕ ಭಾಷಣದೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಜೂಜಾಟ ಪ್ರತಿಬಂಧ ಕಾಯದೆ

ಸಭೆಯು ಪ್ರಾರಂಭವಾದ ಅರ್ಧಗಂಟೆಯಲ್ಲಿಯೇ ಆರು ಮಸೂದೆಗಳಿಗೆ ಒಪ್ಪಿಗೆ ಕೊಟ್ಟಿತು. ಅವೆಲ್ಲವುಗಳಲ್ಲಿ ಜೂಜಾಟ ಪ್ರತಿಬಂಧ ಕಾಯಿದೆಯೇ ಮುಖ್ಯವಾದದ್ದು. ಮಸೂದೆಯನ್ನು ಸ್ಪಷ್ಟೀಕರಿಸುತ್ತ ಶ್ರೀ ಮುರಾರಜಿಯವರು ಜೂಜಾಟವನ್ನು ನಿಯಂತ್ರಿಸುವದೇ ಇದರ ಉದ್ದೇಶವೆಂದು ಹೇಳಿದರು.

ಹರಿಜನ ಮಂದಿರ ಪ್ರವೇಶ ಮಸೂದೆ

ಎರಡನೇ ದಿನವೇ ಸಭೆಯೆದುರು ಹರಿಜನ ಮಂದಿರ ಪ್ರವೇಶ ಮಸೂದೆಯು ಬಂದಿತು. ೧೯೩೭ರಲ್ಲಿಯೇ ಮುಂಬಯಿ ಕಾಂಗ್ರೆಸ ಮಂತ್ರಿಮಂಡಳವು ಈ ಕಾರ್ಯಕ್ಕೆ ಕೈಯಿಕ್ಕಿತು. ಈಗ ಅದನ್ನು ಪೂರ್ತಿಗೊಳಿಸಿತು. ಇದರಿಂದ ಹಿಂದುಗಳಿಗೆ ಪ್ರವೇಶವಿರುವ ಯಾವದೇ ದೇವಾಲಯಗಳನ್ನು ಪ್ರವೇಶಿಸಲು, ಹಾಗೂ ಸರ್ವತ್ರ ಸರೋವರಗಳ, ಬಾವಿಗಳ, ನದಿಗಳ ನೀರನ್ನು ಬಳಸಲು ಹರಿಜನರಿಗೆ ಅಧಿಕಾರವಿದೆ. ಈ ಮಸೂದೆಗೆ ಬೆಂಬಲ ನೀಯುತ್ತ ಮುಖ್ಯಮಂತ್ರಿ ಖೇರರು ಮತ್ತು ಹರಿಜನ ಮಂತ್ರಿ ಜಿ.ಡಿ. ತಪಾಸೆಯವರು ಒಳ್ಳೆ ಆವೇಶಯುಕ್ತ ಭಾಷಣಮಾಡಿದರು.

ತುಂಡುಹೊಲಗಳ ಜೋಡಣೆ ಮಸೂದೆ

ಹೊಲಗಳು ಚಿಕ್ಕ ಚಿಕ್ಕ ತುಂಡುಗಳಾಗಿ ವಿಭಾಗಿಸಲ್ಪಡುವದರಿಂದ ದೇಶಕ್ಕಾಗುವ ಹಾನಿಯನ್ನು ತಡೆಗಟ್ಟುವ ಉದ್ದೇಶದಿಂದ ತುಂಡುಹೊಲಗಳ ಜೋಡಣೆಯ ಮಸೂದೆಯು ಮಂಡಿಸಲ್ಪಟ್ಟಿತು. ಇದನ್ನು ಸ್ವಾಗತಿಸಿ ಸಭೆಯ ಸದಸ್ಯರನೇಕರು ಭಾಷಣಮಾಡಿದರು. ವಿರೋಧಿ ಪಕ್ಷದವರು ತಂದ ತಿದ್ದುಪಡಿಗಳೆಲ್ಲವೂ ಹಿಂತೆಗೆದುಕೊಳ್ಳಲ್ಪಟ್ಟವು. ಈ ಕಾಯದೆಯ ಪರಿಣಾಮವಾಗಿ ಹೆಚ್ಚು ಹೊಲವಿಲ್ಲದ ಹಳ್ಳಿಗರಿಗೆ ಉದ್ಯೋಗವನ್ನು ಕಲ್ಪಿಸುವ ಬಗ್ಗೆಯೂ ಸರಕಾರದಿಂದ ಆಶ್ವಾಸನ ಸಿಕ್ಕಿತು.

ಗ್ರಾಮಪಂಚಾಯತಿ ತಿದ್ದುಪಡೆ ಮಸೂದೆ

೧೯೩೩ರ ಗ್ರಾಮಪಂಚಾಯತಿ ಕಾಯದೆಯನ್ನು ತಿದ್ದುಪಡಿಗೊಳಿಸಿ ಹಳ್ಳಿಗಳಿಗೆ ರಾಷ್ಟ್ರದ ಆಡಳಿತೆಯಲ್ಲಿ ಹೆಚ್ಚಿನ ಸ್ಥಾನವನ್ನು ಕಲ್ಪಿಸಲು ಈ ಮಸೂದೆಯು ಮಂಡಿಸಲ್ಪಟ್ಟಿದೆ. ಹಳ್ಳಿಗಳ ಆರ್ಥಿಕ ಪರಿಸ್ಥಿತಿಯು ಸುಧಾರಿಸುವದಕ್ಕಾಗಿ ಆಯಾ ಹಳ್ಳಿಗಳ ಕಂದಾಯದಲ್ಲಿ ೧೦೦ ಕ್ಕೆ ೧೫ ರಷ್ಟು ಧನ ಸಹಾಯವನ್ನು ಕೊಡಲಾಗಿದೆ. ಹಳ್ಳಿಯ ನ್ಯಾಯ ಮಂಡಳದವರಿಗೆ ಹೆಚ್ಚು ಅಧಿಕಾರಗಳನ್ನು ಕೊಡಲಾಗಿದೆ. ಈ ಪದ್ಧತಿಯು ಸರಿಯಾಗಿ ನಡೆದುಕೊಂಡು ಬರುವಂತೆ ಜಾಗ್ರತೆ ವಹಿಸುವದಕ್ಕೆ ಸರಕಾರದ ವಿಶೇಷಾಧಿಕಾರಿಯ ನೇಮಕವೂ ಇದರಲ್ಲೊಳಗೊಂಡಿದೆ. ಇದರ ಚರ್ಚೆ ಇನ್ನೂ ನಡೆದಿದೆ.

ಇವಲ್ಲದೆ ಇನ್ನು ಮುಂದೆ ಬರುವ ಚರ್ಚೆಗಳಲ್ಲಿ ಬಾಡಿಗೆ ನಿಯಂತ್ರಣ ಮಸೂದೆ ಮತ್ತು ಪ್ರಾಥಮಿಕ ಶಿಕ್ಷಣ ಮಸೂದೆ ಇವೆರಡು ಮುಖ್ಯವಾಗಿವೆ. ಬಾಡಿಗೆ ನಿಯಂತ್ರಣ ಮಸೂದೆಯು ೧೦೦ ಕ್ಕೆ ೧೦ ರಂತೆ ಬಾಡಿಗೆಯನ್ನು ಏರಿಸಲು ಕೂಲಿಕಾರರಿಗೆ ಅಧಿಕಾರ ಕೊಡುತ್ತದೆ ಮತ್ತು ಮಾಲಕನ ಅನುಜ್ಞೆಯಿಲ್ಲದೆ ಬಾಡಿಗೆದಾರನು ತನ್ನ ಮನೆಯ ಯಾವದೇ ಭಾಗವನ್ನು ಒಳಬಾಡಿಗೆಗೆ ಕೊಡಲು ಬರುವದಿಲ್ಲ. ಎಂದು ವಿಧಿಸುತ್ತದೆ.

೧೯೩೮ರಲ್ಲಿ ತಿದ್ದುಪಡಿ ಹೊಂದಿದ ಶಿಕ್ಷಣ ಕಾಯದೆಯು ತೃಪ್ತಿಕರವಿಲ್ಲವಾಗಿ ಕಂಡು ಬಂದದ್ದರಿಂದ ಹೊಸ ಮಸೂದೆಯೊಂದನ್ನು ಮಂಡಿಸಲಾಗುತ್ತದೆ. ಇದರನ್ವಯ ಪ್ರಾಂತದಲ್ಲಿಯ ಎಲ್ಲ ಪ್ರಾಥಮಿಕ ಶಿಕ್ಷಣದ ಹೊಣೆಯನ್ನು ನೇರವಾಗಿ ಸರಕಾರವೇ ವಹಿಸುತ್ತದೆ. ಜಿಲ್ಲಾ ಲೋಕಲ್ ಬೋರ್ಡ ಮತ್ತು ಮುನಸಿಪಾಲಿಟಿಗಳ ಅಧಿಕಾರ ಮಿತಿಯು ಕಡಿಮೆಮಾಡಲ್ಪಟ್ಟಿದೆ. ಪ್ರಾಥಮಿಕ ಶಿಕ್ಷಣದ ಯೋಜನೆಯೂ ಇದರಲ್ಲಿ ಒಳಗೊಳ್ಳುತ್ತದೆ. ಹಿರಿಯರಿಗೆ ಓದುವದರಲ್ಲಿ ಚಿಕ್ಕ ಮಕ್ಕಳ [illegible] ನೆರವು ದೊರೆಯುವಂತೆ ಈ ಯೋಜನೆಯು [illegible] ಜಾರಿಯಲ್ಲಿ ತರಲಾಗುವದು.

ಮುಂಬಯಿ ಸರಕಾರವು ಸಭೆಯ [illegible] ಎರಡು ಗೊತ್ತುವಳಿಗಳನ್ನು [illegible] ಅಧ್ಯ [illegible] ಲೀಗದ ಸದಸ್ಯರೊಬ್ಬರು ಕೆ [illegible] ತೆರೆಯುತಿಲ್ಲ. [illegible] ಎತುಂಪಾಯಿತು. [illegible] ಗೆ ಹೋಗಿ ಕತ್ತಲೆ [illegible] ಮನು ಜಟ್ಟನೆ [illegible] ಯಲ್ಲಿ ಕೇಳಿತು. ಚಿನ್ನ

ಮೈಸೂರು ಮಹಾರಾಜರ ಘೋಷಣೆ

೧೯೪೮ ಜುಲೈಯಲ್ಲಿ ಹೊಣೆಗಾರ ಸರಕಾರದ ಸ್ಥಾಪನೆ

ಮೈಸೂರಿನ ಮಹಾರಾಜರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ ರವರು ತಾ ೨೪ ರಲ್ಲಿ ಘೋಷಣೆ ಹೊರಡಿಸಿ ಹೊಣೆಗಾರ ಸರಕಾರ ಸ್ಥಾಪಿಸುವದಾಗಿ ಸಾರಿದ್ದಾರೆ. ಅರಸರ ಮತ್ತು ಅರಸುಮನೆತನದ ವೆಚ್ಚ, ಹಿಂದುಸ್ಥಾನ ಸರಕಾರದ ಸಂಬಂಧ, ಅಲ್ಪಸಂಖ್ಯಾಕರ ಹಕ್ಕುಗಳ ರಕ್ಷಣೆ, ಹೈಕೋರ್ಟ ಆಡಳಿತೆ, ಸೈನ್ಯ ಮೊದಲಾದ ಕಾದಿಟ್ಟ ವಿಷಯಗಳನ್ನು ಬಿಟ್ಟು ಉಳಿದವುಗಳನ್ನೆಲ್ಲ ಲೋಕನಿಯುಕ್ತ ಮಂತ್ರಿಗಳಿಗೆ ಒಪ್ಪಿಸಲಾಗುವದು.

೧೯೪೮ ಜುಲೈ ೧ ರಿಂದ ಹೊಸ ರಾಜ್ಯಘಟನೆ ಅಸ್ತಿತ್ವದಲ್ಲಿ ಬರುವಂತೆ ಯೋಗ್ಯ ಸಮಯದಲ್ಲಿ ಕಾಯಿದೆ ಮಾಡುವದಾಗಿ ಅವರು ಘೋಷಿಸಿರುವರು.

ಸಲಹೆ ಸಮಿತಿಯು ಸೂಚಿಸಿದ ಮೂಲಭೂತ ತತ್ವಗಳನ್ವಯ ಹೊಸ ಘಟನೆಯನ್ನು ರಚಿಸಿ, ತಮಗೆ ಒಪ್ಪಿಸಲು ದಿವಾಣರಿಗೆ ಅಪ್ಪಣೆ ಕೊಟ್ಟಿರುವರು.

ಶ್ರೀಮನ್ಮಹಾರಾಜರು ಘೋಷಣೆಯ ಕೊನೆಯಲ್ಲಿ ಪ್ರಜೆಗಳನ್ನುದ್ದೇಶಿಸಿ, ಈಗ ಕೊಟ್ಟಿರುವ ಅವಕಾಶದ ಸದುಪಯೋಗವನ್ನು ಎಂದಿನಂತೆ ಮಾಡಿಕೊಂಡು, ಸರ್ವರ ಹಿತಕ್ಕಾಗಿ ಸಹಕಾರ ಸೌಹಾರ್ದದಿಂದ ಕಾರ್ಯ ಪ್ರವೃತ್ತರಾಗುವರೆಂದು ಹಾರೈಸಿದ್ದಾರೆ.

ಶ್ರೀ ಮನ್ಮಹಾರಾಜರ ಘೋಷಣೆಯ ಪೂರ್ತಿಪಾಠ ಇಂತಿರುತ್ತದೆ:—

"ಈ ಘೋಷಣೆಯ ಮೊದಲನೇ ಪರಿಶಿಷ್ಟದಲ್ಲಿ ಹೇಳಲಾದ ಮೂಲಭೂತ ತತ್ವಗಳನ್ವಯ ರಚಿಸಲಾದ ಮತ್ತು ಪ್ರಜಾಪ್ರತಿನಿಧಿಗಳ ಇಚ್ಛೆಗನುಸಾರವಾಗಿ ಎರಡನೇ ಪರಿಶಿಷ್ಟದಲ್ಲಿ ಸೂಚಿಸಲಾದ ಕಾದಿಟ್ಟ ವಿಷಯಗಳನ್ನು ಹೊರ್ತುಪಡಿಸಿ ಉಳಿದವುಗಳ ಆಡಳಿತಾಧಿಕಾರವನ್ನು ನನ್ನ ಮಂತ್ರಿಗಳಿಗೆ ಒಪ್ಪಿಸುವಂಥ ಘಟನಾ ಮಸೂದೆಯನ್ನು ನನ್ನ ಒಪ್ಪಿಗೆಗಾಗಿ ಒಪ್ಪಿಸಬೇಕೆಂದು ಸೂಚಿಸುತ್ತೇನೆ. ಮತ್ತು ಘಟನೆಯನ್ನು ರಚಿಸುವಲ್ಲಿ ಕಾಯಿದೆಮಂಡಲದಿಂದ ಚುನಾಯಿತವಾದ ಸಮಿತಿಯ ಹಾಗೂ ಅವಶ್ಯವೆನಿಸಿದ ಇನ್ನಿತರ ಘಟನಾ ಪಂಡಿತರ ಮತ್ತು ತಜ್ಞ ಮಂಡಲಗಳ ಸಲಹೆ ಪಡೆಯಬೇಕೆಂದು ನಾನು ದಿವಾಣರಿಗೆ ವಿಧಿಸುತ್ತೇನೆ.

ಹೊಣೆಗಾರ ಸರಕಾರ ಸ್ಥಾಪಿಸುವ ಹೊಸ ಘಟನೆ ೧೯೪೮ ಜುಲೈ ಒಂದನೇ ದಿನಾಂಕದಿಂದ ಅಸ್ತಿತ್ವದಲ್ಲಿ ಬರುವಂತೆ ಯೋಗ್ಯ ಸಮಯದಲ್ಲಿ ಕಾಯಿದೆಯನ್ನು ಹೊರಡಿಸಬೇಕೆಂದು ನನ್ನ ಇಚ್ಛೆ ಇರುವದು.

ನನ್ನ ಪ್ರಜೆಗಳು, ಹೊಣೆಗಾರಿಕೆಯ ಅರಿವಿನಿಂದ ಹಾಗು ಪರಸ್ಪರ ಸಹನೆ, ಸೌಹಾರ್ದ ಭಾವನೆಯಿಂದ ತುಂಬಿರುವವರಾಗಿ, ಈಗ ಕೊಡಮಾಡಿದ ಅವಕಾಶದ ಸದುಪಯೋಗ ಮಾಡಿಕೊಂಡು ಸಂಸ್ಥಾನದ ಸಕಲ ಪ್ರಜಾವರ್ಗದ ಸುಖ, ಶಾಂತಿ ಮತ್ತು ಸಂಪದಭಿವೃದ್ಧಿಗಾಗಿ ಹಾಗೂ ಸಿಂಹಾಸನಕ್ಕೆ ನಿಷ್ಠರಾಗಿ ಸಂಸ್ಥಾನದ ಅಕಲಂಕ ಕೀರ್ತಿಯನ್ನು ಕಾಪಾಡಿಕೊಂಡು ಹೋಗುವಂತೆ ಕಾರ್ಯ ಮಾಡುವರೆಂದು ನನಗೆ ವಿಶ್ವಾಸವಿರುವದು.

ಈ ಮಹಾಕಾರ್ಯದಲ್ಲಿ ಆ ದಯಾಘನನ ಆಶೀರ್ವಾದ ಮತ್ತು ಮಾರ್ಗದರ್ಶನ ಸಕಲರಿಗೂ ಲಭ್ಯವಾಗಲಿ ಮತ್ತು ಅಂಥ ಮಾರ್ಗದರ್ಶನದಲ್ಲಿ ಈಗ ಯೋಜಿಸಲಾದ ಸೂಚನೆಗಳು ನನ್ನ ಸಮಸ್ತ ಪ್ರಜಾವರ್ಗದ ಸುಖ ಶಾಂತಿ ಸಾಧಿಸುವದಕ್ಕೆ ಸಹಾಯವಾಗಲಿ."

ಪರಿಶಿಷ್ಟ ೧

ಘೋಷಣೆಗೆ ಜೋಡಿಸಿದ ಮೊದಲನೇ ಪರಿಶಿಷ್ಟ ಹೀಗಿದೆ:—

(೧) ಕಾಯಿದೆ ಮಂಡಲಗಳು ಎರಡು ಇರಬೇಕು. ಒಂದು, ನನ್ನ ಪ್ರೀತ್ಯಾಸ್ಪದ ಪಿತಾಮಹರಾದ ಕೀರ್ತಿಶೇಷ ಸರ್ ಚಾಮರಾಜೇಂದ್ರ ಒಡೆಯರ್ ಬಹದ್ದೂರರವರು ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆ. ಎರಡನೆಯದು, ನ್ಯಾಯವಿಧಾಯಕ ಸಭೆ. ಪ್ರಜಾಪ್ರತಿನಿಧಿ ಸಭೆಯ ಸದಸ್ಯರನ್ನೆಲ್ಲ ಪ್ರಾದೇಶಿಕ ಮತದಾರ ಸಂಘಗಳಿಂದ ಚುನಾಯಿಸಲಾಗುವದು. ನ್ಯಾಯವಿಧಾಯಕ ಸಭೆಯ ಕೆಲವು ಸದಸ್ಯರನ್ನು ಇನ್ನು ಮುಂದೆ ನಿಶ್ಚಯಿಸಲಾಗುವ ಮತದಾರ ಸಂಘಗಳಿಂದ ಆರಿಸಲಾಗುವದು. ಕೆಲವರನ್ನು ಸರಕಾರದವರು ನಾಮಕರಣ ಮಾಡುವರು.

(೨) ಪ್ರಜಾಪ್ರತಿನಿಧಿ ಸಭೆಯು ಆಯ್ವೆಗೆ ಪ್ರೌಢ ಮತಾಧಿಕಾರ ಕೊಡಲಾಗುವದು, ಅದರ ಚುನಾವಣೆ ಸಂಘಗಳು ಬಹುಸಂಖ್ಯಾಕ ಸದಸ್ಯರ ಸ್ಥಾನ ಸಂಘಗಳಾಗುವವು. ಮತ್ತು ಮತದಾನ ಪರಿಣಾಮವು ನ್ಯಾಯಕವಾಗಿ (ಕ್ಯುಮುಲೇಟಿವ್ಹ) ವಾದಿನಲ್ಲಿ ಕೆಲ 'ಲಿಮಿಟೆಡ್ ವ್ಹೋಟ್) ಪದ್ಧತಿ ಪದ್ಧ ಈ ಪ್ರ...

(೩) ಬಹುಸಂಖ್ಯಾಕ ಸದಸ್ಯರ ಮತದಾರಸಂಘಗಳಲ್ಲಿ ದಲಿತ ವರ್ಗ ಹಾಗೂ ಇತರ ಅಲ್ಪಸಂಖ್ಯಾಕರಿಗಾಗಿ ಕೆಲವು ಸ್ಥಳಗಳನ್ನು ಕಾದಿಡಲಾಗುವದು.

(೪) ಎರಡನೇ ಪರಿಶಿಷ್ಟದಲ್ಲಿ ಕಾಣಿಸಲಾದ ವಿಷಯಗಳನ್ನು ಬಿಟ್ಟು ಉಳಿದವುಗಳ ಆಡಳಿತದಲ್ಲಿ ನನಗೆ ಸಹಾಯ ಮಾಡಲು ಮತ್ತು ಸಲಹೆ ಕೊಡಲು ಕಾಯಿದೆ ಮಂಡಲದ ಲೋಕನಿಯುಕ್ತ ಸದಸ್ಯರಿಂದ ಮಂತ್ರಿಮಂಡಲವನ್ನು ರಚಿಸಲಾಗುವದು.

(೫) ಕಾಯಿದೆ ಮಂಡಲದಲ್ಲಿಯ ರಾಜಕೀಯ ಪಕ್ಷಗಳ ಹಾಗೂ ಗುಂಪುಗಳ ಮುಂದಾಳುಗಳ ಸಲಹೆ ಪಡೆದು ಮಂತ್ರಿಗಳನ್ನು ಆರಿಸಲಾಗುವದು.

(೬) ಮಹತ್ವದ ಅಲ್ಪಸಂಖ್ಯಾಕ ವರ್ಗದ ಪ್ರತಿನಿಧಿಗಳಿಗೆ ಶಕ್ಯವಿದ್ದ ಮಟ್ಟಿಗೆ ಮಂತ್ರಿಮಂಡಲದಲ್ಲಿ ಸ್ಥಾನ ಕೊಡಲಾಗುವದು.

(೭) ಮಂತ್ರಿಮಂಡಲವು ಸಾಮೂಹಿಕ ಹೊಣೆಯಿಂದ ಕಾರ್ಯ ಮಾಡುವದು ಮತ್ತು ಕಾಯಿದೆ ಮಂಡಲಕ್ಕೆ ಸಾಮೂಹಿಕವಾಗಿ ಹೊಣೆಗಾರವಿರುತ್ತದೆ. ಪ್ರಜಾ ಪ್ರತಿನಿಧಿ ಸಭೆಯಲ್ಲಿ ಅವಿಶ್ವಾಸ ಗೊತ್ತುವಳಿ ಸ್ವೀಕೃತವಾದರೆ ಮಂತ್ರಿಮಂಡಲವು ರಾಜೀನಾಮೆ ಕೊಡಬೇಕು.

ಪರಿಶಿಷ್ಟ ೨

ಕಾದಿಟ್ಟ ಅಧಿಕಾರಗಳನ್ನು ಸೂಚಿಸುವ ಎರಡನೆ ಪರಿಶಿಷ್ಟ ಇಂತಿರುತ್ತದೆ—

೧) ಅರಸರ ಮತ್ತು ಅವರ ವಿಶೇಷಾಧಿಕಾರಿಗಳು, ಮೈಸೂರಿನ ರಾಜಮನೆತನ, ಸಿಂಹಾಸನದ ಉತ್ತರಾಧಿಕಾರ, ಅರಮನೆ ಮತ್ತು ಖಾಸಗಿ ವೆಚ್ಚ.

೨) ಸೇರ್ಪಡೆ ಪತ್ರದಲ್ಲಿ ಕಾಣಿಸಲಾದ ಹಿಂದುಸ್ಥಾನ ಸರಕಾರದ ಸಂಬಂಧ ಮತ್ತು ಅದರಲ್ಲಿಲ್ಲದ ಇತರ ಎಲ್ಲ ಘಟನಾ ಸಂಬಂಧಗಳು.

೩) ಹೈಕೋರ್ಟ. ಆ ನ್ಯಾಯಾಧೀಶರು, ಪಬ್ಲಿಕ್ ಸರ್ವ್ಹಿಸ ಕಮಿಶನ್ನದ ಚೇರಮನ್ ಮತ್ತು ಸದಸ್ಯರು ಹಾಗೂ ಆಡಿಟರ ಜನರಲ್ಲನ ನೇಮಕ.

೪) ಸೈನ್ಯ

೫) ಅಲ್ಪಸಂಖ್ಯಾಕರ ನ್ಯಾಯವಾದ ಹಕ್ಕುಗಳ ರಕ್ಷಣೆ.

೬) ಕಾಯಿದೆ ಮಂಡಲ ಸೇರಿಸುವದು ಮತ್ತು ವಿಸರ್ಜಿಸುವದು.

೭) ಚುನಾವಣೆಗಳ ಮೇಲ್ವಿಚಾರಣೆ, ಮಾರ್ಗದರ್ಶನ ಮತ್ತು ನಿಯಂತ್ರಣ.

೮) ಶೇಷಾಧಿಕಾರ ಹಾಗೂ ಘಟನೆ ಮುರಿವ ಪ್ರಸಂಗದಲ್ಲಿ ಆಡಳಿತ ನಿರ್ವಹಿಸುವ ವಿಶೇಷಾಧಿಕಾರ.

ಮುಂಬಯಿ ಶಾಸನ ಸಭೆಯ ಅಧಿವೇಶನದ ಕಾರ್ಯಕಲಾಪಗಳು

(೧೩ ನೇ ಪುಟದಿಂದ)

ಮುಸ್ಲಿಂ ಬಾಲಿಕೆಯರಿಗಾಗಿ ಹೈಸ್ಕೂಲುಗಳನ್ನು ತೆರೆಯಬೇಕೆಂಬ ಗೊತ್ತುವಳಿಯನ್ನು ವಿರೋಧಿಸಿ ಮುಖ್ಯ ಮಂತ್ರಿಗಳೇ ಮುಂತಾದವರು "ಪ್ರಜಾಪ್ರಭುತ್ವದಲ್ಲಿ ಎಲ್ಲರ ಹಿತಸಂಬಂಧಗಳು ಸಮಾನವಾಗಿರುವದರಿಂದ ಅಲ್ಪಸಂಖ್ಯಾಕರ ಹಿತಸಂಬಂಧಗಳು ಪ್ರತ್ಯೇಕ ಇರುವದಿಲ್ಲ" ಎಂದು ಉತ್ತರಿಸಿದ್ದಾರೆ. ಕೊನೆಗೆ ಬಹುಮತದಿಂದ ಈ ಗೊತ್ತುವಳಿಯು ಬಿದ್ದು ಹೋಯಿತು.

ಅದರಂತೆಯೇ ಆಹಾರ ಧಾನ್ಯಗಳ ಬೆಲೆಯನ್ನು ಏರಿಸುವ ಬಗ್ಗೆ ಬಂದ ಗೊತ್ತುವಳಿಯನ್ನು ಆಹಾರ ಸಚಿವರಾದ ಶ್ರೀ ದಿನಕರರಾವ ದೇಸಾಯಿಯವರು ವಿರೋಧಿಸಿ "ಈಗ ಗೊತ್ತುಪಡಿಸಿದ ಆಹಾರ ಧಾನ್ಯಗಳ ಬೆಲೆಯು ಯುದ್ಧ ಪೂರ್ವಕ್ಕಿಂತ ಮೂರು ಪಟ್ಟು ಇದ್ದು! ಇನ್ನು ಹೆಚ್ಚಿಗೆ ಏರಿಸುವದು ಅಸಾಧ್ಯ" ವೆಂದು ಹೇಳಿದ್ದಾರೆ.

ಕಾಳೀನದಿ ಹೈಡ್ರೊ ಇಲೆಕ್ಟ್ರಿಕ್ ಯೋಜನೆ ಮತ್ತು ನೀರಾನದಿಯ ಕಾಲುವೆಗೆ ಸಂಬಂಧಿಸಿದ ಯೋಜನೆಯ ಬಗ್ಗೆ ಒಂದು ಪೂರಕ ಬೇಡಿಕೆಯನ್ನು ಆರ್ಥಿಕ ಸಚಿವರಾದ ವೈಕುಂಠಲಾಲ ಮೆಹತಾರವರು ಮಂಡಿಸಿದ್ದಾರೆ.

ಇದಲ್ಲದೆ ಮಂತ್ರಿಗಳು ಹೊಸ ಮೋಟರ ಕಾರುಗಳನ್ನು ಕೊಳ್ಳುವದರ ಬಗ್ಗೆ, ಕಳ್ಳಪೇಟೆಯನ್ನು ಪತ್ತೆಹಚ್ಚುವ ಬಗ್ಗೆ, ನಿಯಂತ್ರಣ ಕಾಯದೆಯನ್ನು ಉಲ್ಲಂಘಿಸಿದ್ದಕ್ಕಾಗಿ ಹಾಕಿದ ಖಟ್ಲೆಯನ್ನು ಹಿಂತೆಗೆದುಕೊಳ್ಳುವ ಬಗ್ಗೆ ಕಡಿತದ ಸೂಚನೆಗಳು ಬಂದಿದ್ದುವು. ಇವೆಲ್ಲಕ್ಕೂ ಸರಕಾರವು ತೃಪ್ತಿಕರ ಉತ್ತರವನ್ನು ಕೊಟ್ಟಿದೆ.

ವ್ಯಾಪಾರ ಪ್ರಪಂಚ

ಮುಂಬಯಿ ಶೇರಪೇಟೆ

ಮುಂಬಯಿ ತಾ. ೨೪

ಸಂಘಿನ ಪರಿಸ್ಥಿತಿಯ ಮೂಲಕ ನಿನ್ನೆ ದಿನ ಪೇಟೆ ಸ್ವಲ್ಪ ಮಂದವಾಗಿಯೆ ಇದ್ದಿತು. ಟಾಟಾ ಸ್ಟೀಲ ಡೆಫರ್ಡ ೧೬೩೭ ರಿಂದ ಪ್ರಾರಂಭವಾಗಿ ೧೬೬೫ ರ ವರೆಗೇರಿ ೧೫೯೫ ಕ್ಕಿಳಿದಿದ್ದಿತು, ಅದರಂತೆ ಆರ್ಡಿನರಿಯಾ ೩೩೮.೮ ಕ್ಕೇರಿ ೩೨೮ ಕ್ಕಿಳಿಯಿತು. ಜವಳಿ ಧಾರಣೆಯಲ್ಲಿಯೂ ಇದೇ ಬಗೆಯ ಇಳಿತವು ಕಂಡು ಬಂದಿತು. ಇಂದು ಮಾತ್ರ ಧಾರಣೆ ಏರಿದವು. ಇಂದಿನ ಧಾರಣೆ ಕೆಳಗಿನಂತಿವೆ. ಟಾಟಾಡೆಫರ್ಡ ೧೬೪೫—೦—೦, ಟಾಟಾ ಸ್ಟೀಲ ಆರ್ಡಿನರಿ ೩೩೭—೦—೦ ಇಂಡಿಯನ ಆಯರ್ನ ೩೦—೧೫—೦ ಅಸೋಸಿಯೇಟೆಡ್ ಸಿಮೆಂಟ ೧೬೦—೦—೦ ಫಿನ್ಲೆ ೨೯೭—೦—೦ ಕೊಹಿನೂರ ೫೫೪—೦—೦ ಡಾಯಿಂಗ ೧೦೭೦—೦—೦, ನಾಗಪೂರ ೧೮೬—೪—೦ ಸ್ವದೇಶಿ ೫೯೪—೦—೦ ಗೋಕಾಕ ೩೩೧—೦—೦ ಸೆಂಚ್ಯುರಿ ೮೨—೮—೦ ಸಿಂಪ್ಲೆಕ್ಸ ೨೩೭—೦—೦.

ಬ್ಯಾಂಕುಗಳು

ಸೆಂಟ್ರಲ್‌ಬ್ಯಾಂಕ ೮೭—೦—೦ ಇಂಪೀರಿಯಲ್ ಬ್ಯಾಂಕ ೨೨೧೫—೦—೦ (ಪೂರ್ಣಸಂಚಿತ) ಇಂಪೀರಿಯಲ್‌ಬ್ಯಾಂಕ ೫೫೫—೦—೦ (ಅರೆಸಂಚಿತ) ರಿಝರ್ವ್‌ಬ್ಯಾಂಕ ೧೧೬—೦—೦, ಬ್ಯಾಂಕ ಆಫ್ ಇಂಡಿಯಾ ೨೩೭—೦—೦.

೩% (೧೯೩೬) ೧೦೧—೨—೦ ೩½% (೧೯೪೭–೫೦) ೧೦೦—೮—೦ ೩% (೧೯೫೭) ೧೦೨—೧೦—೦

ಚಿನ್ನ–ಬೆಳ್ಳಿ

ಬೆಳ್ಳಿ ತಯಾರಿ ೧೬೮.೪.೦ ವಾಯದಾ ೧೬೭–೧೨–೦ ಬಂಗಾರ ತಯಾರಿ ೧೧೧—೬—೦ ವಾಯದಾ ೧೧೧—೨—೦

ಎಣ್ಣೆ ಕಾಳು

ಶೇಂಗಾ ೧೬೦–೦–೦ ಹೊಸಬೆಳೆ ೧೩೮—೦—೦ ಅಗಸಿ ೩೦–೧೪–೦ ಎಣ್ಣೆ ೧೯–೨–೦.

ಅರಳೆ

ಜಾನೇವರಿ ೪೬೬–೧೨–೦ ಮಾರ್ಚ ೪೭೨–೮–೦ ಹೆಚ್ಚಿನಧಾರಣೆ ೪೬೭–೧೦–೦ ಯಿಂದ ೪೬೭–೧೨–೦ ಇದ್ದಿತು. ಕಡಮೆ ಎಂದರೆ ೪೬೪–೧೨ ರಿಂದ ೪೬೫–೦–೦ ರ ವರೆಗಿದ್ದಿತು.

ಸಾಂಗಲಿ ಪೇಟೆ

ಅರಿಷಣ ಹೇರು	೧೦೦–೧೧೦
ಮೆಣಸಿನಕಾಯಿ ಹೇರು	೮೦–೧೦೦
ಶೇಂಗಾ ಖಂಡಿ	೧೨೮

ಹುಬ್ಬಳ್ಳಿ

ಹೊಸ ಜಯವಂತ ಹತ್ತಿ ನಂ.	೧	೨೫೫–೨೭೦
,,	೨	೨೪೦–೨೫೦
,,	೩	೨೨೫–೨೩೫
ಹಳೇ ಜಯವಂತ ಹತ್ತಿ		೨೭೦–೨೮೦
ಜಿನ ಹೊಸದು		೧೭೫–೧೯೦
ಜಿನ ಹಳೇದು		೨೦೦–೨೦೨
ಡಬಲರೋಲ		೧೬೦–೧೭೦
ಸಾಜಿನ		೧೫೫–೧೭೦

ದಕ್ಷಿಣ ಕನ್ನಡ

ಕಳೆದ ತಾ ೬-೭ ರಲ್ಲಿ ಜಿಲ್ಲೆಯ ಕಾಸರಗೋಡು, ಪುತ್ತೂರು, ಬಂಟ್ವಾಳ, ಮೂಲ್ಕಿ, ಉಡುಪಿ, ಕುಂದಾಪುರ, ಕಾರ್ಕಳ, ಮಂಗಳೂರು ಮುಂತಾದೆಡೆಗಳಲ್ಲಿ ಆರೋಗ್ಯಮಂತ್ರಿ ಶ್ರೀ ಎ. ಬಿ. ಶೆಟ್ಟರು ಕೃಷಿಮಂತ್ರಿ ಶ್ರೀ ಮಾಧವ ಮೆನನರೂ ಸಂಚರಿಸಿದರು. ಆಗ ಅವರಿಗೆ ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಮುಂದಟ್ಟು ಮಾಡಿಕೊಡಲಾಯಿತು.

ಮಂಗಳೂರು ಕೇಂದ್ರ ಮೈದಾನಿನಲ್ಲಿ ಕಮ್ಯುನಿಸ್ಟರ ಆಶ್ರಯದಲ್ಲಿರುವ ಹಾಗೂ ಸೋಶಿಯಲಿಸ್ಟರ ಆಶ್ರಯದಲ್ಲಿರುವ ಬೀಡಿ ಮಜೂರರ ಸಂಯುಕ್ತಸಭೆಯೊಂದು ಜನಾಬ್ ಬಿ. ಕಾಸೀಮ ಸಾಹೇಬರ ಅಧ್ಯಕ್ಷತೆಯಲ್ಲಿ ಜರುಗಿ ಅವರ ಮುಷ್ಕರದ ಪರಿಣಾಮವಾಗಿ ಸರಕಾರ ಕೊಟ್ಟ ನಿರ್ಣಯದಂತೆ ಮಾಲೀಕರು ವರ್ತಿಸುವಂತೆ ಸರಕಾರ ಕ್ರಮಕೈಗೆ ದುಕೊಳ್ಳಬೇಕೆಂದು ಮುಂತಾಗಿ ಶ್ರೀಗಳಾದ ಬಿ. ವಿ. ಕಕ್ಕಿಲ್ಲಾಯ ಮತ್ತು ಕೆ. ಎಸ್. ಕಾರಂತ ಇವರು ಮಾತನಾಡಿದರು.

ಗುರುಪುರದಲ್ಲಿ ತೌಳವ ಮಹಾಸಭೆಯ ಕಾರ್ಯನಿರ್ವಾಹಕ ಸಮಿತಿಯ ಸಭೆ ಶ್ರೀ ಬಿ. ಟಿ. ರೈಗಳ ಅಧ್ಯಕ್ಷತೆಯಲ್ಲಿ ಜರುಗಿ ನವಂಬರ ಕೊನೆಯಲ್ಲಿ ಮಹಾಸಭೆ ಕರೆಪ್ಪದು, ಕೇರಳಕ್ಕೆ ತುಳುನಾಡನ್ನು ಸೇರಿಸಬೇಕೆಂಬವಾದವನ್ನು ವಿರೋಧಿಸುವುದು. ಭದ್ರಗಿರಿ ಹೊಳೆಯಿಂದ ಚಂದ್ರಗಿರಿ ಹೊಳೆಯ ವರೆಗಿನ ಪ್ರದೇಶವನ್ನು ಕರ್ನಾಟಕಕ್ಕೆ ಸೇರಿದ ತುಳುನಾಡು ಜಿಲ್ಲೆಯೆಂದು ಕರೆಯಬೇಕು ಎಂಬ ಗೊತ್ತುವಳಿಗಳು ಪಾಸಾದವು.

ಆರೋಗ್ಯಮಂತ್ರಿಗಳಾದ ಶ್ರೀ ಎ. ಬಿ. ಶೆಟ್ಟರು ಮತ್ತು ಕೃಷಿಮಂತ್ರಿಗಳಾದ ಶ್ರೀ ಮಾಧವ ಮೆನನರು ಉಡುಪಿಯಲ್ಲಿ ಇಂದಿನ ಆಹಾರದ ನಿರಾಶಾಜನಕ ಪರಿಸ್ಥಿತಿಯನ್ನು ವಿವರಿಸಿ ಜನಜೀವನಕ್ಕೆ ಅತ್ಯಗತ್ಯವಾದ ಅಕ್ಕಿಯನ್ನು ಒದಗಿಸಬೇಕೆಂದು ಉಡುಪಿಯ ತಾಲೂಕು ಕಚೇರಿಯಲ್ಲಿ ಕೂಡಿದ ವರ್ಗದಾರ, ರೈತ ಹಾಗೂ ಆಹಾರ ಸಮಿತಿಯ ಸದಸ್ಯರ ಸಭೆಯಲ್ಲಿ ಬಿನ್ನವಿಸಿಕೊಂಡರು.

ಉಡುಪಿಯ ಶ್ರೀಕೃಷ್ಣ ಸನ್ನಿಧಿಯಲ್ಲಿ ಪರ್ಯಾಯ ಶಿರೂರುಮಠದ ಶ್ರೀ ಲಕ್ಷ್ಮೀಂದ್ರತೀರ್ಥಸ್ವಾಮಿಗಳವರ ನೇತೃತ್ವದಲ್ಲಿ ಶ್ರೀಕೃಷ್ಣನ ಅವತಾರ ದಿನವು ತಾ. ೭ ರಲ್ಲಿ ಆಚರಿಸಲ್ಪಟ್ಟವು.

ಉಡುಪಿಯ ಶ್ರೀಅಧಮಾರು ಸ್ವಾಮಿಗಳು, ಶ್ರೀ ಪುತ್ತಿಗೆ ಸ್ವಾಮಿಗಳು ಮುಂತಾದ ಮಾನ್ಯರು ಪಲಿಮಾರು ಮಠದ ಹೆಬ್ಬಾಗಿಲಲ್ಲಿ ತಾ. ೭ ರಲ್ಲಿ ಶ್ರೀಕೃಷ್ಣನ ಉದಾತ್ತ ಧ್ಯೇಯಗಳ ಬಗ್ಗೆ ಮಾತನಾಡಿದರು.

ಒರಿಯಡ್ಕದ ಆರ್ಯಸಮಾಜಮಂದಿರದಲ್ಲಿ ಶ್ರೀ ಪಿ. ಲಕ್ಷ್ಮೀನಾರಾಯಣ ನೆಲ್ಲಿಯವರ ಅಧ್ಯಕ್ಷತೆಯಲ್ಲಿ ಶ್ರೀಕೃಷ್ಣಜಯಂತಿ ಜರುಗಿತು.

ಪುತ್ತೂರಿನ ಕಾಂಗ್ರೆಸ ಸಮಿತಿಯ ಸಭೆಯು ತಾ. ೪ ರಲ್ಲಿ ಶ್ರೀ ಕೆ. ವೆಂಕಪ್ಪಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿ ಶ್ರೀ ಕೆ. ರಾಮಕುಡ್ವರನ್ನು ಕಾರ್ಯದರ್ಶಿಗಳನ್ನಾಗಿ ಆರಿಸಿತು.


ಶ್ರೀಕೃಷ್ಣ ಜಯಂತ್ಯುತ್ಸವವು ಪುತ್ತೂರಿನ ಶ್ರೀ ಮಹಾಲಿಂಗೇಶ್ವರ ದೇವಾಲಯದಲ್ಲಿ ಸಾಂಗವಾಗಿ ನೆರವೇರಿತು.

ಕಾಸರಗೋಡಿನ ಬಿ. ಇ. ಎಂ ಹೈಸ್ಕೂಲ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ತಾ. ೯–೯–೪೭ ರಲ್ಲಿ ಮೈಸೂರಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ನಿಧನ ಹೊಂದಿದ ವಿದ್ಯಾರ್ಥಿಗಳ ಬಗ್ಗೆ ಅನುತಾಪ ಸೂಚಿಸಲು ಒಂದು ವಿಶೇಷ ಸಭೆ ನಡೆಯಿತು. ಸಭಾಂತ್ಯದಲ್ಲಿ ಮೈಸೂರು ಸತ್ಯಾಗ್ರಹದಲ್ಲಿ ನಿಧನ ಹೊಂದಿದ ವಿದ್ಯಾರ್ಥಿಗಳಿಗೆ ಆತ್ಮಶಾಂತಿ ದೊರಕಲೆಂದು ಪ್ರಾರ್ಥಿಸಿ ಎರಡು ನಿಮಿಷ ಮೌನವ್ರತ ಆಚರಿಸಲಾಯಿತು.

ಪೆರಡಾಲದಲ್ಲಿ ಸ್ಥಳೀಯ ವಿದ್ಯಾರ್ಥಿ ಕಾಂಗ್ರೆಸಿನವರು ತಾ. ೫–೯–೪೭ ರಲ್ಲಿ "ಮೈಸೂರು ವಿದ್ಯಾರ್ಥಿಗಳ ದಿನ" ವನ್ನು ಆಚರಿಸಿದರು. ಕಲ್ಯಾಣಪುರದ ಶ್ರೀ ಕೃಷ್ಣರಾಯರು ಅಧ್ಯಕ್ಷತೆ ವಹಿಸಿದ್ದರು.

ಕುಂಬಡಾಜೆ ಗ್ರಾಮದ ಮವ್ವಾರು ಎಲಿಮೆಂಟರಿ ಶಾಲೆಯಲ್ಲಿ ತಾ.೪–೯–೪೭ ರಲ್ಲಿ ಹೆತ್ತರಕೂಟ ಸೇರಿತು. ಅಂದು ಶ್ರೀ. ಪಿ. ರಾಮಕೃಷ್ಣರಾಯರು 'ಕಬೀರದಾಸ' ಎಂಬ ಹರಿಕತೆ ಮಾಡಿದರು.

ಈ ವಾರದ ಕಥೆ



ಸಾವು-ಸಂಭ್ರಮ

ಶ್ರೀ ಸೇವ ನೇಮಿರಾಜಮಲ್ಲ ಅವರಿಂದ

ಢಂ ಢಂ ಢಂ!... ಮದುವೆಯ ದಿಬ್ಬಣ. ಬಹಳ ಸಂಭ್ರಮ. ಮದುವಣಿಗ—ಮದುವಣಿಗಿತ್ತಿಯರು ಸಿಂಗರಿಸಿದ ಮೋಟಾರಿನಲ್ಲಿ ಹೂಮಾಲೆಗಳ ಮಧ್ಯ ತೂಕಡಿಸುತಿದ್ದಾರೆ. ಸೀರೆಗಳ ರಚರಪ ಶಬ್ದ. ಅತ್ತರು—ಪನ್ನೀರುಗಳ ಸುವಾಸನೆ. ಮತ್ತೆ ಆಭರಣಗಳು ಉಂಟಲ್ಲ; ಕೆಲ ಹೆಂಗಸರ ಕಿವಿ-ಮೂಗುಗಳಲ್ಲಿ ಆಕಾಶದ ನಕ್ಷತ್ರಗಳೇ ಬಂದಿಳಿದಿವೆಯೋ ಎಂಬಂತೆ ಕಾಣುತಿತ್ತು. ಗಂಡಸರಾದರೂ ಶೀವಿಯಲ್ಲಿ ಹಿಂದಿರಲಿಲ್ಲ; ಚೆನ್ನಾಗಿ ತಿದ್ದಿದ ಮೀಸೆ ಮತ್ತು ತಲೆಗೂದಲು; ಉಣ್ಣೆ-ರೇಶ್ಮೆಯ ಮೋಲಂಗಿಗಳು; ಜರಿತಾರಿ ಶಾಲುಗಳು.

ಸರಾಫಕಟ್ಟಿ- ಜವಳಿ ಅಂಗಡಿಗಳ ಜಾಹೀರಾತು ಅದು.

ಅಪ್ಪಿ ಮಗುವನ್ನು ಬದಿಯಲ್ಲಿ ಕುಳಿತುಕೊಳ್ಳಿಸಿ ಬಾವಿಯಿಂದ ನೀರೆಳೆಯುತಿದ್ದಳು. ಈ ಗಲಭೆ ಅವಳ ದೃಷ್ಟಿಯನ್ನು ತನ್ನೆಡೆ ಸೆಳೆಯಿತು. ಸರಿ ನೋಡಿದಳು.

ಮಗು ಕೇಕೇ ಹಾಕುತಿತ್ತು.

ಬಾರೂದು-ಸಿಡಿಮದ್ದುಗಳೇ ಸ್ಫೋಟನ. ಬಹು ಕಠಿನ ಸ್ವರ ಅವುಗಳದು. ಮಗುವಿಗೆ ಬಹುಶಃ ಗಾಬರಿ. ಅಲ್ಲಿ ಹೆದರಿಕೆಯಾಗಿರಬಹುದು. ಆದರೆ ಮನಸೆಳೆವ ದೃಶ್ಯ ಅದನ್ನು ಮಂಕು ಮಾಡಿತು. ನಮೂನಮೂನೆಯ ಬಣ್ಣಗಳು. ಆ ಮೇಲೆ ವಾದ್ಯ. ಇವೆಲ್ಲ ಅದರ ಗಾಬರಿಯನ್ನೋಡಿಸಿದುವು.

ಅಪ್ಪಿ ಮತ್ತೂ ನೋಡಿದಳು.

ಮದುವಣಿಗನ ಮುಖ ತುಸು ಕಾಣಬರುತ್ತಿತ್ತಾಗ.

ಮತ್ತೆ ಪುನಃ ಅವಳು ಮಗುವನ್ನೇ ಸಂತೈಸುವುದರಲ್ಲಿ ಬಿದ್ದಳು. ಅವಳ ಬೆನ್ನು ಹುರಿಯಲ್ಲಿ ಏನೋ ಒಂದು ತರಹದ ಮಿಂಚುಹರಿದಂತಾಯಿತು. ಮಗುವನ್ನಪ್ಪಿಕೊಂಡಳು.

“ಅಪ್ಪೀ ಅಪ್ಪೀ!”

ಒಳಹಿಗಿಂದ ಚೆನ್ನನ ಕರೆ ಬಂತು. ಒಂದು ಕೈಯಲ್ಲಿ ಮಗು, ಇನ್ನೊಂದು ಕೈಯಲ್ಲಿ ನೀರಿನ ಕೊಡಪಾನವನ್ನೆತ್ತಿಕೊಂಡು ಮನೆಯೊಳಗೆ ಹೋದಳು.

“ಅಪ್ಪೀ ಇವತ್ತು ರಾಯರಲ್ಲಿ ಮದುವೆ. ನಾನು ಹೋಗುತ್ತೇನೆ. ಮಗುವನ್ನು ಕರೆದುಕೊಂಡು ಹೋಗಲೋ? ಎಂದು ಚಂದವಾದ ಉಡಿಗೆಗಳನ್ನು ಪೆಟ್ಟಿಗೆಯಿಂದ ರಿಯುತಿದ್ದಾಗ. ಚೆನ್ನ ಕೇಳಿದ.

ಅಲ್ಪ ತುಸು ಹೊತ್ತು ಮಾತನಾಡಲಿಲ್ಲ. ಆ ಮೇಲೆ ತುಸು ಮೊರಗು ಸ್ವರದಲ್ಲಿ ಅಂದಳು;

“ನೀವು ಬೇಕಾದರೆ ಹೋಗಿ. ಮಗು ನನ್ನನ್ನು ಬಿಟ್ಟಿರಲಾರದು.”

‘ಹಾಂ. ನಿನಗೂ ಬರಬೇಕೆಂದಿದೆಯೋ ?” ಎಂದು ಚೆನ್ನ ವಿನೋದದಲ್ಲಿ ಆಡಿದ.

“ನನಗೇಕೆ ಕೂಲಿ ಹೆಂಗಸು ಬರುವುದು? ನಾನು ಬರಲಾರೆ. ನೀವು ಹೋಗಿ” ಎಂದು ವ್ಯಂಗ್ಯವಾಗಿ ನುಡಿದಳು.

ಚೆನ್ನ ಮತ್ತೇನೂ ಆಡಲಿಲ್ಲ. ತನಗೆ ಸೈನ್ಯದಲ್ಲಿರುವಾಗ ಸಿಕ್ಕಿದ ಅಂದದ ಪೋಷಾಕುಗಳನ್ನೆಲ್ಲ ಧರಿಸಿ, “ಹೋಗಿ ಬರುತ್ತೇನೆ” ಎನ್ನುತ್ತ ಅವನು ಹೋಗಿಯೇ ಬಿಟ್ಟ.

ಅಪ್ಪಿ ಆಗ ಬಿಸುಸುಯ್ದಳು.

ಗೋಡೆಯಲ್ಲಿ ನೇತಾಡಿಕೊಂಡಿರುವ ಅವಮಾಸಿದ ಸೀರೆ ಅಲ್ಲಿ ಕಾಣು... ...ಮಂಚ! ಮೇಲೆ ತೂಗಾಡಿಕೊಂಡಿದೆ. ಆ ಹಾಸಿಗೆ-ಥೂ ಎಂದು ಅಪ್ಪಿ ಆಚೆ ಉಗುಳಿದಳು.

ಏನು ಹಾಳು ನೆನಪು! ನೆನಪಿನ ಶಕ್ತಿ ತನಗೆ ಆ ಸಮಯದಲ್ಲಿರದಿರುತಿದ್ದರೆ ತಾನೆಷ್ಟು ಸುಖಿಯಾಗಿ ಬಾಳುತ್ತಿದ್ದೆ ಎಂದು ತೋರಿದವಳಿಗಾಗ.

ಹಾಯ್ ಮಗು! ಹ್ಹ! ಅದರ ಮುಖ! ಅವೇ ಕಣ್ಣುಗಳ ಅದೇ ತುಟಿ! ಹೌದು ಎಲ್ಲವೂ ಆ ಮಗುವಿನಂತೆಯೇ! ನೆನಪೇ!!

ಎದುರಿಗಿಲ್ಲಿದೆ, ತನ್ನ ಗಂಡ ಸೈನ್ಯದಲ್ಲಿರುವಾಗ ಕಳಿಸಿದ ಛಾಯಾಚಿತ್ರ. ಅದು ಇಟಲಿಯಿಂದ ಕಳಿಸಿದುದಂತೆ. ಹಾಗೆಂದು ಅವಳಿಗೆ ಹೇಳಿದ್ದರು. ಏನು ಪೋಷಾಕು ಅವನದು! ಮನೆಯಲ್ಲಿರುವಾಗ ಜುಟ್ಟು ಬೆಳೆಸಿ ತಿಂಗಳಿಗೊಮ್ಮೆ ಗಡ್ಡ ತೆಗಿಸಿ ಸೊಂಟಕ್ಕೊಂದು ವಸ್ತ್ರದ ತುಂಡನ್ನು ನೇತಾಡಿಸಿಕೊಂಡು ತಿರುಗುತ್ತಿದ್ದ ಮನುಷ್ಯ ಅವನು! ಅಪ್ಪಿ ಅವನನ್ನು ಮೊದಲಬಾರಿ ಕಂಡ ವೇಷವೂ ಅದೇ. ಆದರೆ ಈಗ? ಬೆಳಿಗ್ಗೆ ಎದ್ದ ಹಿಂದಿನಂತೆ ತಂಗಳನ್ನದ ನೀರು ಕುಡಿಯಲಾರ. ಹಾಸಿಗೆಯಿಂದೇಳುವಾಗಲೇ ಬಿಸಿ ಬಿಸಿ ಚಹ ತಯಾರಾಗಬೇಕು. ಆ ಮೇಲೆ ಕ್ಷೌರ. ವಸ್ತ್ರಗಳನ್ನು ಪ್ರತಿದಿನ ತೊಳೆಯಬೇಕು. ಅವನೀಗ ತುಂಬ ಮಾರ್ಪಾಟು ಹೊಂದಿದ್ದಾನೆ. ಅಪ್ಪಿಗೆ ಹಿಂದೆ ಅವನಲ್ಲಿದ್ದ ತುಸು ತಾತ್ಸಾರ ಭಾವನೆ ಮಾಯವಾಗಿದೆ.

ಕುಡಿಯುವುದು ಮಾತ್ರ ಈಗ ಹೆಚ್ಚು. ಒಂದೊಂದು ದಿನ ರಾತ್ರಿ ಹೊರಳಾಡಿಕೊಂಡೇ ಬರುವನು. ಒಂದೊಂದು ದಿನ ಅವಳನ್ನು ಕಠಿನವಾಗಿ ಶಿಕ್ಷಿಸುವನು.

ಏನಿದ್ದರೂ ಅವನೀಗ ಒಳ್ಳೆಯವನಾಗಿರುವನೆಂಬುದರಲ್ಲಿ ಅಪ್ಪಿಗೆ ಸಂಶಯವಿರಲಿಲ್ಲ. ಅವನ ಪ್ರೇಮದ ವಿಕಾಸ ಅವಳಿಗೆ ಈಗೀಗ ಸ್ಪಷ್ಟ ಹೊಳೆಯುತಿತ್ತು. ತಾನವನನ್ನು ಹಿಂದೆ ತಾತ್ಸಾರದಲ್ಲಿ ಕಾಣುತ್ತಿದ್ದುದಕ್ಕೆ ಅವಳಿಗೆ ಪಶ್ಚಾತ್ತಾಪವಾಗದಿರುತ್ತಿದ್ದಿಲ್ಲ. ಈಗ ಅವಳಿಗೆ ಪೂರ್ಣ ಅರ್ಪಣ.

ಇಷ್ಟಾದರೂ . . . .

ಒಂದು ಘಟನೆ ಇತ್ತು. ಇವಳದನ್ನು ಮರೆತು ಬಿಡಲು ಸಾಧ್ಯವಿರುತ್ತಿದ್ದರೆ ಅವಳ ಮತ್ತು ಚೆನ್ನನ ಮನಸ್ಸು ಹಾಲು—ನೀರಿನ ಹಾಗೆ ಆಗುತ್ತಿತ್ತು. ಅದನ್ನು ಮಾತ್ರ ಅವಳು ಮರೆಯಬೇಕಾಗಿದ್ದರೆ ಅವಳನ್ನೇ ಅವಳು ಮರೆಯಬೇಕು.

ಬೇಂಡ್ ವಾದ್ಯಗಳ ಸ್ವರ ಜೋರು ಜೋರಾಗಿ ಕೇಳಿ ಬರುತ್ತಲೇ ಇದೆ. ಬಾರೂದು ತುಫಾಕಿಗಳ ಸ್ಫೋಟನಕ್ಕೂ ಕಡಿಮೆಯಿಲ್ಲ.

ಅಲೆಯಲೆಯಾಗಿ ಬಂದು ಸೇರುತ್ತಿದ್ದವು— ಅವಳೊಳಗೆ ಅಶಬ್ದಗಳು.

ಪುನಃ ಮಗು! ಉರುಟುರುಟು ಕೈಕಾಲುಗಳು ದುಂಡಗಾದ ಬೆಳ್ಳನ್ನ ಮುಖ ಒಳ್ಳೆ ಚುರುಕು. . .

ತನ್ನ ಗಂ?ಡ ಕಪ್ಪಗಿದ್ದಾನೆ. ಬೇರೆ ವಿಧದಲ್ಲೂ ಅವನಿಗೂ ಈ ಮಗುವಿಗೂ ಸಾಮ್ಯವೇ ಇಲ್ಲ.

ಅಪ್ಪಿಗೆ ಅದು ಈ ಮೊದಲೇ ಗೊತ್ತಿತ್ತು-

ಕಾಲಕಳೆಯುತ್ತಿತ್ತು. ಹಾಸಿಗೆ, ಮಂಚ, ಮಾಸಿದ ಸೀರೆ ಎಲ್ಲಕ್ಕಿಂತಲೂ ಮಿಗಿಲಾಗಿ ಮಗು- ಇವೆಲ್ಲ ಅಪ್ಪಿಯನ್ನೇ ನೋಡುತ್ತಿದ್ದುವು.

ಚೆನ್ನ ಇನ್ನೂ ಬಂದಿರಲಿಲ್ಲ.

ಅವನು ರಾಯರಲ್ಲಿ ಊಟ ತೀರಿಸಿ ತನ್ನ ಗೆಳೆಯರೊಡನೆ ಶರಾಬು ಅಂಗಡಿಗೆ ಸಾಗಿದ್ದ. ಮಾತನಾಡುತ್ತ ಮಾತನಾಡುತ್ತ ಸ್ವಲ್ಪ ಸ್ವಲ್ಪವೇ ಎಲ್ಲರೂ ಕುಡಿದರು. ಆಗ ಪುನಃ ರಾಯರ ಮದುವೆಯ ಸುದ್ದಿ ಬಂತು. ಎಲ್ಲರೂ ಔತಣವನ್ನು ಹೊಗಳುತ್ತಿದ್ದರು.

ರಾಯರಿಗೆ ಇದು ನಾಲ್ಕನೆಯ ಮದುವೆಯಂತೆ ಇಬ್ಬರು ಹೆಂಡಂದಿರು ಹಿಂದೆ ಸತ್ತಿದ್ದರಂತೆ. ಮೂರನೆಯವಳು ರಾಯರನ್ನು ತ್ಯಜಿಸಿ ಇನ್ನಾವನೊಡನೆಯೇ ಸಾಗಿದ್ದಳಂತೆ. ರಾಯರಿಗೆ ಈ ಮದುವೆಗೆ ಒಂದು ಸಾವಿರ ರೂಪಾಯಿ ವರದಕ್ಷಿಣೆ ಸಿಕ್ಕಿದೆಯಂತೆ. ಇವೆಲ್ಲ ಜನರಿಗೆ ಗೊತ್ತಿದ್ದ ವಿಷಯವೇ.

ಮತ್ತೆ ಅವರ ಪ್ರಾಯ ಸುಮಾರು ಐವತ್ತರ ಅಂದಾಜು. ಮದುಮಗಳು ಹದಿನೆಂಟು ವರುಷ ದಾಟಿರಲಿಕ್ಕಿಲ್ಲ. . . .

“ಏನು ಮುದುಕನಿಗೆ ಹುಚ್ಚು! ಇಷ್ಟು ಚಿಕ್ಕ ಪ್ರಾಯದ ಹುಡುಗಿಯನ್ನು ಅವರು ಪಡೆದರೆ ಅವಳೊಡನೆ ಜೀವನ ನಡೆಸಲು ಸಾಧ್ಯವೆ?” ಎಂದು ಶರಾಬಿನ ಕುಪ್ಪಿಯನ್ನು ಹಿಡಿದುಕೊಂಡು ಕಿಟ್ಟ ನಗುತ್ತಿದ್ದ.

ಸಂಕು ಜೋರಾಗಿ ನಗುತ್ತ “ಅವರಿಗೆ ನಡೆಸಲು ಸಾಧ್ಯವಿಲ್ಲದಿದ್ದರೆ ಊರಿನಲ್ಲಿ ಯುವಕರಿಗೇನಾದರೂ ಕ್ಷಾಮ ಬಂದಿಲ್ಲ. ಅವರ ಹಿಂದಿನ ಹೆಂಡತಿಯನ್ನು ಅವರಲ್ಲೇ ಕೆಲಸಕ್ಕಿದ್ದ ಮಾರಪ್ಪ ಹೇಗೆ ಹೊಡೆದುಕೊಂಡು ಓಡಿದ!” ಎಂದ.

ಚೆನ್ನ ಮೆಲ್ಲಮೆಲ್ಲನೆ ಶರಾಬು ಹೀರುತ್ತಿದ್ದ, ಅವನಿಗೆ ರಾಯರ ಮೇಲೆ ತುಂಬ ಅಭಿಮಾನ: ಅವನನ್ನು ಸೈನ್ಯಕ್ಕೆ ಸೇರಿಸಿದವರು ಅವರೇ ಅದುದರಿಂದ ಅವರ ಕಡೆಯಿಂದ ಒಂದೆರಡು ಮಾತನಾಡಬೇಕೆಂದೆಣಿಸಿ ಸುರುಮಾಡಿದ.

“ಕಿಟ್ಟಣ್ಣ, ದೊಡ್ಡವರ ವಿಚಾರ ನಮಗೇಕೆ? ರಾಯರು ಏನೂ ಮಾಡಬಲ್ಲರು. ಅವರು ತಮ್ಮ ಸಾಮರ್ಥ್ಯ ತಿಳಿಯದೆ ಹೀಗೆಲ್ಲ ಮಾಡಿಯಾರೆ?”

“ಸಾಕು ಚೆನ್ನ ನೀನು ಮೊನ್ನೆ ಬಂದವ ನಿನಗೆಲ್ಲ ಏನು ಗೊತ್ತು? ನಾವು ವರುಷಗಟ್ಟಲೆಯಿಂದ ಅವರ ವರ್ತನೆಯನ್ನು ಪರೀಕ್ಷಿಸುತ್ತಿದ್ದವರು” ಎಂದು ಸಂಕು ನಡುವಿನಲ್ಲಿ ಬಾಯಿಹಾಕಿದ.

“ಹೇಗಿದ್ದರೂ ಅವರನ್ನು ಅವಹೇಳನ ಮಾಡುವದು ನಮಗೆ ಸಲ್ಲ” ಚೆನ್ನ ಅಧಿಕಾರವಾಣಿಯಲ್ಲಿ ಹೇಳಿದ.

ಕಿಟ್ಟನ ತಲೆಯಲ್ಲಿ ಅಮಲೇರಿತ್ತು. ಸಂದರ್ಭ-ವಾತಾವರಣಗಳೆಲ್ಲ ಅವನಿಗೆ ಮರೆತು ಹೋಗಿದ್ದವು ಸರಿ. ಅವನು ಮಾತಿನ ಸರಣಿಯ ಕೀಲು ತೆಗೆದ.

“ಚೆನ್ನ, ನೀನು ಬಹಳ ಗೊತ್ತಿದ್ದವನಂತೆ ನಮ್ಮೊಡನೆ ಮಾತನಾಡಬೇಡ. ನಿನ್ನದನ್ನೇ ನಿನಗೆ ತಿಳಿಯುವ ಶಕ್ತಿ ಇಲ್ಲದಿದ್ದರೆ ನಾವೇನು ಮಾಡಲಿ? ರಾಯರು ನಿನಗೇನೆಲ್ಲ ಮಾಡಿರುವರೆಂದು ಮಾತ್ರ ನೀನು ತಿಳಿದಿಲ್ಲ.”

ಚೆನ್ನನ ಆತುರವನ್ನು ಕೆಣಕಿದಂತಾಯಿತು.

“ನನಗೇನಿಲ್ಲ ಮಾಡಿರುವರು ಹೇಳು. ನೋಡೋಣ ಕಿಟ್ಟಣ್ಣ.”

“ಹಾಂ. ನಿನ್ನನ್ನು ಯುದ್ಧಕ್ಕೆಂದು ಕಳಿಸಿದರು ಅವರಿಗಿದಕ್ಕೆ ಅಧಿಕಾರಿಗಳ ಪ್ರಶಂಸಾಪತ್ರವಲ್ಲದೆ ಹತ್ತು ರೂಪಾಯಿ ನಗದಾಗಿ ಬಹುಮಾನ ಸಿಕ್ಕಿದೆಯಂತೆ. ನೀನೇನೋ ಬದುಕಿ ಬಂದೆಯೆನ್ನುವ ಅದುದರಿಂದ ನಿನಗೆ ಈಗ ಅವರುವೇ ವರಹಾಗೆ ಕಾಣುತಿದ್ದಾರೆ. . . .

“ಆಗಲಿ. ಮತ್ತೆ?”

“ಮತ್ತೆ ? ಹೇಳಲೇ ಬೇಕೆ ? ಕೋಪವಿಲ್ಲವಷ್ಟೆ?”

ಚೆನ್ನನ ಆತುರಕ್ಕೆ ಮಿತಿಯಿಲ್ಲದಂತಾಯಿತು. ಶರಾಬು ಮೊದಲೇ ಅವನ ಚಿತ್ತಕ್ಷೋಭೆಯನ್ನು ಪರಮಾವಧಿಗೇರಿಸಿತ್ತು. “ಹೂಂ” ಎಂದು ಕಿಟ್ಟನನ್ನು ಒತ್ತಾಯಕ್ಕಿಡಿಸಿದ.

“ಇನ್ನು ಸಂಬಂಧಿಸಿದುದು ಅಪ್ಪಿಯನ್ನು ರಾಯರು ನಿನ್ನ ಸಂದೇಶಗಳನ್ನು ಕೊಡಲೆಂದೂ ಅವಳನ್ನು ಸಂತೈಸಲಿಕ್ಕೆಂದೂ ಆಗಾಗ್ಗೆ ಅಲ್ಲಿ ಹೋಗುತಿದ್ದರು. . . .”

ಚೆನ್ನ ಉತ್ಸುಕನಾಗಿ ಆಲಿಸುತ್ತಿದ್ದ.

“ಒಂದು ರಾತ್ರಿ. ನಾನು ಕೆಲಸ ಮಾಡಿ ಮನೆಗೆ ಮರಳುತಿದ್ದೆ. ನಿನ್ನ ಮನೆಯಲ್ಲಿ ಚೀರುವ ಧ್ವನಿ ಕೇಳಿತು. ನಾನು ಒಳಗೋಡಿದೆ. ಬಾಗಿಲು ಹಾಕಿತ್ತು. ಒಳಗೆ ರಾಯರ ಸ್ವರ. . . .”

ಚೆನ್ನ ಆಗ ಕೆಂಪೇರುತಿದ್ದ-

“ಮೂರು ದಿನಗಳಲ್ಲೇ ನಿನ್ನ ತಾಯಿ ಸತ್ತಳೆಂಬ ವರ್ತಮಾನ. ಏನೋ ಜ್ವರವೆಂದು ಸುದ್ದಿ. ಶವಕ್ಕೆ ಮೈತುಂಬ ವಸ್ತ್ರ ಹೊದ್ದಿಸಿದ್ದರು. ಆದರೂ ಒಂದೆಡೆ ರಕ್ತದ ಬೊಟ್ಟುಗಳು ಕಾಣುತಿದ್ದವು.”

“ಮತ್ತೆ ನೀನು ಬಂದೆ. ಬಂದ ಹಾಗೇ ಮರಳಿದೆ.”

ಚೆನ್ನ ಹೊರಡಲನುವಾಗಿದ್ದ-

“ನೀನು ಹೋದ ಆರುತಿಂಗಳಲ್ಲಿ ಅಪ್ಪಿ ಮುದ್ದಾದ ಗಂಡುಮಗುವನ್ನು ಹೆತ್ತಳು....”

ಇದಕ್ಕಿಂತ ಹೆಚ್ಚಿನ ಪುರಾವೆ ಚೆನ್ನನಿಗೆ ಬೇಕಾಗಿದ್ದಿಲ್ಲ: ಸಂಗತಿಗಳು ಅಷ್ಟು ಸ್ಪಷ್ಟ-ಸತ್ಯ-ಸಹಜವಿದ್ದುವು.

ದಾರಿಯಲ್ಲಿ ದೊಡ್ಡದೊಂದು ದೊಣ್ಣೆಯನ್ನು ಹಿಡಿದುಕೊಂಡು ಹೋಗುತಿದ್ದನವ. ಬೆವರು ಧಾರಾಕಾರವಾಗಿ ಸುರಿಯುತಿತ್ತು.

ಪ್ರಿನ್ಸಿಪಾಲ ಜೈಚವಾಳ ಶ್ರೀನಿವಾಸರಾಯರ ನಿಧನ



ಕನ್ನಡ ನಾಡಿನ ಕೆಲವರು ಹೆಸರಾದ ಹಿರಿಯರು ಈ ತಿಂಗಳಲ್ಲಿ ತೀರಿಕೊಂಡ ಸಮಾಚಾರಗಳು ಕನ್ನಡಿಗರಿಗೆ ದುಃಖವನ್ನು ತಂದಿವೆ. ಆ ಹಿರಿಯರಲ್ಲಿ ಶ್ರೀ. ಜೈಚವಾಳ ಶ್ರೀನಿವಾಸರಾಯರೂ ಒಬ್ಬರು. ಇವರು ಧೀಮಂತರು, ಉದಾರರು, ಹಿರಣವಂತರು. ಇಡೀ ಮುಂಬಯಿ ಇಲಾಖೆಯಲ್ಲಿ ಫುಟ್‌ಬಾಲ್ ಪಂದ್ಯಾಟದಲ್ಲಿ ‘ಡೆಕ್ಕನ್ ಟೈಗರ್’ ಎಂದು ಪ್ರಸಿದ್ಧಿಯನ್ನು ಪಡೆದವರು. ಖಾದಿಯ ಅನನ್ಯ ಭಕ್ತರು. ಖಾದಿಯ ಭಕ್ತರಾದಂದಿನಿಂದ ಕೊನೆಯ ಉಸಿರಿನ ವರೆಗೂ ಅದನ್ನು ತ್ಯಜಿಸಲಿಲ್ಲ. ಇವರ ದೇಶದಾಕ್ಷ್ಯ ಅತ್ಯುತ್ತಮವಾಗಿತ್ತು. ಕೊನೆಯವರೆಗೂ ತಮ್ಮ ಕ್ಷೇತ್ರದಲ್ಲಿ ಸತ್ಯದ ಪಕ್ಷಗಟ್ಟಿ ಹೋರಾಡಿದ ಹಿರಿಯರಲ್ಲಿ ಇವರೊಬ್ಬರು.

ಇವರಿಗೆ ೧೯೩೫ರಿಂದ ಕಷ್ಟಪರಂಪರೆಗಳು ಒಂದೊಂದಾಗಿ ಒದಗಿದವು. ಕೈಗೆ ಬಂದ ತುತ್ತು ಬಾಯಿಗೆ ಬರಲಿಲ್ಲ ಎಂಬಂತೆ ಇವರ ಹಿರಿಯ ಮಗ ಬಿ. ಎಸ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಪುಣೆಯಲ್ಲಿ ಕೆಲಸ ಮಾಡುತ್ತಿರುವಾಗ ಈಜಲು ಹೋಗಿ ತೀರಿಕೊಂಡ. ಮುಂದೆ ಎರಡು ವರ್ಷಗಳೊಳಗಾಗಿ ಇವರ ಪತ್ನಿಯವರು ತೀರಿಕೊಂಡರು. ಈ ಕಷ್ಟಪರಂಪರೆ ಮತ್ತು ಅನಾರೋಗ್ಯದೊಡನೆ ಇವರ ಪ್ರಕೃತಿ ದಿನದಿನಕ್ಕೆ ಕ್ಷೀಣವಾಗುತ್ತ ನಡೆದಿತ್ತು. ಆದರೆ ಅದು ಹೊರಗೆ ಕಂಡು ಬರುತ್ತಿದ್ದಿಲ್ಲ. ಸಂಧಿವಾತದ ಬಲಿಷ್ಠ ಆಕ್ರಮಣವಾದುದರಿಂದ ಹೋದ ವರುಷ ೧೫ ವರುಷ ಮುಂಚಿತವಾಗಿಯೆ ಸೇವಾನಿವೃತ್ತರಾಗಬೇಕಾಯಿತು. ಅಂದಿನಿಂದ ಇವರು ಸಂಧಿವಾತದಿಂದ ಬಳಲುತ್ತ ಇದೇ ಸಪ್ಟಂಬರ ೧೨ ನೆಯ ತಾರೀಖಿನ ದಿನ ವೈಕುಂಠವಾಸಿಗಳಾದರು. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದೂ ಅವರ ಮಕ್ಕಳ ವಿದ್ಯಾಭ್ಯಾಸವು ಸಸೂತ್ರವಾಗಿ ಸಾಗಿ, ತಂದೆಗಿಂತ ಮಕ್ಕಳು ಹೆಚ್ಚು ಕೀರ್ತಿಯನ್ನು ಪಡೆದು ದೀರ್ಘ ಆಯುಷ್ಯವಂತರಾಗಿ ಬಾಳಿ ನಮ್ಮ ನಾಡಿಗೆ ಕೀರ್ತಿಯನ್ನು ತರುವಂತಹವರಾಗಲೆಂದೂ ಪರಮಾತ್ಮನನ್ನು ಬೇಡುವುದೊಂದೇ ನಮ್ಮ ಇಂದಿನ ಕರ್ತವ್ಯವಾಗಿದೆ.

—ಶ್ರೀ. ಮುತ್ತುರಾವ ಉಮದಿಯವರಿಂದ

ಧ್ರುವ ಪ್ರದೇಶದ ಪಶ್ಚಿಮ ಭಾಗದಲ್ಲಿ ಚಿನ್ನ!

ಡಾಸನ್ ನಗರದಿಂದ ೬೦೦ ಮೈಲು ಉತ್ತರದಲ್ಲಿ ಚಿನ್ನದ ಗಟ್ಟಿಗಳಿವೆಯೆಂದು ಬ್ರಿಟಿಶ ಕೊಲಂಬಿಯದ ಫೋರ್ಟ್ ಸೆಂಟ್ ಜಾನಿನಿಂದ ಸುದ್ದಿ ಬಂದಿದೆ.

ಎಸ್ಕಿಮೋ ಜನರು ಸಮ್ಮದ ಚಿನ್ನದ ಗಣಿಗಳಿಂದ ನೇರವಾಗಿ ಉತ್ತರದಲ್ಲಿ ಘನರೂಪದಲ್ಲಿ ಚಿನ್ನವಿದೆಯೆಂಬ ಸುದ್ದಿಯನ್ನು ಅಕ್ಲವೀಕ ಎಂಬಲ್ಲಿಗೆ ಮುಟ್ಟಿಸಿದರು. ಗಣಿ ಎಂಜಿನಿಯರರೊಬ್ಬರು ಆ ಸುದ್ದಿ ನಿಜವೆಂದು ತಾವು ಪರೀಕ್ಷಿಸಿರುವುದಾಗಿ ಹೇಳುತ್ತಾರೆ. ಜುಲೈ ತಿಂಗಳಲ್ಲಿ ಆ ಹೇಳಿಕೆಯನ್ನು ಪರೀಕ್ಷಿಸಲು ವಿಮಾನದಿಂದ ೦° ಉಷ್ಣಾಂಶಕ್ಕಿಂತ ಕಡಿಮೆಯಿದ್ದ ಭಯಂಕರ ಶೀತ ಮಾರುತಗಳನ್ನೆದುರಿಸಿ ನಿರ್ದಿಷ್ಟ ಸ್ಥಳವನ್ನು ಅವರು ಸಂದರ್ಶಿಸಿದ್ದರಂತೆ.

ಮನೆ ಸಮೀಪಿಸಿದ. ಮನೆಯೊಳಗೆ ಬೆಳಕು ಕಾಣುತಿದ್ದಿರಲಿಲ್ಲ. ರಾತ್ರಿಯಾದುದರಿಂದ ಅಪ್ಪಿ ಮಲಗಿರಬಹುದೆಂದು ಯೋಚಿಸಿದ.

ಬಾಗಿಲು ತಟ್ಟಿದ. ಬಾಗಿಲು ತೆರೆಯಲಿಲ್ಲ. ಒಂದುಸಲಬಡಿದ; ಒಳಗಿನ ಕೀಲು ತುಂಡಾಯಿತು. ಒಳನುಗ್ಗಿ ಅಪ್ಪಿ ಮಲಗಿದ್ದಲ್ಲಿಗೆ ಹೋಗಿ ಕತ್ತಲೆಯಲ್ಲೇ ಒಂದೇಟು ಕೊಟ್ಟ. ಮಗು ಚಿಟ್ಟನೆ ಚೀರುವುದು ಮಗುಗೆಳೆಗೆಯಲ್ಲಿ ಕೇಳಿತು. ಚೆನ್ನ ಮನೆ ...

KARMAVEER 29-9-47

Reg. No. B. 3148

LICENCE No. 3
Licenced to Post without Prepayment

ಭವಿಷ್ಯ

ಜ್ಯೋತಿಷಿ:— ಕೃಷ್ಣಶಾಸ್ತ್ರಿ ಭಿಡೆ, ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ

ಸಪ್ಟಂಬರ ೨೯ ರಿಂದ ಅಕ್ಟೋಬರ ೫ ರ ವರೆಗೆ

ಮೇಷ

ಪ್ರಕೃತಿ ಮತ್ತು ಸ್ತ್ರೀ ಸುಖ ಸಾಧಾರಣವೆ. ಪ್ರಾಪಂಚಿಕ ಸಮಾಧಾನ ಕಡಮೆಯು. ಮಕ್ಕಳು ಮತ್ತು ಮಿತ್ರರಿಂದ ಉಪದ್ರವದ ವರ್ತನೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಮಾನ್ಯವೆ—ಪರಸ್ತ್ರೀ ಬಗ್ಗೆ ಕುಬುದ್ಧಿ ಬಂಧುವರ್ಗದವರಿಂದ ಬಹಳ ಸುಖ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ ತಾ. ೨, ೪, ೫ ಅನುಕೂಲ.

ವೃಷಭ

ಪ್ರಕೃತಿ ಉತ್ತಮ. ಕ್ವಚಿತ ಸ್ತ್ರೀಯೊಡತ್ವದ ಸಂಭವ. ಪ್ರಾಪಂಚಿಕ ತೊಂದರೆ ಬಹಳ ವಿಷಯಗಳಲ್ಲಿ. ರೋಖಸಂಗ್ರಹದಲ್ಲಿ ಹಾನಿ ಆದರೆ ಸ್ಥಾವರದಲ್ಲಿ ಹೆಚ್ಚಳ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ ಆದರೆ ಬುದ್ಧಿಯಲ್ಲಿ ಮತ್ಸರ ಮತ್ತು ಸಾಹಸಾಸಕ್ತಿಯ ತರಂಗ ಹೆಚ್ಚು ಪ್ರವಾಹದಲ್ಲಿ. ಸಜ್ಜನರ ನಿಂದೆ ಆದರೆ ದುರ್ಜನರ ಸ್ತುತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ವೆಚ್ಚ ಮತ್ತು ತೊಂದರೆ ಹೆಚ್ಚು ಆದರೆ ಭಾವೀ ಕಾಲದಲ್ಲಿ ಬಹಳ ಯಶಸ್ವಿಯಾಗುವೆನೆಂಬ ಬಹಳ ಖಾತ್ರಿ. ಪ್ರವಾಸಾದಿ ಕೆಲಸ ತೊಂದರೆಯದು. ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ ತಾ. ೨೮, ೩೦, ೧ ಅನುಕೂಲ.

ಮಿಥುನ

ಪ್ರಕೃತಿ ಅನುಕೂಲ ಆದರೆ ಹೆಂಡತಿ ಮತ್ತು ಪ್ರಾಪಂಚಿಕ ಸುಖ ತೊಂದರೆಯದು ಕುಟುಂಬದಲ್ಲಿಯ ಪ್ರತಿಯೊಬ್ಬರ ವರ್ತನೆ ತ್ರಾಸದಾಯಕ. ಸ್ಥಾವರದಲ್ಲಿ ಸ್ವಲ್ಪ ಅನುಕೂಲ ಆದರೆ ಪ್ರತಿಯೊಂದು ಮಾತಿನಲ್ಲಿ ಬೇಸರ ಬರುವಷ್ಟು ಪರಾಧೀನತೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮೊದಲು ಯಶಸ್ಸು ದೊರೆತಂತೆ ಎನಿಸಿದರೂ ಕೊನೆಯಲ್ಲಿ ಅನುಭವ ಮಾತ್ರ ತದ್ವಿರುದ್ಧ ಮಿತ್ರರಲ್ಲಿ ಕ್ಲೇಶ ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಆರ್ದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ ತಾ. ೩೦, ೧, ೩, ೪ ಅನುಕೂಲ.

ಕರ್ಕ

ಪ್ರಕೃತಿ ಸಾಧಾರಣವೆ. ಸ್ತ್ರೀ ಸುಖ ಅನುಕೂಲ. ಪ್ರಾಪಂಚಿಕ ಸಮಾಧಾನದ ಹೆಚ್ಚಳ. ಮಕ್ಕಳಲ್ಲಿ ಉನ್ನತಿ ಮಾತ್ರ ಅವರ ವರ್ತನೆ ಒಪ್ಪಿಗೆಯಾಗಲಿಕ್ಕಿಲ್ಲ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಬಹಳ ಉತ್ತಮ ಆದರೆ ಯೋಗ್ಯ ಕೆಲಸದಲ್ಲಿಯಾದರೂ ಬಹಳ ಹೆಚ್ಚು ಹಣವೆಚ್ಚ ಮಾಡುವ ಸರತಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಆದರೂ ಶತ್ರುಗಳ ಜೋರು ಇದ್ದದೆ. ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷಾದ ಮೊದಲಿನ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೩೦, ೧, ೨, ೪, ೪ ಅನುಕೂಲ.

ಸಿಂಹ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖವೂ ಅನುಕೂಲ. ಆದರೆ ಹೆಂಡತಿಯ ಪ್ರಕೃತಿಯು ಮತ್ತು ವಿಚಿತ್ರ ವಿಚಾರದ ಬಗ್ಗೆ ಬಹಳ ಚಿಂತೆ. ಸ್ಥಾವರದಲ್ಲಿ ಸ್ವಲ್ಪ ಹಾನಿ. ಹಿರಿಯರ ಒಡನೆ ವಿರೋಧ. ಮಹತ್ವದ ವಸ್ತುಗಳಿಗಿಂತ ಕ್ಷುಲ್ಲಕ ವಸ್ತುಗಳ ಬಗ್ಗೆ ಹೆಚ್ಚು ವ್ಯಯ. ಉದ್ಯೋಗದಲ್ಲಿ ಪ್ರಗತಿ ಬಹಳ ಕಡಮೆ. ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳದೇ ಹೆಚ್ಚು ಜೋರು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಹೆಚ್ಚು ಅನುಕೂಲ. ಮಘಾದ ಕೊನೆಯ ೩ ಮತ್ತು ಪೂರ್ವಾದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೩, ೪, ೫ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಪ್ರಾಪಂಚಿಕ ಸುಖ ಬಹಳ ಉತ್ತಮ. ಆದರೆ ಮಕ್ಕಳು ಬೇರೆಕಡೆಯಿಂದಲೇ ಸಂತೋಷಗೊಳ್ಳಬಲ್ಲರು. ಉದ್ಯೋಗದಲ್ಲಿ ಪ್ರತಿಷ್ಠೆ ಮತ್ತು ಲಾಭ ಬಹಳ ಉತ್ತಮ. ಆದರೆ ಆ ಬಗ್ಗೆ ಒಬ್ಬ ಮಿತ್ರನಿಗೆ ಬಹಳ ಮತ್ಸರ ಹುಟ್ಟುವಂತೆ ಕಾಣಬರುವದು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಸ್ವತಃ ಪಕ್ಷದ ಪ್ರಯತ್ನ ತೋರಿಸಲ್ಲಿ ಆದರೆ ಕೊನೆಯಲ್ಲಿ ಸ್ವತಃಸಿದ್ಧ ಯಶಸ್ಸು. ವಿಚಾರದಲ್ಲಿ ಮೋಸದಿಂದ ಸೋಲು ಬರಬಹುದು. ಪ್ರವಾಸಾದಿ ಕೆಲಸ ಹಿತದ್ದು. ಉತ್ತರಾದ ಕೊನೆಯ ೩ ಮತ್ತು ಹಸ್ತದ ಮೊದಲಿನ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೩೦, ೧, ೪, ೫ ಅನುಕೂಲ.

ತುಲಾ

ಪ್ರಕೃತಿ ಹೆಂಡತಿಯು ಮತ್ತು ಮಕ್ಕಳು ಮನೆಗಳ ಪ್ರಕೃತಿಯ ಬಗ್ಗೆ ಅಲ್ಪಸ್ವಲ್ಪ ಕುರಕುರ ಇದ್ದೀತು. ಪ್ರಾಪಂಚಿಕ ಸುಖ ತೊಂದರೆಯದು. ಉದ್ಯೋಗದಲ್ಲಿ ಪ್ರಗತಿ ಉತ್ತಮ. ಆದರೆ ಪ್ರತಿಷ್ಠೆ ಮತ್ತು ಲಾಭ ಸಾಧಾರಣವೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಹೊಟ್ಟೆಕಿಚ್ಚಿನ ವಿರೋಧ. ಪ್ರವಾಸ ಮತ್ತು ಪತ್ರವ್ಯವಹಾರ ಉತ್ತಮ. ಭೆಟ್ಟಿಯಲ್ಲಿ ವಿಶೇಷ ತೊಂದರೆ. ಸ್ವಾತಿಯ ಕೊನೆಯ ೨ ಮತ್ತು ವಿಶಾಖಾದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೮, ೨, ೪ ಅನುಕೂಲ.

ವೃಶ್ಚಿಕ

ಪ್ರಕೃತಿ ಉತ್ತಮ. ಹೆಂಡತಿ ಮತ್ತು ಪ್ರಾಪಂಚಿಕ ಸುಖ ಮನಸ್ಸಿನಂತೆ. ಉದ್ಯೋಗದಲ್ಲಿ ಪ್ರತಿಷ್ಠೆ ಉತ್ತಮ. ಆದರೆ ಪ್ರಗತಿಯಲ್ಲಿ ಮತ್ತು ಪ್ರತ್ಯಕ್ಷ ಲಾಭದಲ್ಲಿ ಕೆಲ ಅಡಚಣೆ. ವೆಚ್ಚ ಹೆಚ್ಚು ಆದರೆ ಅದರಲ್ಲಿಯ ಹೇತು ಸಾಧ್ಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಅನುರಾಧೆಯ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೩೦, ೧, ೪, ೫ ಅನುಕೂಲ.

ಧನು

ಪ್ರಕೃತಿ ಸಾಧಾರಣವೆ. ಸ್ತ್ರೀ ಸುಖ ಅನುಕೂಲ. ಆದರೆ ಮಕ್ಕಳಿಗೆ ಕ್ಲೇಶ. ಪ್ರಾಪಂಚಿಕ ಸುಖ ಸವಿಸ್ತರ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭವೂ ಉತ್ತಮ. ಆದರೆ ವೆಚ್ಚದ ಹೆಚ್ಚಿ ಅದಕ್ಕೂ ಮುಂದೆ. ಮಿತ್ರ ಸುಖ ಉತ್ತಮ. ಪ್ರವಾಸಾದಿ ಕೆಲಸ ಹಿತದ್ದು. ಮೂಲಾದ ಕೊನೆಯ ೩ ಮತ್ತು ಪೂರ್ವಾಷಾಢಾದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೨೮, ೩, ೪ ಅನುಕೂಲ.

ಮಕರ

ಪ್ರಕೃತಿಗೆ ಒಮ್ಮೊಮ್ಮೆ ಬಹಳ ಕ್ಲೇಶ. ಕದಾಚಿತ ಅಪಘಾತದಿಂದಲಾದರೂ ಅದರ ಸಂಭವ. ಹೆಂಡತಿಯ ಸುಖ ಅನುಕೂಲ. ಉಳಿದ ಪ್ರಾಪಂಚಿಕ ಸುಖ ಸಾಧಾರಣವೆ ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಅತಿ ಉತ್ತಮ ಆದರೆ ಮಿತ್ರತ್ವದಲ್ಲಿ ತೀವ್ರ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ ಪ್ರವಾಸಾದಿ ಕೆಲಸ ಸುಖಾವಹ. ಉತ್ತರಾಷಾಢಾದ ಕೊನೆಯ ೨ ಮತ್ತು ಶ್ರವಣದ ಮೊದಲಿನ ೩ ಚರಣಗಳಿಗೆ ತೊಂದರೆ ಕಡಮೆ ತಾ. ೩೦, ೧, ೪, ೫ ಅನುಕೂಲ.

ಕುಂಭ

ಪ್ರಕೃತಿಗೆ ಸ್ವಲ್ಪ ಕ್ಲೇಶ. ತಂದೆ-ತಾಯಿ ಜೀವಂತ ಇದ್ದರೆ ಅವರಿಗೂ ಕಿರುಕಳ ಕಾಯಿಲೆ. ಪ್ರಾಪಂಚಿಕ ಸುಖ ಉತ್ತಮ ಆದರೆ ಹೆಂಡತಿಗೂಡ ಬಹಳ ಮತಭೇದ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣವೆ ಬೌದ್ಧಿಕ ಕೆಲಸದಲ್ಲಿ ಬಹಳ ವಿಜಯ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಹೆಚ್ಚು ಅನುಕೂಲ. ಶತತಾರಿಕೆಯ ಕೊನೆಯ ೩ ಮತ್ತು ಪೂರ್ವಾಭಾದ್ರಪದದ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ ತಾ. ೩೦, ೧, ೩, ೪, ಅನುಕೂಲ.

ಮೀನ

ಪ್ರಕೃತಿ ಉತ್ತಮ ಹೆಂಡತಿ ಮತ್ತು ಪ್ರಾಪಂಚಿಕ ಸುಖ ಸಾಧಾರಣವೆ. ಆಪ್ತರಿಂದ ಮಾತ್ರ ವಿಶೇಷ ಗೌರವ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಉತ್ತಮ ಆದರೆ ವೆಚ್ಚವೂ ಅಂದಾಜಿಗಿಂತ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಅನುಕೂಲತೆ. ಮಿತ್ರತ್ವದಲ್ಲಿ ಸ್ವಲ್ಪ ವಿರೋಧ. ಪ್ರವಾಸ ಮತ್ತು ಪತ್ರವ್ಯವಹಾರಕ್ಕಿಂತ ಭೆಟ್ಟಿ ಉತ್ತಮ. ಉತ್ತರಭಾದ್ರಪದದ ಕೊನೆಯ ೩ ಮತ್ತು ರೇವತಿಯ ಮೊದಲಿನ ೨ ಚರಣಗಳಿಗೆ ತೊಂದರೆ ಕಡಮೆ ತಾ. ೩೦ ೧, ೪, ೫ ಅನುಕೂಲ.

ನ್ಯೂಯಾರ್ಕ— ಜಗತ್ಪ್ರಸಿದ್ಧ ವಿಜ್ಞಾನಿಗಳೂ ಗಣಿತಜ್ಞರೂ ಆದ ಪ್ರೊ. ಅಲ್ಬರ್ಟ ಐನ ಸ್ಟೀನರು 'ಯುನಾಯಿಟೆಡ್ ನೇಶನ್ಸ ವರ್ಲ್ಡ' ಪತ್ರಿಕೆಗೆ ಪತ್ರ ಬರೆದು ಮಾನವ ಜಗತ್ತು ನಾಮಶೇಷವಾಗುವ ಭೀತಿಯು ಉಂಟಾಗಿದೆಯೆಂದು ರಾಷ್ಟ್ರಸಂಘದ ಸಭೆಗೆ ಬಂದ ಪ್ರತಿನಿಧಿಗಳನ್ನು ಎಚ್ಚರಿಸಿದ್ದಾರೆ. ಅದರ ಜೊತೆಗೆ ರಾಷ್ಟ್ರಸಂಘದ ಪುನರ್ಘಟನೆಗೆ ಕೆಲವು ಸೂಚನೆ ಮಾಡಿದ್ದಾರೆ.

ಈ ಪತ್ರಿಕೆಯು ಹುಬ್ಬಳ್ಳಿ ಸಂಯುಕ್ತ—ಕರ್ನಾಟಕ ಮುದ್ರಣಾಲಯದಲ್ಲಿ 'ಲೋಕಶಿಕ್ಷಣ ಟ್ರಸ್ಟ್' ದ ಪರವಾಗಿ ಹ. ರಾ. ಮೋಹರೆಯವರಿಂದ ಮುದ್ರಿತವಾಗಿ ಪ್ರಕಟವಾಯಿತು.

ಸಾದರ ಸ್ವೀಕಾರ

೧. ಅಲ್ಲೋಲ

ಲೇಖಕರು:— ನಾ. ಕಸ್ತೂರಿ. ಪ್ರಕಾಶರು ಶಿವಮೊಗ್ಗಾ ಪ್ರಿಟಿಂಗ ಆಂಡ್ ಪಬ್ಲಿಶಿಂಗ್ ಕಂಪನಿ. ಲಿ. ಶಿವಮೊಗ್ಗಾ ಪುಟಗಳು ೧೧೦ ಬೆಲೆ ೧—೪—೦.

೨. ಕಲ್ಲೋಲ

ಲೇಖಕರು:— ನಾ. ಕಸ್ತೂರಿ. ಪ್ರಕಾಶನ ಶಿವಮೊಗ್ಗಾ ಪ್ರಿಂಟಿಂಗ ಆಂಡ್ ಪಬ್ಲಿಶಿಂಗ ಕಂಪನಿ ಲಿ. ಶಿವಮೊಗ್ಗಾ. ಪುಟಗಳು ೮೦ ಬೆಲೆ ೧-೦-೦.

೩. ಪುಟ್ಟ ತಮ್ಮ ಯಾರು?

ಲೇಖಕರು— ಹೊಯಿಸಳ. ಪ್ರಕಾಶನ ಶಿವಮೊಗ್ಗಾ ಪ್ರಿಂಟಿಂಗ ಆಂಡ್ ಪಬ್ಲಿಶಿಂಗ ಕಂಪನಿ ಲಿ. ಶಿವಮೊಗ್ಗಾ. ಪುಟಗಳು ೨೦ ಬೆಲೆ ೪ ಆಣೆ.

೪. ಅಥ ದಿವ್ಯ ರಥೋತ್ಸವಃ

ಲೇಖಕರು— ವೇ ಉಪನ್ಯಾಸರತ್ನ ಜಿ. ಎನ್. ಜಯತೀರ್ಥಾಚಾರ್ಯ. ಪ್ರಕಾಶಕರು ಶ್ರೀ ಮದ್ಭಾಗವತ ಸಪ್ತಾಹರತ್ನ. ಜಿ. ಎಸ್. ನರಸಿಂಹ ಮೂರ್ತ್ಯಾಚಾರ್ಯ ಶ್ರೀ ಚಂದ್ರಿಕಾಸದನ ನಂ. ೩೬೫ ಪೋಸ್ಟಾಫೀಸ ಬೀದಿ ಟಿ. ನರಸೀಪುರ. ಮೈಸೂರ ಡಿಸ್ಟ್ರಿಕ್ಟ. ಪುಟಗಳು ೩೦ ಬೆಲೆ ೦-೪-೦

೫. ಬೆಳಕಿನಬಾಳು

ಲೇಖಕರು— ಶ್ರೀ ದೇಶಪಾಂಡೆ ಮನೋಹರರಾಯರು ಎಂ. ಎ. ಪ್ರಕಾಶನ ಮಿಂಚಿನ ಬಳ್ಳಿ ಕಾರ್ಯಾಲಯ ಧಾರವಾಡ ಮತ್ತು (ಮನೋಹರ ಗ್ರಂಥ ಭಾಂಡಾರ ಧಾರವಾಡ.)

೬. ಎಚ್ಚೆತ್ತ ಹಿಂದುಸ್ತಾನ

(೧೮೫೭ ರ ಕ್ರಾಂತಿಕಾರಕ ಘಟನೆಗಳ ಸಿಂಹಾವಲೋಕನ) ಬರೆದವರು ಗಂಗಾಧರ ಅಧಿಕಾರಿ. ಪ್ರಕಾಶಕರು ಜನತಾ ಸಾಹಿತ್ಯ ಹುಬ್ಬಳ್ಳಿ- ಪುಟಗಳು ೩೬. ಬೆಲೆ ೪ ಆಣೆ.

೭. ಮೌಂಟಬ್ಯಾಟನ ಮಹಾತಂತ್ರ

(ಹಿಂದೀ ಕಮ್ಯುನಿಸ್ಟ ಪಾರ್ಟಿ ಗೊತ್ತುವಳಿ) ಪ್ರಕಾಶಕರು ಜನತಾ ಸಾಹಿತ್ಯ ಹುಬ್ಬಳ್ಳಿ. ಪುಟಗಳು ೩೦ ಬೆಲೆ ೦—೩—೦.

8. The War Effort of Binny's Mills Issued by Binny and Co. (Madras) Ltd.

೯. ಚಿತ್ರಕಲಾ ಪ್ರವೇಶ

ಬರೆದವರು ಶ್ರೀ ಗೋಪಾಲ ಶ್ರೀನಿವಾಸ ಪುದ್ದಾರ. ಪ್ರಕಾಶಕರು. ಡಾ. ಕಾಂತೇಶ ಕಮಲಾಪುರ, ಗೌ. ಕಾರ್ಯದರ್ಶಿ, ಕ. ವಿ. ವ. ಸಂಘ, ಧಾರವಾಡ. ಪುಟ ೬೨; ಬೆಲೆ ರೂ ೨.

೧೦. ಶ್ರೀ ಅರವಿಂದರು

ಲೇಖಕರು— ಸಿಂಪಿ ಲಿಂಗಣ್ಣ. ಪ್ರಕಾಶಕರು— ಬಿ. ಜಿ. ಸಂಕೇಶ್ವರ ಗದಗ ಬಸವೇಶ್ವರ ಪುಸ್ತಕ ಭಾಂಡಾರ ಹುಬ್ಬಳ್ಳಿ. ಪುಟಗಳು ೧೫೦— ಬೆಲೆ- ೧-೧೨-೦.

೧೧. ಶ್ರೀ ಮದ್ಭಗವದ್ಗೀತಾ

ಲೇಖಕರು— ಆರ್. ಎಸ್. ಸೂರ್ಯನಾರಾಯಣ ಎಮ್. ಎ. ಪ್ರಕಾಶಕರು— ಮೈಸೂರ ಪ್ರಿಂಟಿಂಗ ಮತ್ತು ಪಬ್ಲಿಶಿಂಗ ಹೌಸ. ಪುಟಗಳು— ೨೩೦ ಬೆಲೆ ೪—೦—೦.

ಗಾಂಧೀಜಿಯ ಕನಸಿನ ಆದರ್ಶ ಹಿಂದುಸ್ತಾನ

[ಮೊದಲನೆ ಪುಟದಿಂದ]

ಗಾಂಧೀಜಿಯ ಆದರ್ಶ

ಉಕ್ತ ಕಾರಣಗಳಿಂದ ಸಣ್ಣ ಸಣ್ಣ ಗುಂಪುಗಳು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸ್ಥಳೀಯ ಜನರ ಉಪಯೋಗಕ್ಕಾಗಿ ಉತ್ಪಾದಿಸಿ ಸ್ವಯಂಪೂರ್ಣವಾಗಿ ಅದನ್ನು ತಮ್ಮೊಳಗೆ ಸಮವಾಗಿ ಹಂಚಿಕೊಳ್ಳುವ ಗುಣ ಪದ್ಧತಿಯೊಂದನ್ನು ಯೋಜಿಸುವದು ಅತ್ಯವಶ್ಯ. ಈ ಆರ್ಥಿಕ ಗುಂಪುಗಳು ಸ್ವರಾಜ್ಯಾಧಿಕಾರವುಳ್ಳವು; ಪರಸ್ಪರಾವಲಂಬಿಗಳಾಗಿರುವವು ಮತ್ತು ಕೇಂದ್ರೀಕರಣ ತತ್ವವನ್ನನುಸರಿಸದೆ ಸಹಕಾರ ಸೇವಾ ತತ್ವಗಳನ್ನು ಅಧರಿಸಿ ಒಂದಕ್ಕೊಂದು ಸಂಬಂಧವನ್ನಿಟ್ಟುಕೊಳ್ಳುವವು. ಇದೇ ಮಹಾತ್ಮರು ಕಂಡ ಸಮಾಜ ದರ್ಶನ.

ಮೇಲಿನ ಪದ್ಧತಿಯ ಅಗತ್ಯವನ್ನು ಕೈಗಾರಿಕೆಯ ಕೇಂದ್ರೀಕರಣವಿದ್ದ ದೇಶಗಳ ನಡುವೆ ಆದ ಎರಡು ಮಹಾಯುದ್ಧಗಳು ಘೋಷಿಸುತ್ತವೆ. ಕೇಂದ್ರೀಕರಣವು ಸಂಕುಚಿತ ರಾಷ್ಟ್ರೀಯತೆಯ ಮೂಲಕ ಯುದ್ಧಕ್ಕೆ ಬೀಜವಾಗಿ ಪರಿಣಮಿಸುತ್ತದೆ.

ಭಾರತದ ನೇತೃತ್ವ

ಪರಂಪರಾಗತವಾದ ಆಧ್ಯಾತ್ಮಿಕ ನೇತೃತ್ವವುಳ್ಳ ಭಾರತವು ತಾನು ವಿವರ್ತಿಸಿಕೊಂಡ ಅಹಿಂಸಾ ತಂತ್ರದಿಂದ ಜಗತ್ತಿಗೆ ಮಾರ್ಗದರ್ಶಿಯಾಗಬಲ್ಲದು. ಭಾರತವು ಆಗಲೇ ಶಾಂತಿಯುತ ಸಹಕಾರ ತತ್ವದಮೇಲೆ ನಿಂತ ವಿಶ್ವಮಂಡಲದ ರಚನೆಗೆ ತಾನು ಕೃತಪ್ರತಿಜ್ಞವಾಗಿರುವೆನೆಂದು ಸಾರಿದೆ. ಅದುದರಿಂದ ಅದು ರಾಷ್ಟ್ರಗಳಲ್ಲಿ ನಿಃಶಸ್ತ್ರೀಕರಣವನ್ನಷ್ಟೇ ಅಲ್ಲದೆ ವಿಕೇಂದ್ರೀಕರಣವನ್ನೂ ಸ್ಥಾಪಿಸಲು ಸಹಕರಿಸಿ ತನ್ನಲ್ಲಿ ಶಾಂತವೂ ಸಹಕಾರ ಬುದ್ಧಿಯುಳ್ಳದ್ದೂ ಆದ ಸಮಾಜವನ್ನು ರಚಿಸಲು ಪ್ರಯತ್ನಿಸಬೇಕು. ನಾವು ಸಂರಕ್ಷಣೆಗಾಗಿ ಕೇಂದ್ರೀಕರಣಕ್ಕೆ ಅವಕಾಶಕೊಟ್ಟರೆ ಪ್ರಾಣಿಧರ್ಮಾನುಸಾರವಾಗಿ ಕೂಡ ಸ್ವಾತಂತ್ರ್ಯವನ್ನು ಸುರಕ್ಷಿತತೆ ಸಂರಕ್ಷಣೆಗಳನ್ನು ಮನ್ನಿಸುವದಿಲ್ಲ ಎಂದಾಗುತ್ತದೆ. ಹಿಂದುಸ್ತಾನದಲ್ಲಿ ಇದು ನಿಜವಲ್ಲ ವೆನಿಸುವದಾದರೆ, ಗಾಂಧೀಜಿಯ ತತ್ವಗಳನ್ನು ನಾವು ಅರಗಿಸಿಕೊಂಡದ್ದು ನಿಜವಾದರೆ ಅದು ಶಸ್ತ್ರಸಂಗ್ರಹದ ಹುರುಡಿನ ಓಟದಲ್ಲಿ ಸೇರದೆಂದು ಆಶಿಯಬಹುದು ಮತ್ತು ಹೊಸ ಹಾದಿಯೊಂದರಲ್ಲಿ ಕಾಲಿಟ್ಟು ಶಾಂತವಾದ ಹಾಗೂ ಸ್ವತಂತ್ರವಾದ ದರ್ಶನದಿಂದ ಜಗತ್ತಿಗೆ ಸ್ಫೂರ್ತಿ ಕೊಡಬಹುದು.